(ಸದನವರು 2.30 ಘಂಟೆಗೆ ಮುಂದೂಡಲ್ಪಟ್ಟು ಮತ್ತು 3-30 ಘಂಟೆಗೆ ಸೇರಲು ನಿಶ್ಚಯಿಸಿತು).

(ಸದನವು 3 ಗಂಟೆ 58 ನಿಮಿಷಕ್ಕೆ ಸಮಾವೇಶಗೊಂಡಿತು ಅಧ್ಯಕ್ಷರಾದ (ಶ್ರೀ ರಮೇಶ್‌ಕುಮಾರ್‌ರವರು) ಪೀಠವನ್ನು ಅಲಂಕರಿಸಿದರು)

(7) ನಿಯಮ 69ರ ಮೇರೆಗೆ

ವಿಷಯ: ಇಳಕಲ್‌ನಲ್ಲಿ ಮೆ:ಜೆಮ್ ಗ್ರಾನೈಟ್‌ರವರಿಗೆ ಸರ್ಕಾರಿ ಭೂಮಿಯನ್ನು ಗ್ರಾನೈಟ್ ಕ್ವಾರಿ ಮಾಡುವ ಸಲುವಾಗಿ ಕೊಟ್ಟಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಆಗುವ ನಷ್ಟ.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಇದೊಂದು ಗಂಭೀರವಾದ ವಿಷಯವಾಗಿದ್ದು ಇದರಿಂದ ಸರ್ಕಾರಕ್ಕೆ ಸುಮಾರು ಒಂದು ವರ್ಷಕ್ಕೆ ನೂರು ಕೋಟಿ ರೂಪಾಯಿಗಳಷ್ಟು ನಷ್ಟವಾಗುವ ರೀತಿಯಲ್ಲಿ ಸರ್ಕಾರವೇ ಒಂದು ವ್ಯವಹಾರ ನಡೆಸಿದೆ. ಇಳಕಲ್‌ನಲ್ಲಿರುವ ಗ್ರಾನೈಟ್ ಕ್ವಾರಿಂಗ್ ಬಗ್ಗೆ ಸದನದಲ್ಲಿ ಸಾಕಷ್ಟು ಬಾರಿ ಚರ್ಚೆಯಾಗಿದ್ದು, ನಂತರ ಹಲವಾರು ಪ್ರಯತ್ನಗಳನ್ನು ಮಾಡಿದರೂ ಕೂಡ ಕ್ವಾರಿಂಗ್ ಅನ್ನು ನಿಲ್ಲಿಸುವುದಕ್ಕಾಗಿಲ್ಲ. ಇವೊತ್ತು ಸರ್ಕಾರ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಿಂದ ಒಂದು ಆರ್ಡರ್ ಹೊರಡಿಸಿದೆ. ಜೆಮ್ ಗ್ರಾನೈಟ್‌ನವರಿಗೆ ಇಳಕಲ್‌ನಲ್ಲಿರುವ ಸರ್ವೆ ನಂ:293 ಮತ್ತು 296ಗಳ, 266 ಎಕರೆಗಳಲ್ಲಿ ಕ್ವಾರಿ ಮಾಡುವುದಕ್ಕೆ ಹತ್ತು ಕೋಟಿ ರೂಪಾಯಿಗಳನ್ನು ಕೊಟ್ಟು ಕ್ವಾರಿ ಮಾಡಿಕೊಳ್ಳಬಹುದೆಂದು ಸರ್ಕಾರ ಆರ್ಡರ್ ಮಾಡಿದೆ. ಅದರ ಎಲ್ಲಾ ವಿವರಗಳನ್ನು ಕೂಡ ನಾನು ಹೇಳುವುದಿಲ್ಲ.

Government Order No.CI 260 MML 96, Bangalore, dated 27-3-97. As the Order passed by the Deputy Commissioner, Bijapur, district, detailed in the preamble notifying that the land in survey No.293/BL and 296/LA belonging to the State Government continuous to be valid and that the ownership of the land is yet to be finally settled. Messrs. Gem Granites shall pay an amount Rs. 10.64 crores as deposit on or before 31.3.97. ಮತ್ತೆ ಇದೇ ಸುತ್ತೋಲೆಯಲ್ಲಿ ಏನು ಹೇಳಿದ್ದಾರೆಂದರೆ If the ownership of the land is decided by the Court in favour of the Government, then the society deposits shall be retained by the State Government; neither the Security Deposit shall be

refunded to M/s Gem Granites.

Further it says: subject to the above condition, in exercise of the powers conferred by the rule 56 KMM Rules, the Government are pleased to accord working permission to M/s Gem Granites for undertaking quarrying activities over an extent of 226 acres in Survey No.293/L/B/L and 296/LA, of palegundi village Hunugunda taluk of Bijapur District for a period of 2 years or until the case is finally decided by the court whichever is earlier. ಈ ಆರ್ಡ್‌ರ್‌ನ ಮೂಲಕ 10.60 ಕೋಟಿ ರೂಪಾಯಿಗೆ ಕ್ವಾರಿಯಿಂಗ್ ಮಾಡಲು ಅನುಮತಿ. ಈ ಅನುಮತಿ ಕಾನೂನುಬಾಹಿರವಾದ ಅನುಮತಿಯಾಗಿದೆ. ಹೈಕೋರ್ಟ್ ಸುಪ್ರಿಂಕೋರ್ಟ್ ಮಾಡಿರುವ ಆರ್ಡ್‌ರ್‌ಗೆ ವಿರುದ್ಧವಾಗಿ ಸರ್ಕಾರ ಆರ್ಡ್‌ರನ್ನು ಮಾಡಿ ಅವರಿಗೆ ಎರಡು ವರ್ಷಗಳವರೆಗೆ ಅಷ್ಟು ಹಣಕ್ಕೆ ಗಣಿಗಾರಿಕೆ ಮಾಡಲು ಅವಕಾಶ ಕೊಟ್ಟಿದ್ದಾರೆ. ಹೈಕೋರ್ಟ್ ಆರ್ಡ್‌ರ್‌ನಲ್ಲಿ 'The Hon'ble High Court in its interim order had allowed the petitioner to carry on quarrying operations subject to the payment of 25% of FOB value in the form of Bank guarantee to the satisfaction of the Director Mines and Geology ಎಂದು ಕ್ಲಿಯರ್ ಡೈರೆಕ್ಷನ್ ಕೊಟ್ಟಿದ್ದಾರೆ. ಅದರಂತೆ 25 ಪರ್‌ಸೆಂಟ್ ಎಫ್.ಓ.ಬಿ.ಆಗಿದ್ದರೆ ವರ್ಷಕ್ಕೆ ಅವರು ಸರ್ಕಾರಕ್ಕೆ 50 ಕೋಟಿ ಗ್ಯಾರೆಂಟಿ ಕೊಡಬೇಕಾಗಿತ್ತು. ಅದಿಲ್ಲದಿದ್ದರೆ ಸರ್ಕಾರವೇ ಏನಾದರೂ ಆ್ಯಕ್ಷನ್ ಕಮ್ ಸೇಲ್ ಮಾಡಿ ಗಣಿಗಾರಿಕೆ ಮಾಡಿದ್ದರೆ ಒಂದು ವರ್ಷಕ್ಕೆ ರಾಯಲ್ಟಿ ಸೇರಿ 100 ಕೋಟಿ ರೂ. ಹಣ ಬರುತ್ತಿತ್ತು. ಸರ್ಕಾರವೂ ಗಣಿಗಾರಿಕೆಯನ್ನು ಮಾಡಲಿಲ್ಲ ಮತ್ತು ಹೈಕೋರ್ಟ್‌ನಿಂದ 25 ಪರ್‌ಸೆಂಟ್ ಆಫ್ ಎಫ್.ಒ.ಬಿ. ಎಂದು ನಿರ್ದೇಶನವೇನು ಬಂದಿದೆ ಅದನ್ನು ಸಹ ಉಲ್ಲಂಘನೆ ಮಾಡಿದ್ದಾರೆ. ಎಫ್.ಓ.ಬಿ. ಎಂದರೆ freight on Board- ಹೈಕೋರ್ಟ್ ನಿರ್ದೇಶನದಂತೆ ಮಾಡಿದ್ದರೆ 50 ಕೋಟಿ ರೂಪಾಯಿಗಳು ಸರ್ಕಾರವೇ ಸ್ವತಃ ಗಣಿಗಾರಿಕೆ ಮಾಡಿದ್ದರೆ 100 ಕೋಟಿ ರೂಪಾಯಿಗಳು ಸರ್ಕಾರಕ್ಕೆ ಬರುತ್ತಿತ್ತು. ಆದರೆ ಅವೆರಡನ್ನೂ ಮಾಡದೆ 27-3-97ರಲ್ಲಿ ಸರ್ಕಾರದ ಜಿ.ಒ.ಒಂದನ್ನು ಮಾಡಿದ್ದಾರೆ. ಇದರಲ್ಲಿರುವ ಎಲ್ಲವನ್ನೂ ಸಮಯದ ತೊಂದರೆಯಿಂದ ಎಂದು ಹೇಳಲು ಹೋಗುವುದಿಲ್ಲ. ಡೆಪ್ಯುಟಿ ಕಮೀಷನರ್, ಬಿಜಾಪುರ ಅವರು ಮಾಡಿರತಕ್ಕ ಆರ್ಡ್‌ರ್‌ನ ಪ್ರಕಾರ ಆ ಭೂಮಿ ಸರ್ಕಾರದ ಭೂಮಿ. ಡೆಪ್ಯುಟಿ ಕಮೀಷನರ್ ಆರ್ಡ್‌ರ್‌ನ ಮೇಲೆ ಅವರು ಹೈಕೋರ್ಟ್‌ಗೆ ಅಪೀಲ್ ಹೋದರು, ಹೈಕೋರ್ಟ್ ಈ

ಆಡರ್ರ್‌ನ ಅಫ್‌ಹೋಲ್ಡ್ ಮಾಡಿ ಅವರು ಮಾಡಿರುವ ಆರ್ಡರ್ ಸರಿಯಾಗಿದೆ, ಅದು ಸರ್ಕಾರದ ಭೂಮಿಯೆಂದು ತೀರ್ಪುಕೊಟ್ಟರು. ಮತ್ತೆ ಜಮ್‌ಗ್ರಾನ್ಟೈಟ್‌ರವರು ಅದರ ಮೇಲೆ ಸುಪ್ರೀಂಕೋರ್ಟ್‌ಗೆ ಅಪೀಲ್ ಹೋದರು. ಆ ಸುಪ್ರೀಮ್‌ಕೋರ್ಟ್‌ನವರು ಕ್ಲಿಯರ್ ಆಗಿ ಏನು ಹೇಳಿದ್ದಾರೆಂದರೆ;

'We see no group to interfere with the impugned judgment of the High Court. We are of the view that the High Court has rightly came to the conclusion that in its jurisdiction under Article 226 and 227; it cannot go into the question whether the land in dispute was waste land or uncultivable land in terms of Section (7) of the Bombay Personal Inam Abolition Act, 1954. The High Court has further held that the petitioner may if so advised approach the Civil Court in this regard'. ಹೈಕೋರ್ಟ್‌ನವರು ಮಾಡಿರುವ ತೀರ್ಮಾನದಲ್ಲಿ ನಾವು ಮಧ್ಯ ಪ್ರವೇಶ ಮಾಡುವ ಅಗತ್ಯವಿಲ್ಲ, ಇದು ಸರ್ಕಾರದ ಭೂಮಿಯೆಂಬುದರಲ್ಲಿ ಯಾವುದೇ ಡಿಸ್‌ಪ್ಯೂಟ್ ಇಲ್ಲವೆಂದು ಹೇಳಿದರು. ಆ ರೀತಿ ಹೇಳಿದಮೇಲೂ ಸರ್ಕಾರ ಆ ಭೂಮಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ವಾಸ್ತವಿಕವಾಗಿ ಅಲ್ಲಿ 800 ಎಕರೆ ಭೂಮಿ ಇದೆ. ಇವರು ಲೆಕ್ಕದಲ್ಲಿ 266 ಎಕರೆಯಲ್ಲಿ ಗಣಿಗಾರಿಕೆ ಮಾಡಲು ಅವಕಾಶ ಕೊಟ್ಟಿರುವುದಾಗಿ ಹೇಳುತ್ತಾರೆ. ಆದರೆ ನಿಜವಾಗಿ 600 ಎಕರೆ ಯಲ್ಲಿ ಅವರು ಗಣಿಗಾರಿಕೆ ಮಾಡುತ್ತಿದ್ದಾರೆ. ಒಂದು ಕಡೆ ಸುಪ್ರೀಮ್ ಕೋರ್ಟ್‌ನ ತೀರ್ಪನ್ನು ಮತ್ತೊಂದು ಕಡೆ ಹೈಕೋರ್ಟ್‌ನ ತೀರ್ಪನ್ನು ಉಲ್ಲಂಘನೆ ಮಾಡಿ, ಹೈಕೋರ್ಟ್, ಸುಪ್ರೀಮ್ ಕೋರ್ಟ್‌ಗಳೆರಡೂ ಸಹ ಈ ಭೂಮಿ ಸರ್ಕಾರದ್ದೇ ಎಂದು ಹೇಳಿದ್ದರೂ ಸಹ ಸರ್ಕಾರ ಆ ಭೂಮಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ಪ್ರಯತ್ನ ಮಾಡಲಿಲ್ಲ. ಯಾವುದೇ ಜವಾಬ್ದಾರಿಯುತ, ಜನಹಿತ ಸರ್ಕಾರವಿದ್ದರೆ ಮೊದಲು ಆ ಕೆಲಸ ಮಾಡಬೇಕಾಗಿತ್ತು. ಹೈಕೋರ್ಟ್ ಹೇಳಿದ್ದ 25 ಪರ್‌ಸೆಂಟ್ ಎಫ್.ಓ.ಬಿ. ಬದಲಾಗಿ 10.60 ಲಕ್ಷಕ್ಕೆ ಎರಡು ವರ್ಷಕ್ಕೆ ಗ್ಯಾರೆಂಟಿ ತೆಗೆದುಕೊಳ್ಳಲು ಮಾಡಿದರು. ಮತ್ತು ಆ ಹಣದ ಡೆಫಾಸಿಟ್‌ನ್ನು ಬ್ಯಾಂಕ್‌ನಲ್ಲಿ ಮಾಡಿದರು. ಸರ್ಕಾರ ತನ್ನ ಜಿ.ಓ.ನಲ್ಲಿ ಏನು ಹೇಳಿದೆಯೆಂದರೆ 'If the ownership of the land is decided by the court in favour of the Government then the security deposit shall be retained by the State Government'. ಈ ರೀತಿ ಹೇಳಿದಮೇಲೆ ಆ ಬ್ಯಾಂಕ್ ಡಿಫಾಸಿಟ್‌ನ್ನು ತೆಗೆದುಕೊಳ್ಳಲು ಹೋದರೆ ಆ ಬ್ಯಾಂಕ್‌ನವರು ಸರ್ಕಾರಕ್ಕೆ ಹಣವನ್ನೇ ಕೊಡುವುದಿಲ್ಲ. ಇದರ ಬಗ್ಗೆ ನಮ್ಮ ಸರ್ಕಾರದ

ಮುಖ್ಯಕಾರ್ಯದರ್ಶಿಯವರು To the Secretary, Government of India, Banking Ministry of Finance, Department of Economic Affairsಗೆ ಪತ್ರವನ್ನು ಬರೆಯುತ್ತಾರೆ. ಏನೆಂದು ಬರೆಯುತ್ತಾರೆಂದರೆ;

The Hon'ble High Court of Karnataka in its interim order dated 1.9.95, directed the Ms.Gem Granites among other things, furnish a bank guarantee of Rs.22.5 crores being 25% of FOB value of the granites for export. In compliance of this, Messrs. Gem Granites furnishing bank guarantee through IOB, Esplande Branch, Chennai. The Hon'ble High Court of Karnataka in its final order dated 27.6.96, dismissed the Writ Petition filed by Messrs. Gem Granites and held that the action taken by the Deputy Commissioner, Bijapur was in order and the land belonging to the Government. Thereafter, the said company preferred Special Petition in the Hon'ble Supreme Court of India. The SLP filed by the Gem Granites was dismissed by the Hon'ble Supreme Court in its order dated 30.7.96 upholding the judgment of the Hon'ble High Court. As a result of this, the Director of Mines and Geology invoked the guarantee furnished by the Gem Granites on 9.9.97 asking the IOB to arrange the payment against the guarantee without any delay in accordance with the terms of the guarantee bond. The terms of guarantee provided that payment has to be made immediately after the guarantee invoked. Instead of making the payment immediately the Bank dragged its feet by indulging in avoidable correspondence and facilitated the private party to gain sufficient time to approach the Civil Court and obtain and order restraining the Bank from making payment. The officials have acted in a non-professional way ignoring the provisions of the guarantee, guarantee deed and have acted in partisan way

to favour a private party to the detriment of the State Government This is a serious matter which needs to be probed. In the meanwhile, we are advising all the departments of the State Government to avoid transaction with Indian Overseas Bank'.. ಅಂದರೆ ಹಣ ಬರಲಿಲ್ಲ. ಅದರ ಜೊತೆಗೆ, ಸರ್ಕಾರದ ಜಿಓನಲ್ಲಿ ಹೇಳುತ್ತಾರೆ, 56 ಕೆಎಮ್ಎಮ್ ರೂಲ್ಸ್ ಪ್ರಕಾರ ಗ್ರ್ಯಾನೈಟ್‌ಅನ್ನು ಕ್ವಾರಿ ಮಾಡಲಿಕ್ಕೆ ನಾವು ಅವರಿಗೆ ಕೊಟ್ಟಿದ್ದೇವೆ. ಎಂದು in the interest of public ಎಂದು ಹೇಳುತ್ತಾರೆ ಸನ್ಮಾನ್ಯ ಅಧ್ಯಕ್ಷರೆ, ರೂಲ್ಸ್ 56 ಕೆಎಂಎಂ ಏನು ಹೇಳುತ್ತದೆ ಅಂದರೆ, "Relaxation of Rules in Special cases-In case where the State Government is of the opinion that the public interest so requires," ಗ್ರ್ಯಾನೈಟ್ ಕೊಡುವುದರಲ್ಲಿ ಯಾವ ಪಬ್ಲಿಕ್ ಇಂಟರೆಸ್ಟ್ ಇನ್‌ವಾಲ್ವ್ ಆಗಿದೆ? ಇದರಿಂದ ಸರ್ಕಾರ ಏನು ಕೋಟ್ ಮಾಡುತ್ತದೆ ಎಂದರೆ ಪಬ್ಲಿಕ್ ಇಂಟರೆಸ್ಟ್‌ನಿಂದ ನಾವು ಜೆಮ್ಸ್ ಗ್ರ್ಯಾನೈಟ್‌ಗೆ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಆದರೆ 56 ಕೆಎಂಎಂ ರೂಲ್ಸ್ ಏನು ಹೇಳುತ್ತದೆ ಎಂದರೆ, "In case where the State Government is of the opinion that the public interest so requires, it may authorise the grant of Quarrying Lease or license for quarrying or reserve any land on such terms and conditions other than those prescribed in these Rules as the State Government may by order specify.." What is the public interest involved in giving license or permission for Gem Granites? This is a serious question. It is not only a serious question, but the Government has violated its own rules. ಇಷ್ಟೆಲ್ಲಾ ಆದ ಮೇಲೆ ಇವರು ಏನು ಹೇಳುತ್ತಾರೆ ಅಂದರೆ ಸೆಕ್ಷನ್, 8 ಬಿ ಮತ್ತು 8 ಎ ಅನ್ನು ಕೋಟ್ ಮಾಡುತ್ತಾರೆ. ಇದರ ಪ್ರಕಾರ ಕೊಡುತ್ತೇವೆ ಎಂದು ಹೇಳುತ್ತಾರೆ. ಸನ್ಮಾನ್ಯ ಅಧ್ಯಕ್ಷರೆ, ಸೆಕ್ಷನ್ 8 ಬಿ ಕೆಎಂಎಂ ರೂಲ್ಸ್ ಏನು ಹೇಳುತ್ತದೆ ಎಂದರೆ "Notifying the area for grant of lease by tender-cum-auction Not withstanding anything contained in these Rules the competent authority may, by notification, direct that the quarrying lease to quarry specified or non-specified minor mineral in any area belonging to the State Government, and available for grant as may be specified in such notification shall be granted by tender cum auction. ಅಂದರೆ ಸೆಕ್ಷನ್ 8 (ಬಿ) ಪ್ರಕಾರ

ಅವರಿಗೆ ಕೊಡುತ್ತಿದ್ದೇವೆ ಎನ್ನತಕ್ಕ ವಾದವನ್ನು ಇವರು ಮಾಡುತ್ತಿದ್ದಾರೆ. ಇದು ಸರ್ಕಾರ ತಾನೇ ಮಾಡಿರತಕ್ಕ ಕಾನೂನನ್ನು ಉಲ್ಲಂಘಿಸಿ, ಮತ್ತು ಕೋರ್ಟ್ ಕೊಟ್ಟಿರತಕ್ಕ ನಿರ್ದೇಶನವನ್ನು ಉಲ್ಲಂಘನೆ ಮಾಡಿದೆ. ಮತ್ತು ಸರ್ಕಾರಕ್ಕೆ ಬರಬೇಕಾದ ಹಣ ಸಾರ್ವಜನಿಕರ ಹಣ ಅದು, ಈ ಹಣವನ್ನು ಹತ್ತಾರು ಕೋಟಿ ರೂಪಾಯಿ, 10.6 ಕೋಟಿಗೆ ಸರ್ಕಾರ ಕೊಟ್ಟಿದೆ. ಆದರೆ ಹೈಕೋರ್ಟ್ ಆದೇಶದ ಪ್ರಕಾರ ಕೊಟ್ಟಿದ್ದರೆ ಇವರಿಗೆ ಕನಿಷ್ಟ 50 ಕೋಟಿ ಬರುತ್ತಿತ್ತು. ನಿಮ್ಮ ಕೆಎಂಎಂ 8 ಬಿ ಪ್ರಕಾರ ಆ್ಯಕ್ಷನ್ ಕಮ್ ಟೆಂಡರ್ ಮಾಡಿದ್ದರೆ ಒಂದು ವರ್ಷಕ್ಕೆ 100 ಕೋಟಿ ಸರ್ಕಾರಕ್ಕೆ ಹಣ ಬರುತ್ತಿತ್ತು. ಇವೆಲ್ಲವನ್ನೂ ಉಲ್ಲಂಘನೆ ಮಾಡಿ ಜೆಮ್ ಗ್ರಾನೈಟ್‌ನವರಿಗೆ ಯಾವ ಸಾರ್ವಜನಿಕ ಹಿತದೃಷ್ಟಿಯಿಂದ ಕೊಟ್ಟರು? ಮಾನ್ಯ ಅಧ್ಯಕ್ಷರೇ, ಸರ್ಕಾರಕ್ಕೆ ಬರಬೇಕಾಗಿದಂಥ ಹಣ ಇದನ್ನು ನಷ್ಟ ಮಾಡಲಿಕ್ಕೆ ಸರ್ಕಾರದಲ್ಲಿರತಕ್ಕ ಅಧಿಕಾರಿಗಳು, ಸಂಬಂಧಪಟ್ಟ ಮಂತ್ರಿಗಳು ಶಾಮೀಲಾಗಿ, ಇವತ್ತು ಸರ್ಕಾರಕ್ಕೆ ಬರಬೇಕಾಗಿದ್ದ 50 ರಿಂದ 100 ಕೋಟಿ ಹಣವನ್ನು ನಷ್ಟ ಮಾಡಿದ್ದಾರೆ. ಅದಕ್ಕೋಸ್ಕರ ಸಂಬಂಧಪಟ್ಟವರ ಮೇಲೆ ಸೂಕ್ಷ್ಮವಾದಂಥ ಕ್ರಮ ಅಂದರೆ ಇವರೆಲ್ಲರ ಮೇಲೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ನನಗೆ ನಂಬಿಕೆ ಇಲ್ಲ. ಅವರನ್ನು ಜೈಲಿಗೆ ಹಾಕಬೇಕು. ಇವತ್ತು ಅವರು ಸಾರ್ವಜನಿಕ ಹಣವನ್ನು, ಸರ್ಕಾರಕ್ಕೆ ಬರತಕ್ಕಂಥ ಹಣವನ್ನು ತಮ್ಮ ಮನಸ್ಸೋಇಚ್ಛೆಯಾಗಿ ಎಲ್ಲಾ ಕಾನೂನುಗಳನ್ನು ಉಲ್ಲಂಘನೆ ಮಾಡಿ, ಕೊಡುವುದಾದರೆ, ಈ ಸರ್ಕಾರಕ್ಕೆ ಯಾವ ನೈತಿಕವಾದಂಥ ಹಕ್ಕು ಇದೆ? ಸಂಬಂಧಫಟ್ಟ ಎಲ್ಲರನ್ನೂ ಜೈಲಿಗೆ ಹಾಕಬೇಕು. ಸರ್ಕಾರಕ್ಕೆ ಬರತಕ್ಕಂಥ ಸಾರ್ವಜನಿಕ ಹಣವನ್ನು ನೀವು ನಷ್ಟ ಮಾಡಿದ್ದೀರಿ, ಮಾನ್ಯ ಅಧ್ಯಕ್ಷರೇ ಇದರ ಜೊತೆಗೆ ಸರ್ಕಾರದ ಈ ಜಿವೋ ಮಾಡಬೇಕಾದರೆ ರೆವಿನ್ಯೂ ಇಲಾಖೆ, ಅರಣ್ಯ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಈ ಮೂರು ಇಲಾಖೆಗಳ ಜವಾಬ್ದಾರಿ ಇದರಲ್ಲಿ ಇದೆ. ಅಂಥ ಒಂದು ಸಂದರ್ಭದಲ್ಲಿ ತೀರ್ಮಾನ ಮಾಡತಕ್ಕ ಅಧಿಕಾರ ಇರುವುದು ಕ್ಯಾಬಿನೆಟ್‌ಗೆ ಮಾತ್ರ ಕ್ಯಾಬಿನೆಟ್ ಇದನ್ನು ತೀರ್ಮಾನ ಮಾಡಬೇಕು. ಎಂದು ಹೇಳಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರು, 28-10-96ರಂದು ಒಂದು ನೋಟ್ ಕಳುಹಿಸಿದ್ದಾರೆ. ಆದರೆ ಇದು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಆಗಲಿಲ್ಲ. ಅದಕ್ಕೆ ಬದಲಾಗಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಗಳು ಸಹಿ ಮಾಡಿರುವ ಜಿವೋ ಪ್ರಕಾರ ಇವರು ತೀರ್ಮಾನ ತೆಗೆದುಕೊಂಡಿದ್ದಾರೆ. ಕಾನೂನು ಪ್ರಕಾರ ಕ್ಯಾಬಿನೆಟ್ ತೆಗೆದುಕೊಳ್ಳಬೇಕಾದ ನಿರ್ಧಾರವನ್ನು ಒಂದು ಇಲಾಖೆಯ ಯಾವುದೋ ಕಾರ್ಯದರ್ಶಿ ತೆಗೆದುಕೊಂಡು ಸರ್ಕಾರದ ಬೊಕ್ಕಸಕ್ಕೆ ಹಣವನ್ನು ನಷ್ಟ ಮಾಡಿದ್ದಾರೆ ಅಂದರೆ, ಆ ಕಾರ್ಯದರ್ಶಿ ಒಬ್ಬನೇ ತನ್ನ ಸ್ವಇಚ್ಛೆಯಿಂದ ಮಾಡಿದ್ದಾನೆ ಎಂದರೆ ನಂಬಲಿಕ್ಕೆ ಸಾಧ್ಯವಿಲ್ಲ. ಇದರ ಎಲ್ಲಾ ಹಂತಗಳಲ್ಲೂ ಸರ್ಕಾರ ಶಾಮೀಲಾಗಿದೆ. ಕ್ಯಾಬಿನೆಟ್ ತೆಗೆದುಕೊಳ್ಳಬೇಕಾದ ನಿರ್ಧಾರವನ್ನು ಒಂದು ಇಲಾಖೆ ತೆಗೆದುಕೊಳ್ಳುವ ಬಗ್ಗೆ ನನಗೆ ಗೊತ್ತಿಲ್ಲ. ಇಲ್ಲಾ ಖರ್ಗೆಯವರು, ಕಾಗೋಡು ತಿಮ್ಮಪ್ಪನವರು ಇದ್ದಾರೆ ಅನೇಕ ಮಂತ್ರಿಗಳು ಇದ್ದಾರೆ. ತಾವು ಹೇಳಬೇಕು. ಇದಕ್ಕೆ ಕ್ಯಾಬಿನೆಟ್ ತೀರ್ಮಾನ ಆಗಬೇಕೇ

ಅಥವಾ ಸರ್ಕಾರದ ಯಾವುದೇ ಇಲಾಖೆ ಜಪ್ತೋ ಮಾಡಬಹುದಾ ಎಂಬುದನ್ನು ಹೇಳಬೇಕು. ಏಕೆಂದರೆ ಇದರಲ್ಲಿ ಮೂರು ಇಲಾಖೆಗಳದ್ದು ಜವಾಬ್ದಾರಿ ಇದೆ. ಈ ರೀತಿಯಾಗಿ ಎಲ್ಲಾ ಕಾನೂನುಗಳನ್ನು ಮತ್ತು ಕೋರ್ಟ್ ಆದೇಶಗಳನ್ನು ಧಿಕ್ಕಾರ ಮಾಡಿರುವುದರಿಂದ ಇವತ್ತು ಸರ್ಕಾರಕ್ಕೆ ಇದರಿಂದ ನೂರಾರು ಕೋಟಿ ರೂ.ಗಳ ನಷ್ಟ ಆಗಿದೆ. ಆದುದರಿಂದ ಇವತ್ತು ಯಾರ್‍ಯಾರು ಇದರಲ್ಲಿ ಶಾಮೀಲು ಆಗಿದ್ದಾರೆ, ಅವರು ಅಧಿಕಾರಿಗಳಿರಬಹುದು, ಬೇರೆ ಯಾರೇ ಆಗಿರಬಹುದು, ಅವರ ಬಗ್ಗೆ ತನಿಖೆ ಆಗಬೇಕು ಮತ್ತು ಶಿಕ್ಷೆ ಆಗಬೇಕು. ಇದರಿಂದ ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಇದರಿಂದ ಪರಿಸ್ಥಿತಿ ಹೇಗೆ ನಿರ್ಮಾಣ ಆಗಿದೆ ಅಂದರೆ, ಗ್ರಾನೈಟ್‌ನ ಅವ್ಯವಹಾರಗಳನ್ನು ತನಿಖೆ ಮಾಡಲಿಕ್ಕೆ ತಾವೇ ಸದನದ ಸಮಿತಿಯನ್ನು ಮಾಡಿದಿರಿ. ನಾವು ವರದಿ ಕೊಟ್ಟು ಒಂದು ವರ್ಷ ಆಗಿದೆ. ಆದರೂ ಕೂಡ ಸರ್ಕಾರ ಇದುವರೆವಿಗೂ ಯಾವುದೇ ಕ್ರಮವನ್ನು ಕೈಗೊಳ್ಳಲಿಲ್ಲ. ಇದರಿಂದ ಸಾರ್ವಜನಿಕರ ದೃಷ್ಟಿಯಲ್ಲಿ ಯಾವ ಅಭಿಪ್ರಾಯ ಬರುತ್ತದೆ? ಸರ್ಕಾರಕ್ಕೆ ಸಮಿತಿ ವರದಿಯನ್ನು ನೀಡಿದಮೇಲೂ ಯಾವ ಕ್ರಮವನ್ನು ತೆಗೆದುಕೊಳ್ಳಲಿಲ್ಲ ಎಂದರೂ ಸದನಸಮಿತಿಗೆ ಇದರಿಂದ ಬೆಲೆ ಉಳಿಯುತ್ತದೆಯೇ? ಅದರ ಸಂಸ್ಕೃತಿ ಉಳಿಯುತ್ತದೆಯೇ? ಅದರ ಅಧಿಕಾರ ವ್ಯಾಪ್ತಿ ಏನು? ಹಾಗಾದರೆ ಸದನಸಮಿತಿಗಳನ್ನು ಏಕೆ ರಚನೆ ಮಾಡಬೇಕು? ಇಲ್ಲ ಅಂದರೆ ಸರ್ಕಾರ ಸದನಸಮಿತಿಯು ಕೊಟ್ಟಂತಹ ವರದಿಯನ್ನು ನಾವು ಒಪ್ಪುವುದಿಲ್ಲ ಎಂದು ಹೇಳಬಹುದಿತ್ತು. ಅಥವಾ ಒಪ್ಪಿ ಇದರ ಮೇಲೆ ಕ್ರಮ ಕೈಗೊಳ್ಳುತ್ತೇವೆ ಎಂದು ಆದರೂ ಸದನದಲ್ಲಿ ಹೇಳಬಹುದಿತ್ತು. ಆದರೆ ಸರ್ಕಾರ ಯಾವುದನ್ನೂ ಇದುವರೆವಿಗೂ ಮಾಡಿಲ್ಲ. ನಾವು ಕೊಟ್ಟಿರತಕ್ಕಂಥ ವರದಿಯ ಬಗ್ಗೆ ಸರ್ಕಾರ ಇದುವರೆವಿಗೂ ಚಕಾರ ಎತ್ತಿಲ್ಲ. ನಾನೂ ಕೂಡ ಆ ಸದನದ ಸಮಿತಿಯ ಸದಸ್ಯ. ಆದರೆ ಸರ್ಕಾರ ಇದುವರೆವಿಗೂ ಒಪ್ಪುತ್ತೇವೆ ಎಂದು ಹೇಳಿಲ್ಲ, ಅಥವಾ ಅದನ್ನು ನಿರಾಕರಣೆ ಮಾಡುತ್ತೇವೆ ಎಂದೂ ಕೂಡ ಹೇಳಿಲ್ಲ. ಸರ್ಕಾರಕ್ಕೆ ಧೈರ್ಯ ಇದ್ದರೆ, ಶಕ್ತಿ ಇದ್ದರೆ ಸದನಸಮಿತಿ ಕೊಟ್ಟಿರತಕ್ಕ ವರದಿ ಸರಿಯಿಲ್ಲ, ಇದನ್ನು ನಾವು ಒಪ್ಪುವುದಿಲ್ಲ ಎಂದು ಹೇಳಿಬಿಡಲಿ. ಅಥವಾ ನಾವು ಕೊಟ್ಟಿರತಕ್ಕಂಥ ವರದಿಯಲ್ಲಿ ಸತ್ಯಾಂಶ ಇದೆ ಎಂದು ಅನ್ನಿಸಿದರೆ ಅದನ್ನು ಒಪ್ಪಿಕ್ರಮ ಕೈಗೊಳ್ಳಲಿ. ಈ ಗ್ರಾನೈಟ್ ಅವ್ಯವಹಾರದ ಬಗ್ಗೆ ಸದನಸಮಿತಿಯನ್ನು ಮಾಡಿ ಇನ್ನೂ ಒಂದು ವರ್ಷ ಕೂಡ ಆಗಿಲ್ಲ, ರಾಜ್ಯದಲ್ಲಿ ದೊಡ್ಡ ಕೋಲಾಹಲ ಆಗಿ ದೊಡ್ಡ ಚರ್ಚೆ ಆಗಿ ಇಷ್ಟೆಲ್ಲಾ ಆದರೂ ಕೂಡ ಸಮಿತಿ ವರದಿ ಕೊಟ್ಟರೂ ಸರ್ಕಾರ ಏನೂ ಕ್ರಮ ಕೈಗೊಳ್ಳಲಿಲ್ಲ. ಅಂದರೆ ಅದು ಅವ್ಯವಸ್ಥಿತವಾಗಿ ಈ ವ್ಯವಹಾರ ನಡೆಯುತ್ತಲೇ ಇದೆ. ಸದನ ಸಮಿತಿ ತನಿಖೆ ಮಾಡಿ ವರದಿ ಕೊಟ್ಟು ಏನೆಲ್ಲಾ ಮಾಡಿದರೂ ಸಹ ಇವತ್ತಿಗೂ ಕೂಡ ಈ ಅವ್ಯವಹಾರ ನಡೆಯುತ್ತಲೇ ಇದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಇವತ್ತು ಪ್ರಕೃತಿ ಸಂಪತ್ತನ್ನು ನಾಶ ಮಾಡುವುದರ ಜೊತೆಗೆ ಸರ್ಕಾರಕ್ಕೆ ಬರತಕ್ಕಂಥ ಆದಾಯವನ್ನು ಕೈಬಿಡಬೇಕಾದ ಪರಿಸ್ಥಿತಿ ಇವತ್ತು ಬಂದಿದೆ. ಅಂದರೆ ಯಾವ ಕಾರಣಕ್ಕೆ ಯಾರ ಒತ್ತಡಕ್ಕೆ, ಯಾರ ಮುಲಾಜಿಗೆ, ಏಕೆ ಹೀಗೆ ಮಾಡಿದ್ದಾರೆ ಎಂದು ಇದರಲ್ಲಿ ನಮಗೆ ಸ್ಪಷ್ಟವಾಗಿ ಅರ್ಥವಾಗಿರತಕ್ಕದ್ದು.. ಕೋಟ್ಯಾಂತರ

ರೂಪಾಯಿಯ ಅವ್ಯವಹಾರ ನಡೆಯದೇ ಇದ್ದರೆ, ಈ ರೀತಿ ಆಜ್ಞೆಗಳನ್ನು ಉಲ್ಲಂಘನೆ ಮಾಡಿ, ಕೋರ್ಟ್ ಕಛೇರಿ ಎಲ್ಲಾದರ ಆದೇಶಗಳನ್ನು ಉಲ್ಲಂಘನೆ ಮಾಡಲಿಕ್ಕೆ ಸಾಧ್ಯವಿಲ್ಲ. ಈ ರೀತಿ ಎಲ್ಲಾ ಆಜ್ಞೆ ಮತ್ತು ಆದೇಶಗಳನ್ನು ಉಲ್ಲಂಘನೆ ಮಾಡಿರುವುದಕ್ಕೆ ನೀವೇ ಜವಾಬ್ದಾರರು ಎಂದು ನೇರವಾಗಿ ನಾನು ಸರ್ಕಾರಕ್ಕೆ ಆರೋಪವನ್ನು ಮಾಡುತ್ತೇನೆ. ಇದರಲ್ಲಿ ಯಾವುದೇ ನೈತಿಕ ಹಕ್ಕು ಉಳಿದಿಲ್ಲ, ಆದ್ದರಿಂದ ಸಭಾಧ್ಯಕ್ಷರೆ, ತಮ್ಮ ಮೂಲಕವಿನಂತಿ ಮಾಡುತ್ತಿದ್ದೇನೆ, ಕೋಟ್ಯಾಂತರ ರೂಪಾಯಿಗಳ ಹಗರಣದ ಬಗ್ಗೆ ಸೂಕ್ತವಾದ ತನಿಖೆ ಆಗಬೇಕು, ಇದಕ್ಕೆ ತಾವೇ ಆದೇಶ ನೀಡಬೇಕು. ಇದರಲ್ಲಿ ತಪ್ಪಿತಸ್ಥರು ಎಂದು ಯಾವುದೇ ಅಧಿಕಾರಿ ಅಥವಾ ಯಾರೇ ಮೇಲ್ ನೋಟಕ್ಕೆ ಕಂಡು ಬಂದರೂ ರಾಜೀನಾಮೆ ಕೊಡಬೇಕು ಮತ್ತು ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

4.20 ಪಿ.ಎಂ.

+ ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಸನ್ಮಾನ್ಯ ಅಧ್ಯಕ್ಷರೇ, ನಾನೂ ಕೂಡ ಆ ಸದನ ಸಮಿತಿಯಲ್ಲಿ ಇದ್ದವನು. ಮೊದಲನೇ ಬಾರಿಗೆ ಆ ಗ್ರಾನೈಟ್ ದಂಧೆಯನ್ನು ನೋಡಿದಾಗ ಒಳ ಪ್ರವೇಶ ಮಾಡಿದಾಗ ನಮಗೆ ಏನ್ನೆನಿಸಿತು ಎಂದರೆ ಯಾವುದೋ ಕಳ್ಳಸಾಗಾಣಿಕೆದಾರರ ಮಧ್ಯೆ ನಾವು ಬಹಳ ಭಯದ ವಾತಾವರಣದಲ್ಲಿ ಇದ್ದೇವೆಯೇ ಎನ್ನುವ ಭಾವನೆ ಉಂಟಾಗಿತ್ತು ಈ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಆಗಿನ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ದೇವೇಗೌಡರು ಒಂದು ಮಾತನ್ನು ಹೇಳಿದರು, ಅದೇನೆಂದರೆ ಇಂದಿನ ಸರ್ಕಾರ ಸರ್ಕಾರದ ಬೊಕ್ಕಸಕ್ಕೆ ಆಗುತ್ತಿದ್ದ ನಷ್ಟವನ್ನು ತಪ್ಪಿಸುವುದಕ್ಕೋಸ್ಕರ ಐತಿಹಾಸಿಕ ತೀರ್ಮಾನವನ್ನು ತೆಗೆದುಕೊಂಡು ನಾವು ಮೆ:ಜೆಮ್ ಗ್ರಾನೈಟ್‌ರವರ ದಂಧೆಯಿಂದ ಬಹಳ ಅನ್ಯಾಯ ಆಗುತ್ತಿದ್ದಿದ್ದನ್ನು ನಿಲ್ಲಿಸಿದ್ದೇವೆ ಎಂದು ಎಲ್ಲಾ ಪತ್ರಿಕೆಗಳಲ್ಲಿ ಮತ್ತು ಎಲ್ಲಾ ಕಥೆ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದನ್ನು ಕ್ರೋಢಿಕರಿಸಿ ಆ ಒಂದು ದಂಧೆಯನ್ನು ನಿಲ್ಲಿಸಿದರು. ನಿಜ ಹೇಳಬೇಕೆಂದರೆ ಅಲ್ಲಿ ಎಂ.ಎಂ.ಎಲ್.ನವರೂ ಕೂಡ ಕೆಲಸ ಮಾಡುತ್ತಿದ್ದರು. ಸರ್ಕಾರಿ ಸಂಸ್ಥೆ ಅಲ್ಲಿ ಕೆಲಸ ಮಾಡುತ್ತಿತ್ತು. ಸುಮಾರು 20 ವರ್ಷಗಳ ಕಾಲ ಜೆಮ್ ಗ್ರಾನೈಟ್ ಅಲ್ಲಿ ಕೆಲಸ ಮಾಡಿಕೊಂಡು ಬಂತು. ಇಡೀ ಕರ್ನಾಟಕ ಸರ್ಕಾರದ ಬೊಕ್ಕಸಕ್ಕೆ ಸರಿಯಾದ ರೀತಿಯಲ್ಲಿ ತೆರಿಗೆ ಕೊಡದೆ ಬಹಳ ನಷ್ಟವಾಗಿದೆಯೆಂದು ಹೇಳಿ ಸದನ ಸಮಿತಿಯಲ್ಲಿ ನಾವು ವರದಿಯನ್ನು ಕೊಟ್ಟಿದ್ದೆವು. ಅಲ್ಲಿ ಬಂದಿರುವ ಸಮಸ್ಯೆಯೆಂದರೆ, ಆ ಜಮೀನು ಯಾರಿಗೆ ಸಂಬಂಧಪಟ್ಟದ್ದು ಎಂಬುದಾಗಿತ್ತು. ಅಲ್ಲಿ ಒಂದು ಮಠ ಕೂಡ ಇದೆ. ಆ ಮಠದವರು ನಮಗೆ ಏನು ಹೇಳಿದರೆಂದರೆ ಅತ್ಯಂತ ಕಡಿಮೆ ದರಕ್ಕೆ ಜಮೀನನ್ನು ಲೀಸ್ ಕೊಟ್ಟಿದ್ದೇವೆ, ಅದು ನಮ್ಮ ಮಠಕ್ಕೆ ಸೇರಿದಂಥ ಜಮೀನು. ಈ ಮಠಕ್ಕೆ ಸಂಬಂಧಪಟ್ಟ ಶಾಲೆನಡೆಸುವುದಕ್ಕೆ, ಮಠದ ವಹಿವಾಟು ನಡೆಸುವುದಕ್ಕೆ ಜೆಮ್ ಗ್ರಾನೈಟ್ ಮಾಲೀಕರು ಹೆಚ್ಚು ಹಣವನ್ನು ಕೊಡುತ್ತಿದ್ದರು, ಸರ್ಕಾರದವರು ಇದನ್ನು ನಿಲ್ಲಿಸಿ ಬಹಳ ಅನ್ಯಾಯ

ಮಾಡಿದ್ದಾರೆ ಎಂದು ಹೇಳುತ್ತ ಈ ಜಮೀನು ನಮಗೆ ಸೇರಿದ್ದುದು ಎಂಬತಕ್ಕಂಥ ವಾದವನ್ನು ಅವರು ಮಂಡಿಸಿದರು. ಆಗ ಅಲ್ಲಿದ್ದಂಥ ರೆವಿನ್ಯೂ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಇಡೀ 514 ಎಕರೆ 15 ಗುಂಟೆ ಜಮೀನನ್ನು ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘ, ಇಳಕಲ್, ಇವರ ಹೆಸರಿನಲ್ಲಿದ್ದ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಪಡೆದು ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರಿನಿಂದ 1978ರಿಂದ 1985ರವರೆಗೆ ನಾಲ್ಕು ಕಲ್ಲು ಗಣಿ ಗುತ್ತಿಗೆ ಪಡೆದಿದ್ದು ಕ್ರಮವಾಗಿ ಸಂಖ್ಯೆ 2280, 2238, 2679 ಮತ್ತು 2674ರಲ್ಲಿ ಗ್ರಾನೈಟ್ ಗಣಿಗಾರಿಕೆ ಮಾಡಿರುತ್ತಾರೆ, ಸದರಿ ಕಲ್ಲುಗಣಿ ಗುತ್ತಿಗೆ ಅವಧಿ ಮುಗಿದ ನಂತರ ನವೀಕರಣಕ್ಕೆ ಅರ್ಜಿ ಸಲ್ಲಿಸಿದ ಸಮಯದಲ್ಲಿ ಕರ್ನಾಟಕ ಸರ್ಕಾರವು ಉಪಕರಣಗಳ ಅಲಂಕಾರಿಕ ಶಿಲೆಯ ಗಣಿಯ ಗುತ್ತಿಗೆ ಪಡೆದು ಮಂಜೂರಾತಿ ಅಥವಾ ನವೀಕರಣ ಮಾಡುವುದನ್ನು ನಿಷೇಧಿಸಿದ ಪ್ರಯುಕ್ತ ಸದರಿ ಸಂಸ್ಥೆಯನ್ನು ತಮ್ಮ ಕಲ್ಲುಗಣಿ ಗುತ್ತಿಗೆ ಅವಧಿ ಮುಗಿದ ಪ್ರದೇಶಕ್ಕೆ ಸಂಬಂಧಪಟ್ಟಂತೆ ಉಚ್ಚ ನ್ಯಾಯಾಲಯ, ಬೆಂಗಳೂರು, ಇಲ್ಲಿಂದ ಮಧ್ಯಂತರ ಆದೇಶ ಪಡೆದು ಗ್ರಾನೈಟ್ ಗಣಿ ಕೆಲಸವನ್ನು ಮುಂದುವರೆಸಿದರು. 1978 ರಿಂದ ದಿನಾಂಕ 25-08-95ರವರೆಗೆ ಒಟ್ಟು 10,90,073.636 ಘನ ಮೀಟರ್ ಪಿಂಕ್ ಗ್ರಾನೈಟ್ ಕಲ್ಲನ್ನು ತೆಗೆದು ಕಲ್ಲು ಸಾಗಾಣಿಕೆ ಮಾಡಿರುತ್ತಾರೆ. ಇದರ ಅಂದಾಜು ಸಧ್ಯದ ದರದಲ್ಲಿದ್ದಂತೆ 5,59,60,810 ರೂ.ಗಳೆಂದು ಮೌಲ್ಯ ಮಾಡಲಾಗಿದೆ. ದಿನಾಂಕ 05-08-95ರಂದು ಮಾನ್ಯ ಜಿಲ್ಲಾಧಿಕಾರಿಗಳು ಬಿಜಾಪುರ ಇವರು ಸದರಿ ಸರ್ವೇ ಜಮೀನಿನ ಮಾಲೀಕತ್ವವು ಬಾಂಬೆ ಪರ್ಸನಲ್ ಇನಾಮ್ ಅಬಾಲಿಷನ್ ಆ್ಯಕ್ಟ್ ಪ್ರಕಾರ ಸದರಿ ಸರ್ವೆ ನಂಬರ್ ಪ್ರದೇಶ ಆ ವಿದ್ಯಾ ಸಂಸ್ಥೆಗೆ ಸಂಬಂಧಪಟ್ಟಿದ್ದಲ್ಲವಾದ ಕಾರಣ ಅದು ಸರ್ಕಾರದ ಪ್ರದೇಶವೆಂದು ಘೋಷಣೆಯಾಯಿತು. ಅಂದರೆ ಇದರರ್ಥ ಇಡೀ ಜಮೀನು ಸರ್ಕಾರದ್ದು, ಅದನ್ನು ಸಂಬಂಧಪಟ್ಟ ಮಹಾಂತೇಶ ವಿದ್ಯಾವರ್ಧಕ ಸಂಘದವರು ಜಮೀನನ್ನು ಹರಾಜು ಹಾಕುವುದರ ಮೂಲಕ ಜೆಮ್ ಗ್ರಾನೈಟ್‌ರವರಿಗೆ ಇಳಕಲ್‌ನಲ್ಲಿ ಗ್ರಾನೈಟ್‌ನ್ನು ದಂಧೆ ಮಾಡಲು ಕೊಟ್ಟರು. ಇದರಿಂದಾಗಿ ಸರ್ಕಾರಕ್ಕೆ ಬರಬೇಕಾದ ಪೂರ್ಣ ಪ್ರಮಾಣದ ಹಣ ಅಧಿಕಾರಿಗಳಿಂದ ಆದ ತಪ್ಪಿನಿಂದಲೋ ಅಥವಾ ಸರ್ಕಾರದ ತಪ್ಪಿನಿಂದಲೋ ಬರದೇ ನಷ್ಟವಾಗಿದೆ. ಇದರಲ್ಲಿ ಯಾರದು ತಪ್ಪೋ ಗೊತ್ತಿಲ್ಲ. ಅಂತೂ ಇಂತೂ ಪೂರ್ಣ ಪ್ರಮಾಣದಲ್ಲಿ ಸರ್ಕಾರಕ್ಕೆ ನಷ್ಟ ಉಂಟುಮಾಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಈಗಾಗಲೇ ಈ ಹಿಂದೆಯೇ ಇದು ಸರ್ಕಾರದ್ದು, ಯಾವುದೇ ಕಾರಣಕ್ಕೆ ಜೆಮ್ ಗ್ರಾನೈಟ್ ರವರಿಗೆ ಇದನ್ನು ಕೊಡುವುದಿಲ್ಲ ಎಂದು ಹೇಳಿದಂಥ ಸರ್ಕಾರ ಪುನಃ ನಮ್ಮ ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ ಕೆಲವು ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಪುನಃ ಜೆಮ್ ಗ್ರಾನೈಟ್‌ರವರಿಗೆ ಜಮೀನನ್ನು ಕೊಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಇನ್ನೊಂದು ವಿಷಯ ಕೂಡ ಪೇಪರ್‌ನಲ್ಲಿದೆ, ಅದರ ಬಗ್ಗೆ ಸವಿವರವಾಗಿ ಹೇಳಬೇಕೆಂದರೆ ಕಡೇಪಕ್ಷ 20 ನಿಮಿಷವಾದರೂ ಬೇಕಾಗುತ್ತದೆ. ಆ ಪೇಪರಿನಲ್ಲಿ ಅವನು ಏನು ಹೇಳಿದ್ದಾನೆಂದರೆ ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಪ್ರತಿಯೊಂದು

ಸರ್ಕಾರವೂ ನನ್ನ ಮೇಲೆ ಧಾಳಿ ಮಾಡುತ್ತಿದೆ. ನನ್ನೊಬ್ಬನನ್ನು ಬಿಟ್ಟು ಈ ವ್ಯವಹಾರದಲ್ಲಿ ತೊಡಗಿರುವ ಉಳಿದವರೆಲ್ಲರೂ ಸತ್ಯಹರಿಶ್ಚಂದ್ರರೆನ್ನುವ ಭಾವನೆಯೇ? ನಿಜವಾಗಿಯೂ ದೇವೇಗೌಡರು ಸಭ್ಯರು ಮತ್ತು ತುಂಬಾ ಒಳ್ಳೆಯವರು, ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಸಹಾಯ ಮಾಡಬೇಕೆನ್ನುವ ಮನೋಭಾವವುಳ್ಳವರೆಂದು ನನಗೆ ಗೊತ್ತಾಗಿದೆ. ಆದರೆ ಅವರ ಮನಸ್ಸನ್ನು ಕೆಡಿಸುವ ಪ್ರಬಲವಾದ ಯತ್ನ ನಡೆದಿದೆ ಎನ್ನುವುದು ನನ್ನ ಕಿವಿಗೆ ಬಿದ್ದಿದೆ. ವೃತ್ತಿ ವೈರತ್ವ ಎಂಬುದಿದೆಯಲ್ಲಾ, ಹೀಗಾಗಿ ನನ್ನ ವೃತ್ತಿ ವೈರಿಗಳೆಲ್ಲಾ ಒಂದಾಗಿ ಮಿತ್ರರಾಗಿ ಬಿಡುತ್ತಾರೆ. ಇದು ಒಂದು ಸಹಜ ಕ್ರಿಯೆ ಅಲ್ಲವೇ ಎಂದು ಆತ ಹೇಳಿದ್ದಾನೆ. ಅಲ್ಲದೇ ಆ ವಹಿವಾಟಿನಲ್ಲಿ ತೊಡಗಿರುವ ಅನೇಕರು ಸಚಿವರ ಸಂಬಂಧಿಗಳು ಇಲ್ಲವೇ ಪರಮಾಪ್ತರು, ಹೀಗಾಗಿ ಎಲ್ಲರೂ ಒಟ್ಟಾಗಿ ತಿರುಗಿಬಿದ್ದಿದ್ದಾರೆ. ಆದರೆ ಇದುವರೆಗೂ ಒಂದು ನೋಟಿಸ್‌ನ್ನು ಪಡೆಯದೇ ನಾವು ಇವರ್‍ಯಾರಿಗೂ ಸೊಪ್ಪು ಹಾಕುವುದಿಲ್ಲ, ಇಂಥ ಬ್ಲಾಕ್‌ಮೆಲ್ ತಂತ್ರಕ್ಕೂ ಹೆದರುವುದಿಲ್ಲವೆಂದು ಹೇಳಿ ವೀರಮಣಿ ತಮ್ಮ ಮಾತನ್ನು ಮುಗಿಸಿದರು ಎಂದು ಪತ್ರಿಕೆಯಲ್ಲಿ ಬಂದಿದೆ. ನಾನು ಯಾವುದಕ್ಕೂ ಹೆದರುವುದಿಲ್ಲ ಮತ್ತು ಯಾವ ಸರ್ಕಾರಕ್ಕೂ ಹೆದದರುವುದಿಲ್ಲವೆಂದು ಬಹಳ ಉದ್ಧಟತನದಿಂದ ಮಾತನಾಡಿ ಇಡೀ ಸರ್ಕಾರವನ್ನೇ ಛಾಲೆಂಜ್ ಮಾಡಿದ್ದಾನೆ. ಆದುದರಿಂದ ನಿಯಾಮವಳಿಗಳನ್ನು ಮೀರಿ ಪುನಃ ಆತನಿಗೆ ಕೊಟ್ಟಿರುವುದನ್ನು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ. ಮಾನ್ಯ ಅಧ್ಯಕ್ಷರೇ, ಇದರಿಂದ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ಹಣಕ್ಕೆ ಅನ್ಯಾಯವಾಗುತ್ತದೆಯಾದ ಕಾರಣ ಇದನ್ನು ಕೂಡಲೇ ನಿಲ್ಲಿಸಬೇಕು. ಒಂದು ವೇಳೆ ಅಲ್ಲಿರುವವರಿಗೆ ಉದ್ಯೋಗ ಕೊಡಬೇಕೆನ್ನುವ ಭಾವನೆ ಸರ್ಕಾರಕ್ಕೆ ಇದ್ದರೆ ನಮ್ಮದೇ ಆದ ಮೈಸೂರು ಮಿನರಲ್ಸ್ ಲಿಮಿಟೆಡ್ ಸಂಸ್ಥೆ ಇದೆ, ಇದು ಸರ್ಕಾರದ್ದೇ ಆದ್ದರಿಂದ ದಯವಿಟ್ಟು ಅಲ್ಲಿಯ ಜಮೀನಿನ ಎಲ್ಲಾ ಭಾಗವನ್ನು ಎಂ.ಎಂ.ಎಲ್.ನ ಸ್ವಾಮ್ಯದ ಒಡೆತನಕ್ಕೆ ಪಡೆದು ಅಲ್ಲಿ ಜನರಿಗೆ ಉದ್ಯೋಗವನ್ನು ಸೃಷ್ಟಿ ಮಾಡುವ ಮುಖಾಂತರ ಸರ್ಕಾರದ ಬೊಕ್ಕಸಕ್ಕೆ ಹಣ ಬರುವಂಥ ಕೆಲಸವನ್ನು ಮಾಡಬೇಕು. ಇದಲ್ಲದೇ ಈಗಾಗಲೇ ಈ ಪ್ರಕರಣದಲ್ಲಿ ಯಾರು ಯಾರು ಶಾಮೀಲಾಗಿ ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟುಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಅಧ್ಯಕ್ಷರ ಮುಖೇನ ಸರ್ಕಾರಕ್ಕೆ ತಿಳಿಸಬಯಸುತ್ತೇನೆ ಮತ್ತು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಈ ವಿಚಾರದ ಬಗ್ಗೆ ಈಗಾಗಲೇ ಶ್ರೀರಾಮರೆಡ್ಡಿಯವರು ಮತ್ತು ಪುಟ್ಟಣ್ಣಯ್ಯನವರು ಬಹಳ ವಿಸ್ತಾರವಾಗಿ ಹೇಳಿದ್ದಾರೆ. ಇದರಲ್ಲಿ ಸ್ಪಷ್ಟವಾಗಿರತಕ್ಕಂಥದ್ದು ಏನೆಂದರೆ ಬಾಂಬೆ ಇನಾಮ್ ಅಬಾಲಿಷನ್ ಆ್ಯಕ್ಟ್ ಕೆಳಗಡೆ 514 ಎಕರೆ ಭೂಮಿಯನ್ನು ಕಾನೂನಿನ ಕೆಳಗಡೆ ವಶಪಡಿಸಿಕೊಂಡ ಮೇಲೆ ಬೇರೆ ಯಾವುದೇ ಖಾಸಗಿ ಸಂಸ್ಥೆಯಾಗಲಿ ಅಥವಾ ಮಠ ಮಂದಿರವೇ ಆಗಲಿ ಅಥವಾ ಬೇರೆ ಯಾವುದೇ ಇದ್ದರೂ ಕೂಡ ಅವರಿಗೆ ಈ ಲೀಸ್ ಕೊಡತಕ್ಕಂಥ ಹಕ್ಕು ಬರುವುದಿಲ್ಲ. ಆ ಭೂಮಿಯನ್ನು ಸರ್ಕಾರ ಒಂದು

ಬಾರಿ ವಶಪಡಿಸಿಕೊಂಡ ಮೇಲೆ ಮತ್ತು ಜಿಲ್ಲಾಧಿಕಾರಿಗಳೂ ಕೂಡ ಆ ಭೂಮಿ ಸರ್ಕಾರಕ್ಕೆ ಸೇರಿದ್ದು ಎಂದು ಪ್ರತಿಪಾದನೆ ಮಾಡುತ್ತಾ ಬಂದಿದ್ದಾರೆ. ಆದರೆ ಇವೊತ್ತು ಜಿಲ್ಲಾಧಿಕಾರಿಗಳು ಎತ್ತಿಹಿಡಿದಂಥ ಲೋಪಕ್ಕೆ ಅಥವಾ ಅವರು ಏನು ಅಬ್ಜೆಕ್ಷನ್ ತೆಗೆದುಕೊಂಡರು ಅದು ಸುಪ್ರೀಂ ಕೋರ್ಟ್‌ವರೆಗೆ ಹೋಗಿ ಎತ್ತಿಹಿಡಿದಿದ್ದಾರೆ. ಇದು ಆದಮೇಲೆ ಕೂಡ ಸರ್ಕಾರ ಕಾನೂನುಗಳನ್ನು ಫ್ಲೋಟ್ ಮಾಡಿಕೊಂಡು ಅಗ್ರಿಮೆಂಟ್ ಮಾಡತಕ್ಕಂಥದ್ದು ಹೊಸ ಸರ್ಕಾರಿ ಆದೇಶ ಹೊರಡಿಸತಕ್ಕಂಥದ್ದು ಮಾಡಿದ್ದಾರೆ. ಆ ಅವಶ್ಯಕತೆ ಏನಿತ್ತು? ಎರಡನೆಯದಾಗಿ ಮೈಸೂರು ಮಿನರಲ್ಸ್ ಕಂಪನಿ ನಮ್ಮದೇ ಇದ್ದಕಾರಣ ಗ್ರಾನೈಟ್‌ನ್ನು ಎಕ್ಸಪ್ಲಾಯಿಟ್ ಮಾಡಬೇಕೆಂದಿದ್ದರೆ ಅವರಿಗೇ ಕೊಡಬೇಕು. ಹಾಗೇ ಮಾಡದೇ ಕೇವಲ ಒಂದು ನಾಮಿನಲ್ ರೇಟ್ 10 ಕೋಟಿ ರೂ.ಗಳ ಮೇಲೆ ಅದನ್ನು ಜೆಮ್ ಗ್ರಾನೈಟ್‌ನವರಿಗೆ ಕೊಡುವ ಅವಶ್ಯಕತೆ, ಪ್ರಮೇಯ, ಒತ್ತಡ ನಿಮಗೆ ಏನು ಬಂತು? ಇದರಿಂದ ಏನರ್ಥವಾಗುತ್ತದೆಂದರೆ ಕಾನೂನು ಸರ್ಕಾರದ ಪರವಾಗಿದ್ದರೂ ಕೂಡ ನೀವು ಮಾತ್ರ ಕಾಂಟ್ರಾಕ್ಟರವರ ಪರ, ಗುತ್ತಿಗೆದಾರರ ಪರ, ಗ್ರಾನೈಟ್ ಲಾಬಿ ಪರವಾಗಿ ಕೆಲಸ ಮಾಡುತ್ತೀರಿ ಎನ್ನುವುದಕ್ಕೆ ಇದೊಂದು ಉದಾಹರಣೆ ಸಾಕು. ಒಂದು ವೇಳೆ ಕಾನೂನು ಸರ್ಕಾರದ ಪರವಾಗಿಲ್ಲದಿದ್ದರೆ ಆಗ ನೀವು ಹೈಕೋರ್ಟ್ ಆದೇಶ ಅಡ್ಡ ಬಂದಿದೆ, ಸುಪ್ರೀಂ ಕೋರ್ಟ್ ಆದೇಶ ಅಡ್ಡಬಂದಿದೆ ಅಥವಾ ಇಂಥವರು ಅಡ್ಡ ಬಂದಿದ್ದಾರೆ ಎಂದು ಹೇಳಬಹುದು. ಆದರೆ ಎಲ್ಲವೂ ನಿಮ್ಮ ಪರವಾಗಿದ್ದರೂ ಕೂಡ ನೀವು ಆ ಸರ್ಕಾರಿ ಆದೇಶವನ್ನು ಮಾಡಿಫೈ ಮಾಡಿ ಜೆಮ್ ಗ್ರಾನೈಟ್‌ನವರಿಗೆ ಗುತ್ತಿಗೆಯನ್ನು ಕೊಡುವ ಕೆಲಸವನ್ನು ಏಕೆ ಮಾಡಿದಿರಿ? ನೀವು ಇದರಲ್ಲಿ ಶಾಮೀಲಾಗಿದ್ದೀರಿ ಎಂದಕೂಡಲೇ ನಿಮಗೆ ಸಿಟ್ಟುಬರುತ್ತದೆ, ಮತ್ತು ಮೇಲೆಯೇ ಕಾಣತಕ್ಕಂಥ ಅಂಶ ಎಂದರೆ 515 ಎಕರೆ ಭೂಮಿಯನ್ನು ಸರ್ಕಾರದ್ದೇ ಜಮೀನು ಇದೆ ಎಂದು ಜಿಲ್ಲಾಧಿಕಾರಿಗಳು ಹೇಳಿ ಹೈ ಕೋರ್ಟ್‌ನಿಂದ ಸುಪ್ರೀಂಕೋರ್ಟ್‌ವರೆಗೂ ಹೋಗುವವರೆಗೆ ಮತ್ತು ಅದು ನಿಮ್ಮ ಪರವೇ ಆಗಿದ್ದರೂ ಕೂಡ ಈ ರೀತಿಯ ಕೆಲಸವನ್ನು ನೀವು ಮಾಡಿದ್ದೀರೆಂದರೆ ಇದರ ಬಗ್ಗೆ ಅಧ್ಯಕ್ಷರೇ, ನೀವು ಮತ್ತು ಸದನ ಏನು ಊಹೆ ಮಾಡುತ್ತದೆ ಎಂಬುದನ್ನು ಆಲೋಚನೆ ಮಾಡಬೇಕಾಗುತ್ತದೆ. ಈ ಹಿಂದೆ ಸನದದಲ್ಲಿ ಗ್ರಾನೈಟ್ ಹಗರಣಗಳ ಬಗ್ಗೆ ಒಂದು ಸಮಿತಿಯಾಗಿತ್ತು. ಆ ಸಮಿತಿ ಕೂಡ ವರದಿ ಮಾಡಿದೆ. ಅದ್ಯಾವುದಕ್ಕೂ ಬೆಲೆ ಕೊಡುವುದಿಲ್ಲವೆಂದರೆ ಹೇಗೆ? ಏಕೆ ಈ ರೀತಿಯಲ್ಲಿ ಮಾಡುತ್ತೀರಿ? ಮೊನ್ನೆ ಮುಖ್ಯಮಂತ್ರಿಗಳು ಮಾತನಾಡುತ್ತಿರುವಾಗ ಏಕೆ ನಾಮೀನೇಷನ್ ಮಾಡುತ್ತೇವೆಂದರೆ ನನ್ನ ಪಕ್ಷದ ಹಿತಚಿಂತನೆಗಾಗಿ ಮತ್ತು ನಮ್ಮ ಪಾರ್ಟಿಯ ಇಂಟರೆಸ್ಟ್ ಕಾಪಾಡಬೇಕೆಂದು ಮಾಡುತ್ತೇವೆ ಎಂದರು. ಅದೇ ರೀತಿಯಾಗಿ ಇಲ್ಲಿಯೂ ನಿಮ್ಮ ಪಾರ್ಟಿ ಇಂಟರೆಸ್ಟ್‌ಗೋಸ್ಕರ ಈ ರೀತಿಯಾಗಿ ಸರ್ಕಾರಿ ಆದೇಶವನ್ನು ಹೊರಡಿಸಿ ಕೋಟ್ಯಾಂತರ ರೂ.ಗಳ ಹಣ ಟ್ರೆಜರಿಗೆ ಬರತಕ್ಕಂಥದ್ದನ್ನು ಲುಕ್ಸಾನು ಮಾಡಿಸಿ ನೀವು ಪ್ರೈವೇಟ್‌ನವರಿಗೆ ಕೊಟ್ಟು ಅದರಿಂದ ಲಾಭ ಪಡೆದುಕೊಳ್ಳಬೇಕು ಎನ್ನುವುದೇನಾದರೂ ನಿಮ್ಮ

ತೀರ್ಮಾನವಿದೆಯೆ? ಆ ರೀತಿಯೇನಾದರೂ ಇದ್ದರೆ ಅದನ್ನಾದರೂ ಇಲ್ಲಿ ಹೇಳಿ. ಇದರ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು. ಅವರು ಕೊಟ್ಟಮೇಲೆ ಮುಂದೆ ಇದನ್ನು ಯಾವರೀತಿಯಾಗಿ ತನಿಖೆ ಮಾಡಬೇಕೆಂಬ ಬಗ್ಗೆ ನಾನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಈಗ ಅವರು ಒಪ್ಪಿಕೊಂಡರೆ, ಇದು ಸಿ.ಬಿ.ಐ.ಗೆ ವಹಿಸುವುದಕ್ಕೆ ಸೂಕ್ತವಾದಂಥ ಕೇಸು ಬೇರೆ ಯಾವುದೂ ಅಲ್ಲ. ಸಣ್ಣಪುಟ್ಟದಕ್ಕೆ ನೀವು ಜ್ಯುಡಿಷಿಯಲ್ ಪ್ರೊಬ್ ಮಾಡುತ್ತೀರಿ, ಯಾರೋ 20 ವರ್ಷಗಳ ಹಿಂದೆ ಕಾಪಿ ಹೊಡೆದರು ಎಂದು ಇಡೀ ಸದನದಲ್ಲಿ ಚರ್ಚೆ ನಡೆಯಿತು. ಇಲ್ಲಿ ವರ್ಷಕ್ಕೆ 50 ಕೋಟಿ ರೂಪಾಯಿ ಎಂದರೆ ಸುಮಾರು ಐದು ವರ್ಷಗಳಲ್ಲಿ 200-300 ಕೋಟಿ ರೂಪಾಯಿ ಲೂಟಿಯಾಗಿದೆ. ಇದಕ್ಕೆ ನೀವು ಸಿ.ಬಿ.ಐ. ತನಿಖೆ ಮಾಡಿ ಇದಕ್ಕೆ ನೀವು ಜುಡಿಷಿಯಲ್ ಪ್ರೋಬ್ ಮಾಡಿ. ಅದಕ್ಕೋಸ್ಕರ ನಾನು ತಮ್ಮ ಮೂಲಕ ಮಾನ್ಯ ಮಂತ್ರಿಯವರಿಗೆ ಕೇಳಿಕೊಳ್ಳುತ್ತೇನೆ, ಕನಿಷ್ಠ ಪಕ್ಷ ಈಗಲಾದರೂ ಸದನ ಸಮಿತಿ ಆದಮೇಲೆ, ಅದನ್ನಂತು ಅವರು ಇಂಪ್ಲಿಮೆಂಟ್ ಮಾಡಲಿಕ್ಕೆ ಆಗಲಿಲ್ಲ. ಈಗಲಾದರೂ ಸಿ.ಬಿ.ಐ. ತನಿಖೆಗೆ ಅವರು ಒಪ್ಪಿಕೊಳ್ಳಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ತಕ್ಷಣ ಈ ಜಿ.ಓ.ಅನ್ನು ರಿವೋಕ್ ಮಾಡಿ. ಹಿಂದೆ ಈ ಸದನದಲ್ಲಿ ಅನೇಕ ಚರ್ಚೆಗಳಾಗಿದೆ. ಯಾವ ಮದನಗೋಪಾಲ್ ಈ ಭ್ರಷ್ಟಾಚಾರವನ್ನು, ಈ ರೀತಿ ಲೂಟಿ ಮಾಡುತ್ತಿರುವಂಥದ್ದನ್ನು ಬಯಲು ಮಾಡುವುದಕ್ಕೆ ಪ್ರಯತ್ನ ಮಾಡಿದರೋ ಅಂಥವನ್ನು ಕರ್ನಾಟಕ ರಾಜ್ಯವನ್ನೇ ಬಿಟ್ಟು ದೆಹಲಿಗೆ ಕಳುಹಿಸಿ ಆಯಿತು. ಒಬ್ಬ ಅರಣ್ಯಾಧಿಕಾರಿ ಬಿ.ಎರ್.ಜಾದವ್ ಎಂಬುವವನು ನಕಲಿ ಪರ್ಮಿಟ್ ಕೊಡುತ್ತಿದ್ದ ಎಂಬುದು ಸಿ.ಓ.ಡಿ.ವಿಚಾರಣೆಯಾಗಿ ದಾಖಲೆಗಳೊಂದಿಗೆ ಸಾಬೀತಾಯಿತು. ಇಳಕಲ್ ರಾಜನ ರೀತಿ ವೀರಮಣಿ ಅಲ್ಲಿ ಮೆರೆಯುತ್ತಿದ್ದಾನೆ. ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಅವರು ಹೇಳಿದರು, ಆದರ ದಾಖಲೆಗಳನ್ನು ನಾನು ತರಿಸಿಕೊಡುತ್ತೇನೆ. ಅವರು ಹೇಳಿದರು ಇವರೆಲ್ಲಾ ಸೇರಿಕೊಂಡು ಒಂದು ಸಾವಿರ ಕೋಟಿ ರೂಪಾಯಿ ಸರ್ಕಾರದ ಖಜಾನೆಗೆ ಬರುವುದನ್ನು ಲೂಟಿ ಮಾಡಿದ್ದಾರೆ, ನಾನು ತಪ್ಪಿಸುತ್ತೇನೆ ಎನ್ನುವುದು ರೆಕಾರ್ಡ್‌ನಲ್ಲಿದೆ. ಕೋರ್ಟಿನಲ್ಲಿ ಅದು ರೆವಿನ್ಯೂ ಇಲಾಖೆಗೆ ಸೇರಿದುದು ಎಂದು ಹೇಳಿದಮೇಲೂ ಸಹ ನಿಮ್ಮ ಸರ್ಕಾರ ಈ ರೀತಿ ವಿಶೇಷವಾದ ಜಿ.ಓ. ಹೊರಡಿಸಿ ಅಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಕಬಳಿಸುವುದಕ್ಕೆ ಅವಕಾಶ ಮಾಡಿಕೊಡುತ್ತದೆ ಎಂದರೆ ನಿಮಗೆ ಜನಹಿತಕ್ಕಿಂತ ಗ್ರಾನೈಟ್ ಖದೀಮರ ಕಡೆಯೇ ಹೆಚ್ಚು ನಿಗಾ ಇರುವಂಥದ್ದಾಗುತ್ತದೆ. ಈ ಗ್ರಾನೈಟ್ ಖದೀಮರು, ನೆಲಗಳ್ಳರು, ಇವರ ಜೊತೆಗೆ ಒಂದು ರೀತಿ ಸರ್ಕಾರ ಶಾಮೀಲಾಗಿದೆ ಎನ್ನುವಂಥದ್ದು ಒಂದೊಂದು ಘಟನೆಗಳಿಂದಲೂ ಸ್ಪಷ್ಟವಾಗಿ ಕಾಣುತ್ತಿದೆ. ಬಹುಶಃ ಮಾನ ಮರ್ಯಾದೆ, ಗೌರವ, ಜವಾಬ್ದಾರಿ ಇರುವಂಥ ಯಾವುದೇ ಸರ್ಕಾರ ಈ ರೀತಿ ವರ್ತನೆ ಮಾಡುವುದಕ್ಕೆ ಸಾಧ್ಯವಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ನಾವು ಇವೊತ್ತು ಇಳಕಲ್ ಕಡೆಗೆ ಹೋದರೆ ಕಣ್ಣಲ್ಲಿ

ನೀರು ಬರುತ್ತದೆ. ಈ ಒಂದು ಜಾಗವನ್ನು ಅವನು ಕಾನೂನಿನ ಚೌಕಟ್ಟಿನಲ್ಲಿ ತೆಗೆದುಕೊಂಡು ಆ ಸುತ್ತಮುತ್ತ ಪೂರ್ಣ ಪ್ರದೇಶವನ್ನು ಅವನು ವಶಮಾಡಿಕೊಂಡು ಸಾವಿರಾರು ಕಲ್ಲುಗಳನ್ನು ದಿನನಿತ್ಯ ಬೇರ್ಪಡಿಸಿ ಹೊರಗಡೆ ಕಳುಹಿಸುವಂಥದ್ದು ನಿರಂತರವಾಗಿ ನಡೆಯುತ್ತಿದೆ, ಸರ್ಕಾರ ಕಣ್ಣುಮುಚ್ಚಿ ಕುಳಿತುಕೊಂಡಿದೆ, ಇಂತಹ ಖದೀಮರ ಜೊತೆ ಸರ್ಕಾರ ಶಾಮೀಲಾಗುತ್ತಿದೆ ಎನ್ನುವುದನ್ನು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಅವನಮೇಲೆ ಏನು ಕ್ರಮ ತೆಗೆದುಕೊಳ್ಳುವುದು, ನೀವೇ ಒಂದು ಆದೇಶವನ್ನು ಹೊರಡಿಸಿ ಆ ಕೋರ್ಟು ಕಛೇರಿಗಳೆಲ್ಲಾ ಸರ್ಕಾರಕ್ಕೆ ಸೇರಿದ್ದು, ರೆವಿನ್ಯೂ ಇಲಾಖೆಗೆ ಸೇರಿದ್ದು ಎಂದು ಹೇಳಿದ ಮೇಲೆ ಇಲ್ಲಪ್ಪ ನೀನು ಅದನ್ನು ಮಜಾ ಮಾಡಿಕೊಂಡು, ಉಪಯೋಗ ಮಾಡಿಕೊಂಡು ಒಂದು ಹತ್ತು ಕೋಟಿ ರೂಪಾಯಿ ಕಟ್ಟಿಬಿಟ್ಟು ನೀನೊಂದು ನೂರು ಕೋಟಿ ಹೊಡೆದುಕೊ ಎಂದು ನೀವು ಬಿಟ್ಟುಕೊಡುವುದಾದರೆ ನಿಮ್ಮ ಇಂಟ್ರೆಸ್ಟ್ ಏನು? ನಿಮಗೆ ರಾಜ್ಯದ ಹಿತ ಇದೆಯೇ ಅಥವಾ ಗ್ರಾನೈಟ್ ಖದೀಮರನ್ನು ಬೆಳೆಸಿ, ಅವರನ್ನು ಸಾಕಿ ನೀವು ಬದುಕುವುದಕ್ಕೋಸ್ಕರ ಸರ್ಕಾರ ಇದೆಯೇನೋ ಗೊತ್ತಿಲ್ಲ. ಈ ಜಿ.ಓ. ಹೊರಡಿಸಿರುವುದನ್ನು ತಕ್ಷಣವೇ ರಿವೋಕ್ ಮಾಡಿ ವಿತ್‌ಡ್ರಾ ಮಾಡಿಕೊಳ್ಳಬೇಕೆಂಬ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

+ ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಈಗ ಹೇಳುವುದಕ್ಕೆ ಹೆಚ್ಚಿಗೆ ಏನೂ ಉಳಿದುಕೊಂಡಿಲ್ಲ. ವೀರಮಣಿ ಒಬ್ಬ ಚೀಟ್ ಮೊದಲು ಆ ಪ್ರಶ್ನೆಯನ್ನು ಈ ಸದನದಲ್ಲಿ ನಾನೇ ಪ್ರಸ್ತಾಪಿಸಿದಂಥದ್ದು. ಅವನನ್ನು ಬ್ಲಾಕ್‌ಲಿಸ್ಟ್ ಮಾಡಬೇಕಾಗಿತ್ತು. ಅವನಮೇಲೆ ನೀವು ಸುಪ್ರಿಂ ಕೋರ್ಟ್ ತನಕ ಯುದ್ಧ ಮಾಡಿ ಅವನಿಗೆ ಶರಣಾಗುತ್ತೇವೆ ಎಂದರೆ ಅರ್ಥವೇನು? ಖರ್ಗೆಯವರು ಹೇಳಿದಂತೆ 20 ವರ್ಷಗಳ ಹಿಂದೆ ಸೋಮಶೇಖರ್ ಕಾಪಿಹೊಡೆದ ಎಂದು ಕಥೆಯನ್ನು ತೆಗೆದುಕೊಂಡು ಬಿಟ್ಟರೆ Every Saint was a sinner ನಾವ್ಯರೂ ಸಭೆಯಲ್ಲಿ ಇರುವಂತೆಯೇ ಇಲ್ಲ. ಸಣ್ಣಪುಟ್ಟದ್ದು ಏನಾದರೂ ಬಂತು ಎಂದರೆ, ನಾನು ಅವೊತ್ತು ಸಭೆಯಲ್ಲಿ ಇರಲಿಲ್ಲ. ಮುಖ್ಯಮಂತ್ರಿಗಳು ಸಡನ್ ಆಗಿ ಜ್ಯುಡಿಷಿಯಲ್ ಪ್ರೋಬ್ ಎಂದರು ಇಲ್ಲಿ ಒಬ್ಬ ಚೀಟ್, ಬ್ಯಾಂಕಿನಲ್ಲಿ ಗ್ಯಾರಂಟಿ ಕೊಡುತ್ತಾನೆ, ಅದು ಆನರ್ ಮಾಡುವುದಿಲ್ಲ. ಬ್ಯಾಂಕಿಗೆ ಅನ್ಯಾಯ ಮಾಡಿಕೊಂಡು ಅದನ್ನು ತಪ್ಪಿಸಿಕೊಳ್ಳುತ್ತಾನೆ, ಲೂಟಿ ಮಾಡಿದ್ದಾನೆ, ಸರ್ಕಾರಗಳನ್ನು ಉರುಳಿಸುತ್ತೇನೆ ಎಂದು ಹೋಗುತ್ತಾನೆ. ಈ ಗ್ರಾನೈಟ್‌ನವನ ಪ್ರಭಾವ ಎಷ್ಟೆಂದರೆ, ಗುಜರಾತ್ ಸರ್ಕಾರವನ್ನೇ ತೆಗೆದುಬಿಟ್ಟ. ಜಯಲಲಿತಾ ಮನೆಯಲ್ಲಿ ಮದುವೆ ಮಾಡಿಸಿಬಿಟ್ಟ. ಇನ್ಯಾರ ಮನೆ ಮದುವೆ ಮಾಡಿಸುವುದಕ್ಕೆ ಹೊರಟಿದ್ದಾನೋ ನನಗೆ ಗೊತ್ತಿಲ್ಲ. ಇನ್‌ಕಂಟ್ಯಾಕ್ಸ್‌ನವರು ವಿಚಾರಣೆ ಮಾಡಿದ್ದಾರೆ, ಇವನ ವ್ಯವಹಾರವಿದ್ದ ಬೇರೆ ಬೇರೆ ಏಜೆನ್ಸಿಯೆಲ್ಲ ತನಿಖೆ ಮಾಡಿದ್ದಾರೆ. FERA violations ಬೇರೆ ಇವನ ಮೇಲೆ ಇದೆ. ಇಂಥ ಒಬ್ಬ ಆ್ಯಂಟಿ ನ್ಯಾಷನಲ್, ಆ್ಯಂಟಿ ಸೋಷಿಯಲ್, ಆ್ಯಂಟಿ

ಗೌರ್ನಮೆಂಟ್ ಏಜೆಂಟ್ ಈತ. ಇವನಿಗೆ ನೀವು ರೆಡ್ ಕಾರ್ಪೆಟ್ ಹಾಕಿ ಸ್ವಾಗತ ಮಾಡಿ ಕೊಡಬೇಕಾದರೆ ಗುಟ್ಟೇನು? ಏನೋ ಕನ್ಸಿಡರೇಷನ್ ಇರಬೇಕು. ಯಾವುದಾದರೊಂದು ಕಾರಣ ಬೇಕಲ್ಲಾ. ಇಲ್ಲ ಅವನ ಹತ್ತಿರ ಯಾರೋ ಲಂಚ ಹೊಡೆದಿರಬೇಕು ಗುಟ್ಟೇನು ಇರುತ್ತದೆ? ಇಷ್ಟೆಲ್ಲಾ ಆಗಿ ಕೊಡಬೇಕಾದರೆ **somebody must be awfully corrupt in this Government, otherwise, this would not have happened.** ಯಾವುದಾದರೂ ಸ್ವಾಭಿಮಾನ ಇರುವ ಸರ್ಕಾರ ಸುಪ್ರೀಂಕೋರ್ಟ್‌ವರೆಗೆ ಇವನ ವಿರುದ್ಧ ಕೇಸ್ ತೆಗೆದುಕೊಂಡು ಹೋಗಿ ಅವನಿಗೆ ಪುನಃ ಕ್ವಾರಿಯಿಂಗ್ ಕೊಡುತ್ತಾರೆ ಟೆಂಡರ್ ಕರೆಯದೆ ಎಂದರೆ, ಅಂದರೇನು ವಿಶೇಷವಾದಂಥ ರೂಲ್ 56ರ ಬಗ್ಗೆ ಇವನಿಗೆ ಕೊಡುವುದಕ್ಕೋಸ್ಕರ ಇವರು ಇನ್‌ವೋಕ್ ಮಾಡುತ್ತಾರೆ. **Is it a part and parcel of this Government? We talk that money power can purchase political power. Has it happened here? I want to know. If it is not so, the Government should agree for Judicial probe.** ಸಂಬಂಧಪಟ್ಟ ಮಂತ್ರಿ ರಾಜೀನಾಮೆಯನ್ನು ಕೊಡಬೇಕಾಗುತ್ತದೆ. ಇದರಲ್ಲಿ ದಾಕ್ಷಿಣ್ಯ ಬೇಡ, ಮುಚ್ಚುಮರೆ ಬೇಡ. ಆ ಸೋಮಶೇಖರ್ ಹತ್ತಿರ ರಾಜೀನಾಮೆ ತೆಗೆದುಕೊಂಡಿದ್ದೀರಿ, ಯಾವ ಅಪರಾಧ ಇತ್ತು? ಇದಕ್ಕೆ ಹೋಲಿಸಿ ನೋಡಿ. ಇದನ್ನು ನೋಡಿದವರು ಸಮಾಜದಲ್ಲಿ ಏನೆನ್ನುತ್ತಾರೆ? ಇಂತಹ ಸಣ್ಣ ಕ್ಷುಲಕ ವಿಚಾರಕ್ಕೆ ಜ್ಯುಡಿಷಿಯಲ್ ಪ್ರೋಬ್ ಮಾಡುತ್ತೀರಿ, ಇಲ್ಲಿ ಕಂಡಂತೆಯೇ ಹಗಲು ದರೋಡೆ ನಡೆದಿದೆ, ಒಬ್ಬ ಚೀಟ್‌ಗೆ ನೀವು ಮಣೆ ಹಾಕುತ್ತೀರಿ, ಅವನನ್ನು ಬ್ಲಾಕ್‌ಲಿಸ್ಟ್ ಮಾಡುವ ಬದಲಿಗೆ ಲೀಸ್‌ಗೆ ಕೊಡುತ್ತೇವೆ ಎಂದರೆ ಅರ್ಥ ಏನಿದೆ? ಇವೊತ್ತು ಮುಖ್ಯಮಂತ್ರಿಗಳು ಇದ್ದಿದ್ದರೆ ಚೆನ್ನಾಗಿತ್ತು. ಅವರು ಏನು ಹೇಳುತ್ತಿದ್ದರೋ ಕೇಳಬೇಕಿತ್ತು. ಸೋಮಶೇಖರ್ ಮೇಲೆ ಜ್ಯುಡಿಷಯಲ್ ಪ್ರೋಬ್ ಮಾಡಿದ್ದಿರಲ್ಲಾ, ಜಯರಾಂ ಮೇಲೂ ಮಾಡುತ್ತೀರೋ ಹೇಗೆ? ನನಗೆ ಜಯರಾಂಗೆ ಹೇಗೆ ಇಷ್ಟು ಧೈರ್ಯ ಬಂತು ಎಂದು ಅರ್ಥವಾಗುತ್ತಾ ಇಲ್ಲ. ಜಯರಾಂ ಹಿಂದೆ ಯಾವುದೋ ಕಾಣದ ಕೈ ಇದೆ. ಅದು ಯಾವುದು ಎಂದೂ ಸಹ ಅರ್ಥ ಆಗಬೇಕು. ಜಯರಾಂ ರವರು ಹೇಳಲಿ. ಅಥವಾ ಅವರೇ ಬುದ್ಧಿ ಓಡಿಸಿ ಮಾಡಿದರೋ 56ನೇ ರೂಲ್ ಇದೆಲ್ಲಾ ಮಾಡಿ. ಇದೇನು ಎಂದು ನಮಗೆ ಅರ್ಥವಾಗುತ್ತಾ ಇಲ್ಲ. **What has happened in this State Is there a governance? Is there a Government here?**

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಈ ಗ್ರಾನೈಟ್ ಲೂಟಿ ಬಗ್ಗೆ ನಾನು ನಿರಂತರವಾಗಿ ಹೋರಾಟ ಮಾಡಿದ್ದೇನೆ, ರೈತ ಸಂಘದವರು, ಮತ್ತು ಇತರ ಅನೇಕರು ಹೋರಾಟ ಮಾಡಿದ್ದಾರೆ. ಇದು ಒಂದುಕಡೆ ಈ ರಾಜ್ಯದ ನಿಸರ್ಗ ಸಂಪತ್ತಿನ ನಾಶ ನಿರಂತರವಾಗಿ ನಡೆಯುತ್ತಿದ್ದು ಅದಕ್ಕೆ ಬೆಲೆ ಕಟ್ಟುವುದಕ್ಕೆ ಸಾಧ್ಯವೇ ಇಲ್ಲ.

ಈ ಸರ್ಕಾರಗಳಿಗೆ, ಸರ್ಕಾರಕ್ಕೆ ನಮ್ಮ ರಾಜ್ಯದಲ್ಲಿ ಎಷ್ಟು ನಿಸರ್ಗ ನಾಶವಾಗಿದೆ ಎಂಬ ಲೆಕ್ಕ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಇಲ್ಲ. ಸರ್ಕಾರಕ್ಕೂ ಗೊತ್ತಿಲ್ಲ. ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 34 ಸಾವಿರ ಎಕರೆ ಪ್ರದೇಶದಲ್ಲಿ ಕನಿಷ್ಟ 12 ಸಾವಿರ ಪ್ರದೇಶದಲ್ಲಿ ಗಣಿ ಕಾರ್ಯ ನಡೆಯುತ್ತಿದೆ. ಅದರಲ್ಲಿ ಅಕ್ರಮವಾಗಿ 5 ಸಾವಿರ ಎಕರೆ ಪ್ರದೇಶದಲ್ಲಿ ಗಣಿ ಕೆಲಸ ನಡೆಯುತ್ತಿದೆ. ವಿದೇಶಕ್ಕೆ ಸುಮಾರು 40 ಸಾವಿರ ಕೋಟಿ ರೂಪಾಯಿ ಕಲ್ಲು ರಫ್ತಾಗಿದೆ. ಅದರಲ್ಲಿ ಬಹಳ ಪ್ರಾಮುಖ್ಯವಾದಂತಹವನು ಈ ವೀರಮಣಿ. ಈ ವೀರಮಣಿ ಒಬ್ಬ ಆರ್ಡಿನರಿ ಮನುಷ್ಯನಾಗಿದ್ದು, ಬೆಂಗಳೂರು ನಗರದಲ್ಲಿ ಏನೇನು ಇಲ್ಲದೇ ಇರತಕ್ಕಂಥ ಇಡ್ಲಿ, ದೋಸೆಗೂ ದುಡ್ಡಿಲ್ಲದಂಥ ಒಬ್ಬ ವ್ಯಕ್ತಿ. ಇವೊತ್ತು ಅವನ ಸಂಪತ್ತು, ಅವನ ವ್ಯವಸ್ಥೆ ಎಲ್ಲವನ್ನೂ ನೋಡಿದರೆ ಇದು ಈ ಇತಿಹಾಸದಲ್ಲಿ ನಡೆದಿರತಕ್ಕ ದೊಡ್ಡ ಹಗರಣ ಎಂದು ಹೇಳಿದರೆ ತಪ್ಪಾಗಲಾರದು. ಈ ಸದನದಲ್ಲಿ ಹಿಂದೆ ಯಾವುದೋ ಅಂದಾಜು ಸಮಿತಿಯಲ್ಲಿ ಯಾವುದೋ ಒಂದು ವರದಿಯ ಬಗ್ಗೆ ಅಲ್ಲಿ ಬಂತು, ಇಲ್ಲಿ ಬಂತು ಎಂದ ತಕ್ಷಣ ಮೂರೇ ನಿಮಿಷದಲ್ಲಿ ಸಿ.ಬಿ.ಐ. ಎಂದುಬಿಟ್ಟರು. ಆರೋಗ್ಯ ಇಲಾಖೆಯ ವಿಷಯದಲ್ಲಿ ಹಿಂದಿನ ಆರೋಗ್ಯ ಸಚಿವರ ಮೇಲೆ ಯಾವುದೋ ಒಂದು ಕಂಡುಬಂದ ತಕ್ಷಣ, ತಕ್ಷಣವೇ ಅದೊಂದು ರೀತಿ ನಾಟಕೀಯವಾಗಿ, ನಾವೆಲ್ಲಾ ಸದನದಲ್ಲಿ ಕುಳಿತಿದ್ದೆವು. ನಮಗ್ಯಾರಿಗೂ ಗೊತ್ತಾಗಲೇ ಇಲ್ಲ. ಏನು ನಡೆಯುತ್ತಿದೆ, ಏನಾಯಿತು ಗೊತ್ತೇ ಆಗಲಿಲ್ಲ. ಆಮೇಲೆ ನಾವು ಒಂದು ತರಹ ತೆಪ್ಪರ ಗಳಾಗಿಬಿಟ್ಟೆವು. ಆಮೇಲೆ ಮನೆಗೆ ಹೋದಮೇಲೆ ಇದೇನು ಹೀಗಾಯಿತಲ್ಲಾ, ಸಿ.ಬಿ.ಐ.ಗೆ. ಯಾರಿಗೆ ಹಾಕಿದರು? ಏನು ಉದ್ದೇಶ. ಎಂದು ಆಮೇಲೆ ನಾವು ನೋಡುತ್ತೇವೆ, ಆವೊತ್ತು ತಕ್ಷಣವೇ ಒಬ್ಬರು ಕೇಳಿದರು, ಮುಖ್ಯಮಂತ್ರಿಗಳು ಎದ್ದರು, ಸಿ.ಬಿ.ಐ. ಎಂದರು. ಈ ಸಿ.ಬಿ.ಐ.ತಮಗೆ ಬೇಕಾದಾಗ ಮಾತ್ರ ಒಂದೇ ನಿಮಿಷದಲ್ಲಿ ಸಿ.ಬಿ.ಐ. ನಾವು ಆಕಾಶಭೂಮಿಗೆ ಇಳಿದು ಇದು ಪ್ರಾಮಾಣಿಕತೆ ಎಂದು ಹೇಳಿದರೆ ಅದರ ಬಗ್ಗೆ ಸಿ.ಬಿ.ಐ.ಇಲ್ಲ. ನಾನು ಇವೊತ್ತು ನಂಜೇಗೌಡರು, ಯಡಿಯೂರಪ್ಪ ಮತ್ತು ಖರ್ಗೆಯವರ ಜೊತೆಗೆ ಧ್ವನಿಗೂಡಿಸುತ್ತೇನೆ, ನಮ್ಮ ಉನ್ನತ ಶಿಕ್ಷಣ ಸಚಿವರ ಬಗ್ಗೆ ಮಾಡಿದಂಥ ಆರೋಪಕ್ಕೆ ನ್ಯಾಯಾಂಗ ತನಿಖೆಯನ್ನು ಮಾಡುವುದಾಗಿ ಹೇಳಿದರು. ಇರಲಿ. ನಾನು ಇವೊತ್ತು ಬೆಳಿಗ್ಗೆ ತಮ್ಮ ಹತ್ತಿರಬಂದು ಮಾತನಾಡಿದೆ. ಏನು ಮಾತನಾಡಿದೆ, ಸಾರ್, ಏನೋ ಆಗಿರಬಹುದು, ಯಾವುದೋ ಸಂದರ್ಭದಲ್ಲಿ ಯಾವುದೋ ವಿಚಾರ ಆಗಿದೆ, ನಾವು ಯಾವ ತರಹ ಮಾತನಾಡೋಣ. ಒಬ್ಬ ವ್ಯಕ್ತಿಯನ್ನು ಯಾವುದೋ 25 ವರ್ಷಗಳ ಹಿಂದೆ ನಡೆದಂಥ ಸಣ್ಣ ಕಥೆಗೆ ಇವೊತ್ತು ಒಂದು ರೂಪ ಕೊಟ್ಟು ನ್ಯಾಯಾಂಗ ತನಿಖೆಗೆ ಹೋಗಬೇಕು ಎಂಬ ಮಾತನ್ನು ಏನು ಹೇಳುತ್ತಿದ್ದೇವೆ, ಒಂದು ಆ ಸದನದಲ್ಲಿ ಒಂದು ಸಮಿತಿ, ಈ ಸದನದಲ್ಲಿ ನ್ಯಾಯಾಂಗ ತನಿಖೆ. ಈ ಮಾತನ್ನು ನಾನು ಏಕೆ ಹೇಳುತ್ತೇನೆ ಎಂದರೆ, ಬೇಕಾದವರು ಬೇಕಾದ ರೀತಿಯಲ್ಲಿ ಎನ್ನುವ ರೀತಿಯಲ್ಲಿ ಆಗುವುದಾದರೆ ಇದು ಸರ್ಕಾರ ಎನಿಸಿಕೊಳ್ಳುವುದಿಲ್ಲ. ನಾನು ತಮಗೆ ಹೇಳುವಂಥಾದ್ದು ಬರೀ ವೀರಮಣಿಯೊಂದೇ ಅಲ್ಲ. ಈ ಕರ್ನಾಟಕ

ರಾಜ್ಯದಲ್ಲಿ ಗ್ರಾನೈಟ್ ಲೂಟಿ ಬಗ್ಗೆ ನಾನು ತಮಗೆ ಅಭಿನಂದಿಸುತ್ತೇನೆ. ತಾವು ಸದನ ಸಮಿತಿಯನ್ನು ಮಾಡಿದಿರಿ, ಮತ್ತು ನನ್ನಂಥವರನ್ನು ಕರೆದಿರಿ. ತಾವು ಈ ಸದನ ಸಮಿತಿಯಲ್ಲಿ ಹೆಚ್ಚಿನ ರೀತಿಯಲ್ಲಿ ಭಾಗವಹಿಸಬೇಕು, ಏನೋ ಇದರಲ್ಲಿ ಅನುಮಾನವಿದೆ, ಬಹಳ ಲೂಟಿಯಾಗುತ್ತಿದೆ ಎನ್ನುವಂಥಾದ್ದು ನಿಮ್ಮ ಮನಸ್ಸಿನಲ್ಲೂ ಬಂತು. ನಿಮ್ಮ ಮನಸ್ಸಿನ ನೋವನ್ನು ನಾನು ಅರ್ಥ ಮಾಡಿಕೊಂಡೆ, ನೀವು ಒಂದಲ್ಲ ನಾಲ್ಕು ಸಾರಿ ಹೇಳಿದಿರಿ. ಆದರೂ ಅಧ್ಯಕ್ಷರ ಬದಲಾವಣೆಯಾಗಿ ಮತ್ತೊಬ್ಬರು ಅಧ್ಯಕ್ಷರಾದರು. ನಾನು ಕೊನೆಯ ಮೂರು ತಿಂಗಳಲ್ಲಿ ರಾಜೀನಾಮೆಯನ್ನು ಕೊಟ್ಟೆನು. ಅದಾದನಂತರ ಬಂದ ವರದಿಯ ಬಗ್ಗೆ ನಾನು ಚರ್ಚೆಗೆ ಹೋಗುವುದಿಲ್ಲ. ಆದರೆ ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ ಈ ಲೂಟಿ, ಹಗಲು ದರೋಡೆ ಇದು, ಬಹುಶಃ ಅಬಕಾರಿ ಲಾಬಿ, ಬೇರೆ ಬೇರೆ ಲಾಬಿಗಳಿತ್ತು. ಈಗ ಕರ್ನಾಟಕ ರಾಜ್ಯದಲ್ಲಿ ಗ್ರಾನೈಟ್ ಲಾಬಿ ಅತ್ಯಂತ ದೊಡ್ಡ ಲಾಬಿಯಾಗಿದೆ. ಚಾಮರಾಜ ನಗರವಿರಬಹುದು, ಕೊಳ್ಳೆಗಾಲವಿರಬಹುದು, ಯಳಂದೂರು ಇರಬಹುದು, ಶಿರಾ ಇರಬಹುದು, ಕನಕಪುರವಿರಬಹುದು, ಇದೆಲ್ಲವನ್ನೂ ಬಿಡಿ. ಆದರೆ ಇಳಕಲ್ ಒಂದರಲ್ಲೇ ಲೆಕ್ಕಕ್ಕೆ ಬಂದಿರುವಂಥಾದ್ದು ಒಂದು ಸಾವಿರದ ಐದು ನೂರು ಎಕರೆ ಅದರಲ್ಲಿ ವೀರಮಣಿ ಹೆಸರಿಗೆ ಬಂದಿರುವಂಥಾದ್ದು ಆರು ನೂರು ಎಕರೆ ಅದು ಗುಗ್ಗಲಮರಿ ಬಸವೇಶ್ವರ ದೇವಸ್ಥಾನಕ್ಕೆ ಸೇರದಂತಹ ಆ ಪ್ರದೇಶದಲ್ಲಿ ಹೋಗತಕ್ಕಂಥ ಕಲ್ಲು ಒಂದು ಹೊಸ ಪ್ರಪಂಚವೇ ನಿರ್ಮಾಣವಾಗಿದೆ. ಅದು ಯಾವ ರೀತಿ ಎಂದರೆ ವಿದೇಶದ ಇಂಜಿನ್‌ಗಳು, ಯಂತ್ರಗಳು ಬಂದಿದ್ದು, ಅಲ್ಲಿ ಕಲ್ಲನ್ನು ಯಾವ ರೀತಿ ತೆಗೆಯುತ್ತಾರೆಂದರೆ ಬ್ರೆಡ್ ರೀತಿಯಲ್ಲಿ ಆ ಕಲ್ಲನ್ನು ತೆಗೆಯುವಂಥಾದ್ದು ಮತ್ತು ಅದನ್ನು ಸಾಗಿಸುವಂತಹ ವ್ಯವಸ್ಥೆಯನ್ನು ನೋಡಿದರೆ ಇಳಕಲ್‌ನಲ್ಲಿ ಒಂದು ಹೊಸ ಪ್ರಪಂಚವೇ ಅಲ್ಲಿ ನಿರ್ಮಾಣವಾಗಿದೆ. ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ ಈ ದೇವಸ್ಥಾನ ಸುತ್ತ ಗ್ರಾನೈಟ್ ಲೂಟಿಯಿಂದ ನಾಶವಾಗಿದೆ. ಅರಣ್ಯ ಇಲಾಖೆ ನಾಶವಾಗಿದೆ, ಕಂದಾಯ ಇಲಾಖೆಯೂ ನಾಶವಾಗಿದೆ. ಪೊಲೀಸ್ ಇಲಾಖೆಯೂ ಲಂಚಕ್ಕೆ ಸೇರಿದೆ, ಡಾಕ್ಟರ್‌ಗಳೂ ಸಹ ಸೇರಿದ್ದಾರೆ. ಅವರು ಹೇಗೆ ಸೇರಿದ್ದಾರೆಂದರೆ ಅಲ್ಲಿ ಕೆಲಸ ಮಾಡುವಾಗ ಕಲ್ಲು ಉರುಳಿ ಸತ್ತರೆ ಅಥವಾ ಕೈ ಮುರಿದುಕೊಂಡರೆ ಇದಕ್ಕೆ ಅವರು ಇವರ ಪರವೇ ಸೇರಿಕೊಂಡಿದ್ದಾರೆ. ಅಂತಹ ನೂರೆಂಟುಕತೆಗಳು ಕಲ್ಲಿನ ಹಿಂದೆ ಇದೆ, ಅವಕ್ಕೆ ಇದನ್ನು ನಿಲ್ಲಿಸುವುದಕ್ಕೆ ಪ್ರಯತ್ನವಾಗಬೇಕು. ತಾವು ಈ ಬಗ್ಗೆ ಹಿಂದೆ ಸುಧಾ ಪತ್ರಿಕೆಯಲ್ಲಿ ಓದಿರಬಹುದು. ಅದರಲ್ಲಿ ನಾಲ್ಕೈದು ಪುಟಗಳ ಇಳಕಲ್‌ನ ವರದಿ ಬಂತು. ಅದು ತನ್ನ ವರದಿಯಲ್ಲಿ ಕಲ್ಲುಗಳು ಹೇಗಿತ್ತು, ಮುಂದೆ ಹೇಗೆ ಆಯಿತು ಎಂಬ ಚಿತ್ರವನ್ನು ಹೇಳುವಂತೆ ಇತ್ತು. ಈ ರೀತಿಯಾಗಿ ಕತೆಯನ್ನು ಹೇಳುವಾಗ ಇದರಲ್ಲಿ ನಡೆದಿರುವಂತಹ ಭ್ರಷ್ಟಚಾರವನ್ನು ಎತ್ತಿ ಹಿಡಿದು ಇದರಲ್ಲಿ ಉನ್ನತವಾದಂತಹ ವ್ಯಕ್ತಿಗಳು ಇದ್ದಾರೆ. ತಾವು ಪ್ರಾಮಾಣಿಕವಾಗಿ ಸಿ.ಬಿ.ಐ.ತನಿಖೆಗೆ ಕೊಡಿ. ಆಗ ಇದರಲ್ಲಿ ಎಲ್ಲಿ ಉನ್ನತ ವ್ಯಕ್ತಿಗಳು ಇದ್ದಾರೆಂಬುದು

ಗೊತ್ತಾಗುತ್ತದೆ. ನಾನು ಬಹಳ ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ತಮಗೆ ಈ ರಾಜ್ಯದ ಬಗ್ಗೆ ಕಳಕಳಿ ಇದೆ, ದಯಮಾಡಿ ಈ ನಿಸರ್ಗ ಸಂಪತ್ತನ್ನು ಉಳಿಸುವಂತಹ ಪ್ರಯತ್ನವಾಗಬೇಕು. ಈಗಾಗಲೇ ಶೇ.80 ಭಾಗ ಹೊರಟು ಹೋಗಿದೆ. ಅದರಲ್ಲಿ ಈ ವೀರಮಣಿ ಅತ್ಯಂತ ಪ್ರಕಾಶಮಾನವಾದಂತಹ ವ್ಯಕ್ತಿಯಾಗಿದ್ದಾರೆ. ಇದರ ಬಗ್ಗೆ ಸಮಗ್ರವಾದಂತಹ ತನಿಖೆಯಾಗಬೇಕು, ಇದರಲ್ಲಿ ಎರಡು ಮಾತು ಇಲ್ಲ ಎನ್ನುವಂತಹ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

+ ಶ್ರೀ ಕಾಗೋಡು ತಿಮ್ಮಪ್ಪ (ಸಾಗರ): ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಆಜ್ಞೆಯ ಬಗ್ಗೆ ಓದುವಾಗ ಒಂದು ವಿಚಾರವನ್ನು ಹೇಳಿದರು. ಅದು ಸುಪ್ರೀಂ ಕೋರ್ಟ್ ನವರೆಗೆ ಹೋಗಿ ಆ ಜಮೀನಿನ ಮಾಲಿಕತ್ವ ಸರ್ಕಾರದ್ದು ಎನ್ನುವಂಥಾದ್ದು ಸಾಬೀತು ಆಗಿದೆ. ಆದರೆ ಈ ಆಜ್ಞೆಯನ್ನು ಕೊಡುವಂತಹ ಸಂದರ್ಭದಲ್ಲಿ ಪುನಃ ಈ ಜಮೀನನ್ನು ಕೊಡುವಾಗ ಸರ್ಕಾರಕ್ಕೆ ತನ್ನ ಹಕ್ಕು ಬಾದ್ಯತೆಯ ಬಗ್ಗೆ ಅನುಮಾನವಿದೆ ಎಂಬ ಬಗ್ಗೆ ಸ್ಪಷ್ಟವಾಗಿದೆ. ಅಂದರೆ ಇವರು ಅದನ್ನು ಲೀಸ್‌ಗೆ ಕೊಟ್ಟಿದ್ದಾರೆ, ಅಂದರೆ ಇದು whichever is earlier ಇದು ಲೀಸೊ, ಕೋರ್ಟ್‌ನಲ್ಲಿ ತೀರ್ಮಾನವಾಗುವುದು whichever is earlier ಎಂದು ಕೊಟ್ಟಿದ್ದಾರೆ. ಇದು ಕೋರ್ಟನಲ್ಲಿ ಉಳಿದಿರುವ ಪ್ರಶ್ನೆಯೇ ಉಳಿದಿಲ್ಲ. ಇದು ಸುಪ್ರೀಕೋರ್ಟಿಗೆ ಹೋಗಿ ಜಮೀನು ಸರ್ಕಾರದ್ದು ಎಂದು ತೀರ್ಮಾನವಾಗಿ ಹೋಗಿದೆ. ತೀರ್ಮಾನವಾಗಿ ಹೋದ ಮೇಲೆ ಮತ್ತೆ ನೀವು ಆಜ್ಞೆಯನ್ನು ಹೊರಡಿಸುವಂತಹ ಸಂದರ್ಭದಲ್ಲಿ ಈ ಜಮೀನಿನ ಮಾಲಿಕತ್ವ ಅನುಮಾನಕ್ಕೆ ಆಸ್ಪದವಾಗುವಂಥ ರೀತಿಯಲ್ಲಿ ಏನು ಹೊರಡಿಸಿದ್ದೀರಲ್ಲಾ, ಇದು ಈ ಜಮೀನಿನ ಹಕ್ಕು ಭಾದ್ಯತೆಯ ಬಗ್ಗೆ ಇನ್ನು ಸರ್ಕಾರಕ್ಕೆ ಅನುಮಾನವಿದೆಯೇ, ಅಥವಾ ಖಚಿತಪಟ್ಟಿದೆಯೇ? ಆ ರೀತಿಯಾಗಿ ಅನುಮಾನ ಬರುವ ರೀತಿಯಲ್ಲಿ ಆಜ್ಞೆಯನ್ನು ಹೊರಡಿಸುವುದಕ್ಕೆ ಏನು ಕಾರಣ?

ಶ್ರೀ ಡಿ.ಕೆ.ಶಿವಕುಮಾರ್ (ಸಾತನೂರು): ಮಾನ್ಯ ಅಧ್ಯಕ್ಷರೆ, ನನ್ನ ಬಳಿ ಸಂಪೂರ್ಣವಾದಂತಹ ಮಾಹಿತಿ ಇಲ್ಲವೆಂದರೂ ಶೇ.10ರಷ್ಟು ಮಾಹಿತಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಸದಸ್ಯರುಗಳು ಕೆಲವು ವಿಚಾರಗಳನ್ನು ಅವರದ್ದೇ ಆದಂತಹ ರೀತಿಯಲ್ಲಿ ಮಾತನಾಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ನಾನು ಒಂದೇ ಮಾತಿನಲ್ಲಿ ಹೇಳುವುದಾದರೆ ಈ ಜಾಗ ಮಾಹಂತೇಶ ಮಠಕ್ಕೆ ಸೇರಿದ್ದು, ಇದು ಸರ್ಕಾರದ್ದು ಅಲ್ಲ, ಜಮ್ ಕಂಪೆನಿಯದ್ದು ಅಲ್ಲ. ಆ ಮಠದವರು ಪಬ್ಲಿಕ್ ಆ್ಯಕ್ಷನ್ ಹಾಕುತ್ತಾರೆ. ಅವರು ನಮ್ಮದು ಸ್ವಂತ ಜಮೀನು ಇದೆ, ಯಾರಾದರೂ ಗಣಿಗಾರಿಕೆ ಮಾಡುವವರು ಬರಬಹುದೆಂದು ಹಾಕುತ್ತಾರೆ. ಇಪ್ಪತ್ತು ಜನರು ಮಾಲಿಕರು ಹೋಗಿ ಅರ್ಜಿಯನ್ನು ಹಾಕಿ ಟೆಂಡರ್‌ನಲ್ಲಿ ಪಾರ್ಟಿಸಿಪೇಟ್ ಮಾಡಿ ಹೈಯೆಸ್ಟ್ ಟೆಂಡ್ ಜಮ್ ಗ್ರಾನೆಟ್‌ನವರು ನಾವು ಜಾಸ್ತಿ ಕೊಡುತ್ತೇವೆಂದು ಅವರಿಗೋ ಮತ್ತೊಬ್ಬರಿಗೋ ಸೆಟಲ್‌ಮೆಂಟ್ ಮಾಡಿ ಸರ್ಕಾರ ಅವರಿಗೆ ಲೀಸ್ ಕೊಟ್ಟಿದೆ. ಅವರು ಇಪ್ಪತ್ತು

ವರ್ಷಗಳು ಕೆಲಸವನ್ನು ಮಾಡಿದ್ದಾರೆ. ಅವರು ಈ ಕೆಲಸವನ್ನು ಮಾಡುವುದಕ್ಕೆ ಮುಂಚೆ ಈ ಕಲ್ಲನ್ನು ಜಲ್ಲಿ ಒಡೆಯುತ್ತಿದ್ದರು. ಅವರು ಬಂದು ಡಿಮ್ಯಾಂಡ್ ಕ್ರಿಯೇಟ್ ಮಾಡಿ ಇಂಟರ್ ನ್ಯಾಷನಲ್ ಮಾರ್ಕೆಟ್‌ನಲ್ಲಿ ಹೆಸರನ್ನು ತಂದು ಇವತ್ತು ಒಂದು ಕಲ್ಲಿಗೆ 25-35ಸಾವಿರ ಬೆಲೆ ತಂದಿರುವಂತಹ ಈ ಕಾಲದಲ್ಲಿ ಅದು ಜಮ್ ಕಂಪೆನಿ ಎಂಬುದರಲ್ಲಿ ಅನುಮಾನವೇ ಇಲ್ಲ. ಇವತ್ತು ಅಲ್ಲಿ ಏನೇ ಮಾಡಿದ್ದರೂ ಆ ಕಂಪನಿಯೇ ಕಾರಣ, ಇವತ್ತು ಆ ಪ್ರೈವೇಟ್ ಕಂಪೆನಿಯನ್ನು ತೆಗೆದುಕೊಂಡು ಇವತ್ತು ಕೆಲಸ ಮಾಡಿದ್ದಾರೆ. ಸರ್ಕಾರದವರು ಅವರಿಗೆ ಲೀಜ್‌ಗೆ ಕೊಟ್ಟಿದ್ದಾರೆ. ಮೊನ್ನೆ ಡೆಪ್ಯೂಟಿ ಕಮೀಷನರ್ ಕಂಬೈಯವರು ಇದು ಸರ್ಕಾರದ್ದು ಎಂದು ಆರ್ಡರ್ ಹೊರಡಿಸಿದಾಗ ಇಲ್ಲ, ನಮ್ಮದು ಎಂದು ಇವರು ಹೋದಾಗ ಇದು ಸುಪ್ರೀಂ ಕೋರ್ಟಿಗೆ ಹೋಯಿತು. ಅಲ್ಲಿ ಇದು ಸರ್ಕಾರದ್ದು ಎಂದು ತೀರ್ಮಾನ ಆಗಲಿಲ್ಲ. ಇದರ ಬಗ್ಗೆ ಲೋಕಲ್ ಕೋರ್ಟ್‌ನಲ್ಲಿ ತೀರ್ಮಾನವಾಗಲಿ, ನಾವು ಇದರ ಬಗ್ಗೆ ತೀರ್ಮಾನ ಮಾಡುವುದಕ್ಕೆ ತಯಾರಿಯಲ್ಲವೆಂದು ಇದನ್ನು ಲೋಕಲ್ ಕೋರ್ಟಿಗೆ ಕಳುಹಿಸಿದರು. ಇದನ್ನು ಲೋಕಲ್ ಕೋರ್ಟಿಗೆ ಕಳುಹಿಸಿದಾಗ....

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್ ಇದೆ, ಒಬ್ಬ ಜವಾಬ್ದಾರಿಯಾದಂತಹ ಪ್ರತಿನಿಧಿಯಾಗಿ, ಶಾಸಕನಾಗಿದ್ದುಕೊಂಡು ಹೈಕೋರ್ಟ್ ಈ ಜಮೀನ್ನು ಸರ್ಕಾರದ್ದು ಎಂದು ಸ್ಪಷ್ಟವಾಗಿ ಆದೇಶವನ್ನು ಕೊಟ್ಟಮೇಲೆ ಈಗ ಇವರು ಮಹಂತೇಶ ಮಠದ್ದು ಎಂದು ಹೇಳುವುದಕ್ಕೆ ಇವರು ಯಾರು? ಕೋರ್ಟ್ ತೆಗೆದುಕೊಂಡ ತೀರ್ಮಾನದ ವಿರುದ್ಧ ಮಾತನಾಡುವುದಕ್ಕೆ ಇವರಿಗೆ ಯಾರಾದರೂ ಅಧಿಕಾರವನ್ನು ಕೊಟ್ಟಿದ್ದಾರೆಯೇ ಯಾವ ರೀತಿಯಲ್ಲಿ ದೊಡ್ಡದಾಗಿ ಗ್ರಾನೈಟ್ ಲೂಟಿ ನಡೆಯುತ್ತಿದೆ. ಅದರ ಪರವಾಗಿಯೇ ಸದನದೊಳಗೆ ಮಾತನಾಡಿದರೆ ಹೈಕೋರ್ಟ್ ಇದು ಸರ್ಕಾರಕ್ಕೆ ಸೇರಿದ್ದು ಎಂದು ತೀರ್ಮಾನವನ್ನು ಕೊಟ್ಟಮೇಲೆ ಅಲ್ಲವೆಂದು ಹೇಳುವುದಕ್ಕೆ ಈ ಸದನದಲ್ಲಿ ಅಧಿಕಾರವಿದೆಯೇ ಎಂಬುದನ್ನು ತಾವು ಹೇಳಬೇಕು.

ಅಧ್ಯಕ್ಷರು: ಸುಪ್ರೀಂ ಕೋರ್ಟ್ ಆರ್ಡರ್‌ಅನ್ನು ಕೈಯಲ್ಲಿಟ್ಟುಕೊಂಡು ಓದಿ ಸುಪ್ರೀಂ ಕೋರ್ಟ್‌ನಲ್ಲಿ ಅದು ಇತ್ಯರ್ಥವಾಗಿದ್ದರೆ ಅದು ಇಲ್ಲವೆಂದು ಅವರು ಹೇಳಿದರೆ ಅವರಿಗೆ ಅಧಿಕಾರ ಆಗ ಇರುವುದಿಲ್ಲ. ಇವರು ಸುಪ್ರೀಂ ಕೋರ್ಟಿಗಿಂತ ದೊಡ್ಡವರೇನಲ್ಲ. ಈಗ ಅವರ ವಾದವೇನು ಇದೆ ಅದು ಅವರು ಹೇಳಲಿ. ಅವರು ಈ ಸದನದ ಸದಸ್ಯರಾಗಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಅವರು ಹೇಳುವುದರಲ್ಲಿ ನನ್ನದು ಏನೂ ವಿರೋಧವಿಲ್ಲ. ಅವರಿಗೆ ಮಾತನಾಡುವುದಕ್ಕೆ ಸಂಪೂರ್ಣವಾದ ಸ್ವಾತಂತ್ರವಿದೆ. ಆದರೆ ಅವರು ಮಾತನಾಡಿದ್ದನ್ನು ರಾಜ್ಯದ ಜನರು, ದೇಶದ ಜನರು ನೋಡುತ್ತಾ ಇರುತ್ತಾರೆ. ನಾವು ಯಾರ ಪರ ಇದ್ದೇವೆ, ಯಾರು ಇಲ್ಲವೆನ್ನುವಂಥಾದ್ದನ್ನು ಅವರು

ದಾಖಲೆಗಳು ಇಲ್ಲದೇ ಮಾತನಾಡುವಂಥಾದ್ದು ನಮಗೆ ಯಾರಿಗೂ ಶೋಭೆಯನ್ನು ತರುವಂಥಾದ್ದು ಅಲ್ಲವೆನ್ನುವಂಥ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು: ಈಗ ಕೆಲವು ಪ್ರೈವೇಟ್ ಮೆಡಿಕಲ್ ಕಾಲೇಜ್ ವಿಚಾರ ಬರುತ್ತದೆ. ಕೆಲವರು ಪ್ರೈವೇಟ್ ಮೆಡಿಕಲ್ ಕಾಲೇಜನ್ನು ನಡೆಸುವಂತಹ ಆಸಕ್ತಿ ಇರುವಂಥವರು ಈ ಸದನದಲ್ಲಿದ್ದಾರೆ. ಆಗ ಅವರದ್ದೇ ಒಂದು ನಿಲುವಾಗುತ್ತದೆ, ಬೇರೆಯವರದ್ದೇ ಒಂದು ನಿಲುವಾಗುತ್ತದೆ. Each one is entitled to his own opinion. He is a Member of the House.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಒಂದು ಸ್ಪಷ್ಟವಾದಂತಹ ಆದೇಶವಿದ್ದ ಮೇಲೆ ಅದಕ್ಕೆ ತಕ್ಕಂತೆ ಗೌರ್ವನ್‌ಮೆಂಟ್ ಒಪ್ಪಿಕೊಂಡು ಇನ್ನೊಂದು ಆರ್ಡ್‌ರ್ ಅನ್ನು ಇಷ್ಯೂ ಮಾಡಿದ ಮೇಲೆ ಒನರ್ಸ್ ಶಿಫ್ ಬಗ್ಗೆ ಮತ್ತೊಂದರ ಬಗ್ಗೆ ನಾವು ಡಿಸ್‌ಪ್ಯೂಟ್ ಮಾಡತಕ್ಕಂಥದ್ದಲ್ಲ. All land belongs to government. ಜಗಳವಾಗುವಂಥಾದ್ದು ಜಮೀನುಗಳಿಗೋಸ್ಕರ ಮತ್ತು ಬೌಂಡರಿಗೋಸ್ಕರ ಅದು ಇಂಟರ್ ಸ್ಟೇಟ್‌ದ್ದು ಇರಬಹುದು. ಆದರೂ ನಾವು ಒನರ್ ಶಿಫ್ ಅನ್ನು ಸರ್ಟನ್ ಪೀಪಲ್‌ಗೆ ಕೊಟ್ಟಿರುತ್ತೇವೆ. ಅದನ್ನು ತೆಗೆದುಕೊಳ್ಳುವಂಥಾದ್ದಕ್ಕೆ ಗೌರ್ವನ್‌ಮೆಂಟ್‌ಗೆ ಹಕ್ಕಿದೆ. ಅದಕ್ಕೋಸ್ಕರ ನಾವು ಅದನ್ನು ಹೇಳುವುದು ಬೇಡ. ಈಗ ಅದನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದಾರೆಂಬ ಸ್ಟೇಟ್‌ಮೆಂಟ್....

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರು ಎತ್ತಿದಂಥ ವಿಷಯವನ್ನು ಕ್ಲಾರಿಫೈ ಮಾಡುವುದಕ್ಕೆ ಮಾನ್ಯ ಶಿವಕುಮಾರ್‌ರವರು ಏನು ಹೇಳುತ್ತಾರೆಂದರೆ ಟೈಟಲ್ ವಿಚಾರದಲ್ಲಿ ಸುಪ್ರೀಂ ಕೋರ್ಟ್ ತನ್ನ ಒಪೀನಿಯನ್ ಅನ್ನು ಕೊಟ್ಟಿಲ್ಲ. ಅವರು ಏನು ಹೇಳುತ್ತಾರೆಂದರೆ this matter is referred back to the Lower Court, ಎಂದು ಹೇಳುತ್ತಾರೆ. ಅವರ ಹತ್ತಿರ ಏನು ದಾಖಲೆಗಳು ಇದೆಯೋ, ಈಗ ತಮ್ಮ ಹತ್ತಿರ ಸುಪ್ರೀಂ ಕೋರ್ಟ್‌ನಲ್ಲಿ ಫೈನಲ್ ಆಗಿದೆ ಎಂಬ ಬಗ್ಗೆ ಮಾಹಿತಿ ಇದ್ದರೆ ಅದನ್ನು ತಾವು ಕಳುಹಿಸಿಕೊಡಿ. ಅವರ ಹತ್ತಿರ ಇರುವುದನ್ನು ಕೊಡಲಿ, ಟೈಟಲ್ ವಿಚಾರದಲ್ಲಿ if the Supreme Court has taken a final decision, then whatever he says is wrong. Supposing the Supreme Court has not held....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಗೌರ್ವನ್‌ಮೆಂಟ್ ಆರ್ಡರ್ ಸರಿಯಿಲ್ಲವೆಂದು ಅರ್ಥವಾಗುತ್ತದೆ. ಆದುದರಿಂದ ಈ ಸದನದಲ್ಲಿ ಇದರ ಬಗ್ಗೆ ಭಿನ್ನಾಭಿಪ್ರಾಯವಿದೆ ಎನ್ನುವಂಥಾದ್ದು without seeing the records, ಬಂದು ಬಿಡುತ್ತದೆ. ಇವತ್ತು ನಾವು ನೇರವಾಗಿ ಚಾರ್ಜ್ ಮಾಡತಕ್ಕಂಥದ್ದು ಏನೆಂದರೆ ನೀವು ಈ ಸುಪ್ರೀಂ ಕೋರ್ಟ್ ಹೈಕೋರ್ಟ್, ಡೆಪ್ಯೂಟಿ ಕಮೀಷನರ್‌ಗೆ ಏನು ವಾದವನ್ನು

ಇಟ್ಟುಕೊಂಡು ಹೋಗಿದ್ದೀರೋ ಅದನ್ನು ಸಂಪೂರ್ಣವಾಗಿ ಸುಪ್ರೀಂಕೋರ್ಟ್ ಎತ್ತಿ ಹಿಡಿದ ಮೇಲೆ ಪುನಃ ಅದನ್ನು ತಿರುಚಿ ಮುರುಚಿ ಅವರಿಗೆ ಕೊಡುವಂಥ ಅವಶ್ಯಕತೆ ಇರಲಿಲ್ಲವೆನ್ನುವಂಥಾದ್ದನ್ನು ಮಾನ್ಯ ನಂಜೇಗೌಡರೂ ಸಹ ಹೇಳಿದ್ದಾರೆ. ಆದುದರಿಂದ ಅದಕ್ಕೆ ಪುನಃ ಇನ್ನೊಂದು ವಿಷಯವನ್ನು ಹೇಳತಕ್ಕಂಥ ಅವಶ್ಯಕತೆ ಇಲ್ಲ.

ಶ್ರೀ ಬಿ.ವಿ.ಶ್ರೀರಾಂರೆಡ್ಡಿ: ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟ್ ಏನು ಹೇಳುತ್ತದೆಂದರೆ, Justice Kuldip Singh and Justice Sageer Ahmad:

> "We see no ground to interfere with the impugned judgment of the High Court. We are of the view that the High Court has rightly come to the conclusion that in its jurisdiction under Article 226 and 227, it cannot go into the question whether the land in dispute was a waste land or cultivated land in terms of Section 7 of the Bombay Personal Inam Abolition Act of 1954. The High Court has further held that the petitioner may be, if so, advised to approach the Civil Court in this respect. We make it clear...."

4.50 ಪಿ.ಎಂ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇನಾಂ ಅಬಾಲಿಷನ್ ಆಕ್ಟ್ ಬಂದ ಮೇಲೆ ಲ್ಯಾಂಡ್ ರಿಫಾರ್ಮ್ ಆಕ್ಟ್ ಬಂದ ಮೇಲೆ 515 ಎಕರೆಯನ್ನು ಇಟ್ಟುಕೊಳ್ಳುವುದಕ್ಕೆ ಯಾರಿಗೂ ಸಾಧ್ಯವೇ ಇಲ್ಲ. Automatically it will be forfeited to the government, if anybody claims. On the appointed day, it vests with the government. ಯಾವುದು ದಿನಾಂಕ: 14ನೇ ಏಪ್ರಿಲ್ ಇರಬಹುದು, ಆ ದಿನಾಂಕಕ್ಕೆ all land vests with the government.

MR. SPEAKER:- I don't need to be convinced about that aspect. But, the further observation of the court that if the petitioner so desires he can approach.

ಶ್ರೀಮತಿ ಪ್ರಮೀಳಾ ನೇಸರ್ಗಿ: ಅಲ್ಲಿ ಜ್ಯುಡಿಷಿಯಲ್‌ಗೆ ಹೋಗಬೇಕು, ಇನಾಂ ಲ್ಯಾಂಡ್ಸ್ ಎಂಬುದು ಅಡ್ಮಿಟೆಡ್ ಸರ್ಕಾರಕ್ಕೆ ವೆಸ್ಟ್ ಆದಮೇಲೆ ಯಾವ ಖಾಸಗೀಯವರೂ ತೆಗೆದುಕೊಳ್ಳಲು ಆಗುವುದಿಲ್ಲ.

ಅಧ್ಯಕ್ಷರು: ದಯಮಾಡಿ ।ನಾನು ತಮಗೆ ಕೇಳುತ್ತೇನೆ 'my appraoch Civil Court for relief.' ಎಂದು with regard to the title, ಹೇಳಿದರೆ haven't they kept the matter open? Haven't they kept the issue open, alive?

SMT. PRAMILA NESARGI:- Provided he goes and establishes in the Civil Court. ಅವನು ಹೋಗಿಯೇ ಇಲ್ಲವಲ್ಲಾ, ಸಿವಿಲ್ ಕೋರ್ಟ್‌ಗೆ ಹೋಗಿ ಹಕ್ಕನ್ನು ಎಸ್ಟಾಬ್ಲಿಷ್ ಮಾಡಬೇಕಾಗಿತ್ತು, ಸಿವಿಲ್ ಕೋರ್ಟಿಗೆ ಹೋಗೇ ಇಲ್ಲ.

Sri MALLIKARJUNA KHARGE: As you know that the ceiling....

MR. SPEAKER:- As the Hon'ble Leader of Opposition knows, ಇನಾಂ ಅಬಾಲಿಷನ್ ಆಕ್ಟ್ ಬಂದ ಮೇಲೆ, ನಮ್ಮ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಜಾರಿಗೆ ಬಂದ ಮೇಲೆ ಯಾರೂ ಅಷ್ಟು ಹ್ಯೂಜ್ ಎಕ್ಸ್‌ಟೆಂಟ್ ಆಫ್ ಲ್ಯಾಂಡನ್ನು ಓನರ್‌ಶಿಫ್‌ನಲ್ಲಿ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ ಅದರ ಬಗ್ಗೆ ನನಗೆ ಯಾರೂ ಕನ್ವಿನ್ಸ್ ಮಾಡಬೇಕಾಗಿಲ್ಲ. I am aware of it and regarding the Title, the apex court has not taken a final decision. They have kept the matter alive.

SRI G.V.SRIRAMA REDDY:- The Supreme Court has said that they will not interfere in the High Court judgment.

MR. SPEAKER:- Please asume your seat. ಇಂಥ ವಿಚಾರದಲ್ಲಿ ನಾನು ಜಾಸ್ತಿ ಮಾತನಾಡಿದರೆ ನನಗೆ ಬೇರೆ ಆಸಕ್ತಿ ಇದೆಯೇನೋ ಎನ್ನುವ ಅಭಿಪ್ರಾಯ ಬಂದುಬಿಡಬಹುದು, ನನಗೆ ಆ ಭಯವಿದೆ. ನಾನು ಏನು ಹೇಳುತ್ತೇನೆಂದರೆ ಆರ್ಗ್ಯೂಮೆಂಟ್ ಮಾಡುವಾಗ; ಹೌಸ್‌ನಲ್ಲಿ ಯಾವಾಗಲೂ ಒಂದು ವಿಷಯವನ್ನು ಪ್ರೆಸೆಂಟ್ ಮಾಡುವಾಗ, ಎಲ್ಲಾ ಡೈಮೆನ್‌ಷನ್‌ನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡಬೇಕಾಗುತ್ತದೆ. You cannot read out

one statement, one particular sentence that is convenient to you and leave out the rest. They have said 'we see no reason to interfere with the impugned judgment of the High Court.' Further they said 'This issue is kept alive.' Try to cover all the points. When you make an argument, you cannot just choose something and say.

SRI. M.MALLIKARJUNA KHARGE:- After this Land Reforms Act and the Inam Abolition Act, is there any owner or Mutt having more than 500 acres? Can you allow? Is there any law? This is simple. ಇದು ಇರದೇ ಇದ್ದರೆ In the absence of that interpretation, When there is a clear law, not man or no individual or no institution can hold double the ceiling and no individual can hold more than 54 acres? ಅಂದ ಮೇಲೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸರ್ಕಾರವೇ ಅವನ ಪರವಾಗಿ ವಕಾಲತ್ತು ವಹಿಸಿ ಒಂದು ಹೊಸ ಸರ್ಕಾರಿ ಆಜ್ಞೆಯನ್ನು ಹೊರಡಿಸಿ, ಅಪ್ಪ ನೀನು ಎಲ್ಲಾ ಕಲ್ಲು ತೆಗಿ, ಅಷ್ಟರಲ್ಲಿ ಏನಾಗುತ್ತದೆಯೋ ನೋಡೋಣ. ಅದರಲ್ಲಿ ನಮಗೆ ನಿಮ್ಮದೋ ಅಥವಾ ಸರ್ಕಾರದ್ದೋ ಎಂದು ಸಂಶಯವಿದೆ. ಇಂಥ ಒಂದು ಆಜ್ಞೆ ಮಾಡುತ್ತಾರೆಂದರೆ ಸರ್ಕಾರ ಒಂದು ಕ್ಷಣ ಅಧಿಕಾರದಲ್ಲಿ ಮುಂದುವರೆಯಬಹುದೇ? ಇದು ಎಂತಹ ಅನ್ಯಾಯ.

ಶ್ರೀ ಡಿ.ಕೆ.ಶಿವಕುಮಾರ್: ಸುಪ್ರೀಂಕೋರ್ಟ್ ಬಿಜಾಪುರ್ ಕೋರ್ಟ್‌ಗೆ ವಾಪಸ್ ಕಳುಹಿಸಿದ ಮೇಲೆ, ಬಿಜಾಪುರದ ಕೋರ್ಟ್ ನೀನು ಶೇಕಡ 10 ಎಫ್ ಓಬಿ ವ್ಯಾಲ್ಯೂ ಮೇಲೆ ಬ್ಯಾಂಕ್‌ನಲ್ಲಿ ಡೆಪಾಸಿಟ್ ಮಾಡಿ ಕಲ್ಲು ತೆಗೆದುಕೊಂಡು ಹೋಗೆಂದು ಆದೇಶ ಕೊಡುತ್ತದೆ. ವಿಚಾರ ತಿಳಿದುಕೊಳ್ಳದೆ ಮಾತನಾಡುವುದಲ್ಲ, ಜಯರಾಂ ಎಂತಲ್ಲ, ನನಗೂ ಕೂಡ ಇದರಲ್ಲಿ ಆಸಕ್ತಿ ಇದೆ; ಸತ್ಯವೇನೆಂಬುದನ್ನು ನಾನೂ ಹೇಳಬೇಕಾಗಿದೆ. ಆ ಶೇಕಡ 10 ಕೊಟ್ಟ ಮೇಲೆ, ಸರ್ಕಾರದವರು ಅವರಿಗೆ ಪರ್ಮಿಟ್ ಕೊಡಲಿಲ್ಲ, ತಿರುಗಾಡಿಸಿ ಕೊಡಬಾರದ ತೊಂದರೆಯನ್ನು ಕೊಟ್ಟರು. ಆಮೇಲೆ ಮತ್ತೆ ಕೋರ್ಟ್ ಏನು ಹೇಳುತ್ತದೆ ಎಂದರೆ, ಬರೀ ಡಿಡಿಯನ್ನು ಅವರ ಕಛೇರಿಗೆ ಕಳುಹಿಸಿ ಬಿಟ್ಟು ನೀನು ಪೋಲಿಸ್ ರಕ್ಷಣೆಯನ್ನು ತೆಗೆದುಕೊಂಡು ಟ್ರಾನ್ಸ್‌ಪೋರ್ಟ್ ಮಾಡು ಎಂದು ಹೇಳುತ್ತದೆ. ಸರ್ಕಾರಕ್ಕೆ ವಿಧಿ ಇರಲಿಲ್ಲ, They had to give them leases. They had to give them permit. ಕೊಟ್ಟು ಅವರನ್ನು ಕಳುಹಿಸಬೇಕಾದಂಥ ಪರಿಸ್ಥಿತಿ ಬಂತು. ಅದರ ಜೊತೆಗೆ ಈ ಜೆಮ್ ಕಂಪನಿಯವರು ಒಬ್ಬರೇ ಅಲ್ಲ, 515 ಎಕರೆ

ಜಮೀನಿನಲ್ಲಿ ಇವರು ಕೊಟ್ಟಿರುವುದು ಬರೀ 216. ಇವರ ಹತ್ತಿರ ಸರ್ಕಾರ ಕುತ್ತಿಗೆ ಹಿಸುಕಿ ಹತ್ತು ಕೋಟಿ ಅರವತ್ತು ನಾಲ್ಕು ಲಕ್ಷರೂಪಾಯಿಗಳನ್ನು ಹಿಂಸೆ ಮಾಡಿ ತೆಗೆದುಕೊಂಡರು. ಇನ್ನಿಬ್ಬರು ಕೆಲಸ ಮಾಡುತ್ತಿದ್ದಾರೆ, ಅವರಿಂದಲೂ ತೆಗೆದುಕೊಳ್ಳಬಹುದಾಗಿತ್ತಲ್ಲಾ? ಅವರ ಹಣವನ್ನು ತೆಗೆದುಕೊಳ್ಳಬಹುದಾಗಿತ್ತಲ್ಲಾ?

ಅಧ್ಯಕ್ಷರು: ಹೊರಗೆ ಬರಲಿ. ಆ ಕಂಪನಿಯ ಹೆಸರನ್ನು ಹೇಳಿ.

ಶ್ರೀ ಡಿ.ಕೆ.ಶಿವಕುಮಾರ್: ಒಂದು ರಾಜಶ್ರೀ ಗ್ರಾನೈಟ್, ಯಾವುದೋ ಬಿಟಿನಿ ಟಿಂಬರ್ ಕಂಪನಿ. ಅವರೂ ಕೂಡ ಬರೀ ಕೋರ್ಟ್ ಆದೇಶದ ಮೇಲೆ ಕೆಲಸ ಮಾಡುತ್ತಿದ್ದಾರೆಯೇ ಹೊರತು, ಬೇರೆ ಇನ್ನೇನೂ ಇಲ್ಲ.

SRI G.V.SRIRAMA REDDY:- The High Court has clearly said:

> "It became all the more important for the petitioner to establish that the land in question shall not vest with the government and that he has got a right to excavate the mine. Section 70 of the Karnataka Land Reforms Act read with Section 7 of the Bombay Personal Inam Abolition Act would say that right vests with respect to the mines and minerals and the produce shall vest absolutely with the State Government, and the State Government has been given right and power which are necessary for the enjoyment and disposal of each right subject to provisions of Mines and Minerals (R & R) Act, 1967 as per the Scheme of the Section 7 of the above-said Act, the land of the type described therein shall vest in the Government and the right to minerals as per Section 70 of the Karnataka Land Revenue Act shall ordinarily vests with the Government."

ಇದಕ್ಕಿಂತ ಸ್ಪಷ್ಟತೆ ಏನು ಬೇಕು? ಈ ಆದೇಶದಲ್ಲಿ ನಾವು ಮಧ್ಯಪ್ರವೇಶ

ಮಾಡುವುದಿಲ್ಲವೆಂದು ಸುಪ್ರೀಂಕೋರ್ಟ್ ಸ್ಪಷ್ಟವಾಗಿ ಹೇಳಿಬಿಟ್ಟಿದೆ. And then what order the Court has to give? ಸುಪ್ರೀಂಕೋರ್ಟಿನ ಆದೇಶ ದಿನಾಂಕ....

MR. SPEAKER:- It is alright. Let him have his say. ಅವರ ಡಿಫೆನ್ಸ್ ಏನಿದೆ ಎನ್ನುವುದನ್ನು ಹೇಳಲಿ, He is a man in this trade.

SRI G.V.SRIRAMA REDDY:- 20.7.96, Civil Court....

MR. SPEAKER:- It is alright. Let us hear the other Member.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸುಪ್ರೀಂಕೋರ್ಟ್ ಬಹಳ ಸ್ಪಷ್ಟವಾಗಿ ಹೇಳಿದೆ, ಈ ಆದೇಶದ ಮೇಲೆ ತಮಗೆ ಅನ್ಯಾಯವಾಗಿದೆ ಎಂದು ಅನಿಸಿದರೆ he can approach any court of law, ಎಂದು ಹೇಳಿದೆ. ಅವನು ಬಾಗಲ್‌ಕೋಟೆಗೆ ಹೋಗಿರಬಹುದು, ಇನ್ನೊಂದು ಕೋರ್ಟ್‌ಗೆ ಹೋಗಿರಬಹುದು. ನಿಮ್ಮ ಪ್ರಕಾರವೇ ಬಾಗಲ್‌ಕೋಟೆ ಸಿವಿಲ್ ಕೋರ್ಟ್ ಹೇಳಿರುವ ರೀತಿಯಲ್ಲೇ ಶೇಕಡ 10 ರಷ್ಟು ಎಂದರೆ ಹಣವೆಷ್ಟಾಯಿತು, ಲೆಕ್ಕ ಹಾಕಿ. ನೀವು ಹೈಕೋರ್ಟ್ ಆದೇಶವನ್ನು ಒಪ್ಪುತ್ತೀರೋ, ಲೋಯರ್ ಕೋರ್ಟ್ ಆದೇಶವನ್ನು ಒಪ್ಪುತ್ತೀರೋ? ಹೈಕೋರ್ಟ್ ಆದೇಶದಲ್ಲಿ ಶೇಕಡಾ 25 ಎಫ್‌ಓಬಿ ಎಂದಿದೆ. ಆದರೆ ಹೈಕೋರ್ಟ್ ಆದೇಶ ಪ್ರಿವೈಲ್ ಆಗುತ್ತದೋ ಲೋಯರ್ ಕೋರ್ಟ್ ಆದೇಶ ಪ್ರಿವೇಲ್‌ವಾಗುತ್ತದೆಯೋ?

ಅಧ್ಯಕ್ಷರು: ಶ್ರೀರಾಮರೆಡ್ಡಿಯವರೇ, ನೋಡೋಣ, ಶಿವಕುಮಾರ್‌ರವರ ಮಾತನಾಡಿ.

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು): ಲೇಟೆಸ್ಟ್ ಆರ್ಡರ್ ಪ್ರಿವೈಲ್ ಆಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಿಮ್ಮ ದಿನಾಂಕ, ಅವರ ದಿನಾಂಕವನ್ನು ತೆಗೆದುಕೊಳ್ಳಿ.

ಶ್ರೀ ಕಾಗೋಡು ತಿಮ್ಮಪ್ಪ: ಸಿವಿಲ್ ಕೋರ್ಟ್‌ಗೆ ಹೋಗುವುದಕ್ಕೆ ಜ್ಯೂರಿಸ್ಡಿಕ್ಷನ್ ಏನಿದೆ? ಇನಾಂ ಅಬಾಲಿಷನ್ ಆಕ್ಟ್ ಪ್ರಕಾರ ಸಿವಿಲ್ ಕೋರ್ಟ್‌ಗೆ ಹೋಗುವುದಕ್ಕೆ ಅಧಿಕಾರವೇನಿದೆ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: 27 ಜೂನ್ 1997 ರಲ್ಲಿ ಹೈಕೋರ್ಟ್ ಜಡ್ಜ್‌ಮೆಂಟ್ ಆಗುತ್ತದೆ, 30-7-1996ರಲ್ಲಿ ಸುಪ್ರೀಂ ಕೋರ್ಟ್ ಅದರ ಬಗ್ಗೆ ಆದೇಶ ಮಾಡುತ್ತದೆ, ಇವರು ಕೊಟ್ಟಿರತಕ್ಕಂಥದ್ದು 27-3-1997 ಗೌರ್ನ್‌ಮೆಂಟ್ ಜಿ.ಓ.

ಅಧ್ಯಕ್ಷರು: ಶಿವಕುಮಾರ್‌ರವರೇ, 1 ಇದನ್ನು ಮುಗಿಸಿ, ಸರ್ಕಾರದಿಂದ ಉತ್ತರವನ್ನು ಹೇಳಿಸೋಣ.

ಶ್ರೀ ಡಿ.ಕೆ.ಶಿವಕುಮಾರ್: ಅಧ್ಯಕ್ಷರೇ ಇದಾದ ಮೇಲೆ, ಕೋರ್ಟ್‌ನವರು ಡಿಪಾಸಿಟ್ ಅನ್ನು ನೀನು ಬ್ಯಾಂಕ್‌ಗೆ ಕಟ್ಟುಬಿಟ್ಟು ಹೋಗು ಎಂದಾಗ ಸರ್ಕಾರದವರಿಗೆ ವಿಧಿನೇ ಇಲ್ಲ, ಅವರ ಹತ್ತಿರ ಹಣ ಕಟ್ಟಿಕೊಳ್ಳದೆ ಅವರಿಗೆ ಪರ್ಮಿಟ್ ಕೊಡಬೇಕಾಗಿತ್ತು. ಆದರೆ ಮದ್ರಾಸ್ ಬ್ಯಾಂಕ್‌ನಲ್ಲಿದ್ದರೆ ಹಣ ತೊಂದರೆಯಾಗುತ್ತದೆಂದು, ಏಕೆಂದರೆ ಬ್ಯಾಂಕ್‌ನವರು ಅವನ ಕಸ್ಟಮರ್ ಬಗ್ಗೆ ಚಿಂತನೆ ಮಾಡುತ್ತಾನೆಯೇ ಹೊರತು ಇನ್ನೊಬ್ಬರ ಬಗ್ಗೆ ಚಿಂತನೆ ಮಾಡುವುದಕ್ಕೆ ಏತಕ್ಕ ಹೋಗುತ್ತಾನೆ, ಅಲ್ಲಿದ್ದರೆ ತೊಂದರೆಯಾಗುತ್ತದೆಂದು ಸರ್ಕಾರದವರು....

ಅಧ್ಯಕ್ಷರು: ಶಿವಕುಮಾರ್‌ರವರೇ, ಅದೆಲ್ಲಾ ಇರಲಿ, ಬ್ಯಾಂಕ್ ಗ್ಯಾರೆಂಟಿ ಕೊಟ್ಟು, ಬ್ಯಾಂಕ್ ಗ್ಯಾರೆಂಟಿನ ಹಣಬೇಕೆಂದು ನೀವು ರಿಯಲೈಸ್ ಮಾಡುವುದಕ್ಕೆ ಹೋದರೆ, ಆತ ಕರೆಸ್ಪಾಂಡೆನ್ಸ್ ಮಾಡಿಕೊಂಡು ಬ್ಯಾಂಕ್‌ನವರು....

ಶ್ರೀ ಡಿ.ಬಿ.ಶಿವಕುಮಾರ್: ಅಧ್ಯಕ್ಷರೆ, ಕಾನೂನಿನಲ್ಲಿ ಅವಕಾಶವಿದ್ದರೆ ಏನು ಮಾಡುವುದಕ್ಕಾಗುತ್ತದೆ? ಕಾನೂನಿನಲ್ಲಿ ಅವಕಾಶವಿತ್ತು, ವಕೀಲರಿದ್ದರು, ಅವನು ತನ್ನ ಕಂಪನಿಯ ಹಿತಾಸಕ್ತಿಯನ್ನು ನೋಡಬೇಕು, ಬ್ಯಾಂಕ್‌ನವರು ಅವರ ಹಿತಾಸಕ್ತಿಯನ್ನು ನೋಡಬೇಕು, ಕೋರ್ಟ್‌ಗೆ ಹೋಗಿ ಸ್ಟೇ ಮಾಡಿಸಿದ, ಅವಕಾಶ ಸಿಕ್ಕಿದ್ದರಿಂದ ಅವನು ರಿಲೀಫ್ ತೆಗೆದುಕೊಂಡಿದ್ದರಲ್ಲಿ ತಪ್ಪೇನಿದೆ?

ಅಧ್ಯಕ್ಷರು: ಬ್ಯಾಂಕ್ ಗ್ಯಾರೆಂಟಿಗೆ ಅರ್ಥ ಏನು ಬರುತ್ತದೆ? ಯಾವುದಾದರೂ ಬ್ಯಾಂಕ್ ಮುಂದೆ ಬಂದು 'ನಾನು ಇಂಥ ವಿಚಾರದಲ್ಲಿ ಗ್ಯಾರಂಟಿ ಕೊಡುತ್ತೇನೆಂದರೆ' ಮುಂದಕ್ಕೆ ಬ್ಯಾಂಕ್‌ನ್ನು ಸರ್ಕಾರ ಹೇಗೆ ನಂಬಬೇಕು? The Chief Secretary, Government of Karnataka is justified in writing to the Government of India.

SRI D.K.SHIVAKUMAR:- There may be delay in handing over the money to the Karnataka Government.

ಅಧ್ಯಕ್ಷರು: ಇದನ್ನು ಸರ್ಕಮ್‌ಸ್ಟೆನ್ಶಿಯಲ್ ಎವಿಡೆನ್ಸ್ ಎಂದು ಕರೆಯುತ್ತಾರೆ. ಸರ್ಕಮ್‌ಸ್ಟೆನ್ಶಿಯಲ್ ಎವಿಡೆನ್ಸ್‌ನಲ್ಲಿ ಏನು ರಿವೀಲ್ ಮಾಡುತ್ತದೆ ಎಂದರೆ the banker has colluded with the borrower.

SRI D.K.SHIVAKUMAR:- It is quite natural. ಕಸ್ಟಮರ್ ಬಗ್ಗೆ ಅವನು ಚಿಂತನೆ ಮಾಡದೆ ಇನ್ನು ಯಾರ ಬಗ್ಗೆ ಚಿಂತನೆ ಮಾಡುತ್ತಾನೆ?

MR. SPEAKER:- The Primary duty of the Bank is to honour its commitments. The Second duty is to protect the customer. ಅಲ್ಲವೇ? ಈಗ ಅವರೆಲ್ಲರೂ ಪ್ರಶ್ನೆ ಕೇಳಿದ್ದು ಆಯಿತು. ಮಂತ್ರಿಗಳು ಉತ್ತರ ಕೊಡಿ. ಯಾರು, ಸಂಸದೀಯ ವ್ಯವಹಾರಗಳ ಮಂತ್ರಿಗಳು ಉತ್ತರ ಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಈ ಪಾಪದ ಕೆಲಸವನ್ನು ಮಾನ್ಯ ನಾಣಯ್ಯನವರ ಮೇಲೆ ಹೊರಿಸುತ್ತಿದ್ದಾರೆ....

ಅಧ್ಯಕ್ಷರು: ಹಾಗಲ್ಲ, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಮಂತ್ರಿಗಳು he is not in good state of health ಮಾನ್ಯ ನಾಣಯ್ಯನವರು ಮಾತನಾಡಲಿ ಎಂದು ನಾನೇ ಸಜೆಸ್ಟ್ ಮಾಡಿದೆ ಮಾನ್ಯ ಯಡಿಯೂರಪ್ಪನವರೇ.

\+ ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಇದು ಪಾಪದ ಕೆಲಸ ಅಲ್ಲ....ಪುಣ್ಯದ ಕೆಲಸ ಎಂದು ಹೇಳುವುದಾದರೆ ನಿಸರ್ಗ ಸಂಪತ್ತನ್ನು ಸ್ವಲ್ಪಮಟ್ಟಿಗೆ ಸೈಂಟಿಫಿಕ್ ಆಗಿ ಮಾಡಿದರೆ ಅದು ಪುಣ್ಯದ ಕೆಲವೂ ಕೂಡ ಆಗುತ್ತದೆ. ಅನ್‌ಸೈಂಟಿಫಿಕ್ ಆಗಿ ಮಾಡಿದರೆ ಅದು ಸ್ವಲ್ಪ ಕೆಲಸವೂ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಶ್ರೀ ನಾಣಯ್ಯನವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಬಹುಶಃ ಆ ಪುಸ್ತಕವನ್ನು ಇವತ್ತು ಇಲ್ಲಿಗೆ ತರಲಿಲ್ಲ. ಆಗ ಬಹಳ ಚೆನ್ನಾಗಿ ಹೇಳಿದ್ದಾರೆ. ಈಗಲೂ ಸಹ ಮಾತನಾಡುವವರು ಅದೇ ನಾಣಯ್ಯನವರು ತಾನೇ?

ಶ್ರೀ ಕಾಗೋಡು ತಿಮ್ಮಪ್ಪ: ಸಿವಿಲ್‌ಕೋರ್ಟ್‌ಗೇನು ಅಬ್ಜೆಕ್ಷನ್ ಸ್ಟೇಟ್‌ಮೆಂಟ್ ಹಾಕಿದ್ದೀರಿ ತೆಗೆಯಿರಿ. ರಿಟ್‌ನ್‌ಸ್ಟೇಟ್‌ಮೆಂಟ್ ತೆಗೆದು ಓದಲಿ ಅವರು.

(INTERRUPTIONS)

SRI M.C.NANAIAH:- I am prepared to give the copies of all documents if you want, by tomorrow or day after tomorrow. I will take up the responsibility. The plaints filed, the objections filed, IAs filed, we will pass on the copies of all the documents to you.

ಶ್ರೀ ಕಾಗೋಡು ತಿಮ್ಮಪ್ಪ: ಈ ನಾಣಯ್ಯನವರು ವಾದಮಾಡುವುದಕ್ಕೆ ಶುರುಮಾಡಿದರೆ ಹೀಗೇ ಮಾಡುತ್ತಿರುತ್ತಾರೆ, ಅವರಿಗೆ ನಾನೊಂದು ಹೇಳುತ್ತೇನೆ, ದಯವಿಟ್ಟು ಸಮಾಧಾನಕ್ಕೆ, Let us discuss in the interests of the State.

SRI M.C.NANAIAH:- This is a serious matter. The

State Government is seriously interested. We are not prepared to forego the interest of the State Government as far as this particular property is concerned. We will see that we will win this case and thereafter we can go before and tell everyone that this is the land of the Government now. The only point of dispute is whether it is a waste land or an uncultivable land, where the Government has got a right to vest it now.

ಶ್ರೀ ಬಿ.ಎಸ್.ಯಡಿಯೂರಪ್ಪ: ಲಾ ಮಿನಿಸ್ಟರ್‌ರವರೇ, ಪಿಎಸಿಯಲ್ಲಿ ಇದೇ ಡಾ:ಎಂ.ಪಿ.ಕರ್ಕಿಯವರು ರಿಪೋರ್ಟ್‌ಕೊಟ್ಟು, ಅವ್ಯವಹಾರದ ಬಗ್ಗೆ ಗ್ರಾನೈಟ್ಸ್‌ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದರು. ಏನೂ ಆಗಲಿಲ್ಲ. ಏನು ಕ್ರಮ ತೆಗೆದುಕೊಂಡಿದ್ದೀರಿ ಅವನ ಮೇಲೆ ಕ್ರಮ ತೆಗೆದುಕೊಳ್ಳುವ ಬದಲು ಅವನಿಗೆ ರಕ್ಷಣೆ ನೀಡಿ, ಸರ್ಕಾರದ ಖಜಾನೆಗೆ ಬರುತ್ತಿದ್ದ ನೂರಾರು ಕೋಟಿ ಬಾರದ ಹಾಗೆ ಮಾಡಿ, ಈ ರೀತಿ ಆಜ್ಞೆ ಹೊರಡಿಸಿದ್ದೀರಿ. ಇದು ಸರ್ಕಾರಕ್ಕೆ ಮರ್ಯಾದೆ ತರುತ್ತದೆಯೇ? ಇದರಿಂದ ನೀವು ಕೊಲ್ಯೂಡ್ ಆಗಿದ್ದೀರೆಂದು ಹೇಳುವುದಕ್ಕೆ ಬರುವುದಿಲ್ಲವೇ? ಇದರಿಂದ ಸ್ಪಷ್ಟವಾಗುವುದಿಲ್ಲವೇ?

ಶ್ರೀ ಎಂ.ಸಿ.ನಾಣಯ್ಯ: ತಪ್ಪಿಸಿಕೊಂಡು ಹೋಗುವುದು ಬೇಡ ಎಂದು ಹೇಳಿ, ನಾವು ಸರ್ಕಾರದ ಹಣವನ್ನು ಉಳಿಸುವುದಕ್ಕೋಸ್ಕರ ಅಲ್ಲಿರತಕ್ಕ 2 ಸಾವಿರ ಜನರಿಗೆ ಕೆಲಸ ಸಿಗಲಿ ಎಂದು ಕೊಡತಕ್ಕದ್ದು ತಮ್ಮ ಮನಸ್ಸಿನಲ್ಲಿಲ್ಲ. ಸರ್ಕಾರಕ್ಕೆ ಬರತಕ್ಕದ್ದನ್ನು ರಕ್ಷಿಸಬೇಕು, ಅದಕ್ಕೋಸ್ಕರ ನಾವು ಈ ಕ್ರಮ ತೆಗೆದುಕೊಂಡಿದ್ದೇವೆ.

DR. M.P.KHARKI:- In a similar case, the Public Accounts Committe has given an opinion in its report submitted on 24th July 1996 has stated that the Government, the Department, the D.P.A.R., and the Advocates are all involved in Granite case. I would like the Government to see the report and the action. And be wise in this matter. ತಾವು ಬಾಗಲಕೋಟೆ ಸಿವಿಲ್‌ಕೋರ್ಟ್‌ನಲ್ಲಿ ಆ ರೀತಿ ಜಡ್ಜಮೆಂಟ್ ಕೊಡಲಿಕ್ಕೆ ಕಾರಣವೇನೆಂಬುದನ್ನು ನೋಡಿದ್ದೀರಾ? ತಮ್ಮ ಅಡ್ವೋಕೇಟ್ ಯಾವ ರೀತಿ ವಾದ ಮಾಡಿದ್ದಾರೆಂದು ನೋಡಿದ್ದೀರಾ? why the Judge has come to that conclusion? He has given the judgment against the Government. Why he has given the judgment

like that? ನಿಮ್ಮ ಅಡ್ವೋಕೇಟ್ ಸರಿಯಾಗಿ ವಾದ ಮಾಡಿದ್ದರೆ, ಇಂತಹ ಒಳ್ಳೆ ಕೇಸ್ ಇರಬೇಕಾದರೆ, ಆ ರೀತಿ ಏಕೆ ಜಡ್ಜಮೆಂಟ್ ಬರುತ್ತಿತ್ತು? ಅವರ ಅಡ್ವೋಕೇಟ್ ಏನು ಮಾಡುತ್ತಾರೋ, ನೋಡಿ ತಾನೇ ಜಡ್ಜ್‌ಮೆಂಟ್ ಕೊಡಬೇಕು The Advocate should be punished. ಅದು ಮಾಡುವುದಕ್ಕಾಗುವುದಿಲ್ಲ.

SMT PRAMILA NESARGI:- After the interim order to pay 25% FOB, you wrote a letter to the Bank. The Bank dishonoured. Did you file contempt against the Bank? Both should have been dragged to the court. Why it has not been done?

SRI M.C.NANAIAH:- Sir, Smt.Pramila has raised a new point. I think that is an area where the Department should look into that.

SMT PRAMILA NESARGI:- It is not a new point. It is an old point.

MR. SPEAKER:- Alright, old new point'.

ಶ್ರೀ ಎಂ.ಸಿ.ನಾಣಯ್ಯ: ಆದ್ದರಿಂದ, ಕೆಂಟೆಮ್ಪ್ಟ್ ಆಫ್ ದಿ ಕೋರ್ಟ್ ಎನ್ನುವ ವಿಚಾರ ಎತ್ತಿದ್ದಾರೆ. Certainly I will get the matter examined. I will do that. This is the assurance I will give, on behalf of the Government As far the case is concerned, let me tell you, since about a month, I have been monitoring this case. The matter is pending before the Civil Court at Bagalkot now. In fact I have asked my Law Secretary. In this particular case, there are two special Counsels appointed by the Department. They are pursuing this case. Two other advocates have been appointed in Bagalkot itself. I have asked the Law Secretary to pursue this matter and see that this case is disposed of very early. It is being done at my level. So far as the case is concerned, it is our responsibility to see that the Government order passed by the Deputy Commissioner

shall be sustained at any cost.

SRI G.V.SRIRAMA REDDY:- What about the Government Order?

(INTERRUPTIONS)

SRI H.N.NANJEGOWDA:- After seeing the entire thing, after hearing the Law Minister also, there appears to be many lapses on the part of many people including advocates which requires a thorough enquiry. We demand an enquiry. Let Mr. Nanaiah suggest some enquiry of his choice. But we are not convinced, not for arguments I am telling...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದರ ಬಗ್ಗೆ ಸಿ.ಬಿ.ಐ., ಎನ್‌ಕ್ವೈರಿ ಮಾಡಿಸಿ. ಇದರಲ್ಲಿ ಯಾರು ಯಾರು ಇನ್‌ವಾಲ್ವ್ ಆಗಿದ್ದಾರೆಂದು ಗೊತ್ತಾಗುತ್ತದೆ. ಇದು 515 ಎಕರೆ ಜಮೀನು, ನೂರು ಕೋಟಿ ರೂಪಾಯಿಗಳಲ್ಲಿ 10 ಕೋಟಿ ರೂಪಾಯಿಗಳನ್ನು ಮಾತ್ರ ಇವರು ಡಿಪಾಸಿಟ್ ಆಗಿ ಇಟ್ಟುಕೊಂಡಿದ್ದಾರೆ. Let us have details thoroughly.

SRI M.C.NANAIAH:- Sir, this is not a matter which should be enquired into either by the House Committee or by the C.B.I., Second thing is, as far as the case is concerned, all these things are arisen because of the interim order of a Civil Court of Bagalkote. Thirdly, it has arisen on account of the observation of the High Court and the Supreme Court wherein they have said, "we cannot look into a civil dispute". Civil dispute will have to be decided by a civil court." That way, the petitioner has gone to the Civil court now. When the matter is in the court, we have been fighting tooth and nail to see that the Government order issued is sustained. We will do that.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದು ಸಿವಿಲ್ ಕೋರ್ಟ್ ಜ್ಯೂರಿಸ್‌ಡಿಕ್ಷನ್‌ಗೆ ಬರುವುದಿಲ್ಲ When the land vests with the Government under the Inams Abolition Act, they cannot get the jurisdiction. ಅದಕ್ಕಾಗಿ ಈ ಇನಾಂ ಅಬಾಲಿಷನ್ ಆ್ಯಕ್ಟನ್ನು ತೆಗೆದು ಬಿಸಾಕಿಬಿಡಿ.

ಶ್ರೀ ಎಂ.ಸಿ.ನಾಣಯ್ಯ: ಸಿವಿಲ್ ಕೋರ್ಟ್ ಆಜ್ಞೆ ಕೊಟ್ಟಾದ ಮೇಲೆ ಏನು ಮಾಡುತ್ತೀರಿ?

SRI G.V.SRIRAMA REDDY:- What is the interest in passing the Government Order when the interim order is there.

SRI M.C.NANAIAH:- That is the relevant point.

(INTERRUPTIONS)

SRI G.V.SRIRAMA REDDY:- My point is, according to you when the Court has passed an interim order allowing that person to quarry, what is the necessity of passing another Government order by the Government?

SRI M.C.NANAIAH:- In the mind of the Government, that High Court order was 10% Government guarantee again.

SRI G.V.SRIRAMA REDDY:- The High Court has given 25% F.O.B.

(INTERRUPTIONS)

SRI M.C.NANAIAH:- That was when the writ petition was pending in the High Court.

SRI G.V.SRIRAMA REDDY:- The High Court has passed for 25% F.O.B.

(INTERRUPTIONS)

ಶ್ರೀ ಎಂ.ಸಿ.ನಾಣಯ್ಯ: 25 ಪರ್‌ಸೆಂಟ್ ಕೊಟ್ಟಿರತಕ್ಕಂಥದ್ದು, when the writ petition was pending in the High Court. ಸುಪ್ರೀಂ ಕೋರ್ಟ್‌ನವರು ನೀವು ಸಿವಿಲ್ ಕೋರ್ಟ್‌ಗೆ ಹೋಗಿ ಎಂದು ಹೇಳಿದರು. ಅಲ್ಲಿಗೆ ಒಂದು ಫೇಸ್ ಮುಗಿದು ಹೋಯಿತು. ಸೆಕೆಂಡ್ ಫೇಸ್ ಎಲ್ಲಿಗೆ ಬರುತ್ತದೆಂದರೆ, ನಾವು ಆಜ್ಞೆ ಮಾಡಿರತಕ್ಕದ್ದು ಸೆಕ್ಷನ್ 7ರ ಪ್ರಕಾರ ಇದು ಸರ್ಕಾರಕ್ಕೆ ಸೇರಿರತಕ್ಕಂಥ ಜಮೀನು. we have said it is waste and uncultivable land and therefore under Section (7) it is vested with the Government. Now the matter which is pending before the Civil Court is, whether it is a waste or a uncultivable land, whether the Government has got a right to vest the land under Section 7. ಆದ್ದರಿಂದ, ಈ ಆಜ್ಞೆಯನ್ನು ಸರ್ಕಾರ ಇಷ್ಯೂ ಮಾಡಿರುವುದು ಏಕೆಂದರೆ ಕೊಟ್ಟಿರತಕ್ಕಂಥ 10 ಪರ್‌ಸೆಂಟ್ ಗ್ಯಾರೆಂಟಿಯನ್ನು ಸರ್ಕಾರ ಪುನಃ ತೆಗೆದುಕೊಂಡು ಈ ಹಿಂದೆ ಗೌರ್ನಮೆಂಟ್ ಗ್ಯಾರಂಟಿ ಕೊಟ್ಟಿರತಕ್ಕ ಹಣ ಬಂದಿಲ್ಲ ಎಂದು ಅನ್‌ಸರ್ಟನಿಟಿ ಬರುವುದು ಬೇಡವೆಂದು, ಅದನ್ನು ಮಾರಾಟ ಮಾಡಿದರೆ ಒಂದು ಎಕರೆಗೆ ಎಷ್ಟು ಹಣ ಬರಬಹುದೆಂದು ಗಣನೆಗೆ ತೆಗೆದುಕೊಂಡು ಮಾಡಲಾಗಿದೆ. ಇದನ್ನು ಆ್ಯಕ್ಷನ್ ಮಾಡಿದರೆ 10 ಕೋಟಿ 67 ಲಕ್ಷ ರೂಪಾಯಿಗಳನ್ನು ಡಿಪಾಸಿಟ್ ಮಾಡಿ ಎಂದು ಹೇಳಿದ್ದೇವೆ. On 31st March 1997, that deposit of Rs.10.67 crores is with the Government. Don't you think we have done this in this interest of the Government? Don't you think this is public interest? If this is not the public interest, what else is the public interest?

(INTERRUPTIONS)

SRI M.C.NANAIAH:- What else could be the public interest? We have done everything in public interest to get the suit disposed of....

(INTERRUPTIONS)

ಶ್ರೀ ಬಿ.ಎಸ್.ಯಡಿಯೂರಪ್ಪ: ಒಂದು ಕಡೆ ಬ್ಯಾಂಕ್ ಗ್ಯಾರಂಟಿಯನ್ನು ಮುಳುಗಿಸಿಬಿಟ್ಟರು, ಅದರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ. ತೆಗೆದುಕೊಂಡಿರುವ 10 ಕೋಟಿ ರೂಪಾಯಿಗಳನ್ನು ವಾಪಸ್ಸ್ ಕಟ್ಟಬೇಕಾಗುತ್ತದೆ. ಅವನಿಗೆ ಅನುಕೂಲವಾಗುವ ಹಾಗೆ ಸರ್ಕಾರ ಆಜ್ಞೆ ಮಾಡಿದೆ; ಜೊತೆಗೆ ಸರ್ಕಾರದ ಅಡ್ವೋಕೇಟ್‌ಗಳು ಸಿವಿಲ್ ಕೋರ್ಟಿನಲ್ಲಿ ಸರಿಯಾಗಿ ಆರ್ಗ್ಯೂ ಮಾಡಲಿಲ್ಲ. ಪೂರ್ಣವಾಗಿ ಆ ಜೆಮ್ ಗ್ರ್ಯಾನೈಟ್

ಕಂಪನಿ ಜೊತೆ ಶಾಮೀಲಾಗಿ, ಈ ಸರ್ಕಾರದ ಖಜಾನೆಯನ್ನು ಹಗಲು ದರೋಡೆ ನಡೆಸಲಾಗುತ್ತಿದೆ, ಜನ ಹಿತ ನಿಮಗೆ ಬೇಕಾಗಿಲ್ಲ. ಇನ್ನು ನಾವು ಏನು ಹೇಳಬೇಕು?

SRI M.C.NANAIAH:- Sir, please give me protection. You have made uncharitable remarks against the Government.

SRI B.S.YEDIYURAPPA:- You have colluded with Gem Granites.

(INTERRUPTIONS)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಯಾರನ್ನೋ ರಕ್ಷಣೆ ಮಾಡಲಿಕ್ಕೆ ವಾದ ಮಾಡಲಾಗುತ್ತಿದೆ ಅಷ್ಟೇ, ಅವರು ಪ್ರಾಮಾಣಿಕವಾಗಿ ಉತ್ತರವನ್ನು ಹೇಳುತ್ತಿಲ್ಲವೆಂಬುದನ್ನು ಅವರ ಮುಖ ನೋಡಿದ ತಕ್ಷಣವೇ ಗೊತ್ತಾಗುತ್ತಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸರ್ಕಾರವು ಅವರೊಂದಿಗೆ ಶಾಮೀಲಾಗಿ ಈ ಆಜ್ಞೆಯನ್ನು ಹೊರಡಿಸಿದ್ದಾರೆ, ಅದಕ್ಕಾಗಿ ಕನ್‌ಸರ್ನ್ಡ್ ಮಿನಿಸ್ಟರ್ ರಾಜೀನಾಮೆ ಕೊಡಬೇಕು. ಇವತ್ತು ಗ್ರ್ಯಾನೈಟ್ ಲಾಬಿಯಲ್ಲಿ ಶಾಮೀಲಾಗಿ ಖಜಾನೆಗೆ ಬರುವ ನೂರಾರು ಕೋಟಿ ರೂಪಾಯಿ ಲೂಟಿ ನಡೆಯುತ್ತಿದೆ. ಎರಡೂ ಸದನದ ಸಮಿತಿ ಸೇರಿ ಕೊಟ್ಟಿರುವ ರಿಪೋರ್ಟ್‌ಗೆ ಬೆಲೆ ಕೊಟ್ಟಿಲ್ಲ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಪರಿಶೀಲನೆ ಮಾಡಿ ಜೆಮ್ ಗ್ರ್ಯಾನೈಟ್ ಕಂಪನಿ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ವರದಿ ಕೊಟ್ಟಿದ್ದರೂ ಕ್ರಮ ತೆಗೆದುಕೊಂಡಿಲ್ಲ. ಕೋರ್ಟ್ ಮುಂದೆ ಇರತಕ್ಕಂಥ ಕೇಸ್‌ಗಳನ್ನೂ ಸರಿಯಾಗಿ ನಡೆಸಿಲ್ಲ. ಈ ಕೆಲಸ ಮಾಡುವ ಸರ್ಕಾರಕ್ಕೆ ಶೋಭೆ ತರುತ್ತದೆಯೇ?

ಅಧ್ಯಕ್ಷರು: ತಾವು ಏನೆಲ್ಲಾ ಹೇಳಬೇಕೋ ಅದನ್ನೆಲ್ಲಾ ಪ್ರಬಲವಾಗಿ ಹೇಳಿದ್ದೀರಿ, ಸಂಸದೀಯ ವ್ಯವಹಾರದಲ್ಲಿ ಅವರಿಗೂ ಅಭಿಪ್ರಾಯ ಹೇಳುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಕೇಳಿರುವುದನ್ನು ಬಿಟ್ಟು ಬೇರೆಲ್ಲಾ ಹೇಳುತ್ತಿದ್ದಾರೆ.

ಅಧ್ಯಕ್ಷರು: ನೀವು ಹೇಳುವುದನ್ನು ಅವರು ಒಪ್ಪುವುದು, ಅವರು ಹೇಳುವುದನ್ನು ನೀವು ಒಪ್ಪುವುದು, ಅದು ನಿಮ್ಮ ನಿಮ್ಮ ವಿವೇಚನೆಗೆ ಬಿಟ್ಟ ವಿಷಯ. ಸರ್ಕಾರ ಉತ್ತರ ಕೊಡುವುದಕ್ಕೆ ಅವಕಾಶ ಕೊಡುವುದು ನನ್ನ ಜವಾಬ್ದಾರಿ ಇದೆ. ಇಲ್ಲದಿದ್ದರೆ, ನೀವು

ಹೇಳಿದ್ದೆಲ್ಲಾ ರೆಕಾರ್ಡ್‌ಗೆ ಮತ್ತು ಪತ್ರಿಕೆಗಳಿಗೆ ಹೋಗಿ ಅವರು ಏನೂ ಹೇಳದೇ ಇದ್ದರೆ, ಸರ್ಕಾರವೇ ಇಲ್ಲ ಎನ್ನುವ ಹಾಗೆ ಆಗುತ್ತದೆ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಯಡಿಯೂರಪ್ಪನವರು ಎಲ್ಲಾ ಪದಗಳನ್ನು, ಭಾಷೆಗಳನ್ನು ಮತ್ತು ಶಬ್ದಗಳನ್ನು ಸರ್ಕಾರದ ವಿರುದ್ಧ ಉಪಯೋಗಿಸಿದ್ದಾರೆ. ಅದಕ್ಕೆ ಪ್ರತಿಯೊಗಿ ಸರ್ಕಾರ ಕೊಡುವ ಉತ್ತರವನ್ನು ಕೇಳುವುದಕ್ಕಾಗಿ ಅಷ್ಟೇ ಸೌಜನ್ಯವನ್ನು ಅವರು ತೋರಿಸಬೇಕಾಗುತ್ತದೆ. ಇಲ್ಲವೆಂದರೆ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಸದನವನ್ನು ಅಡ್ಡ ದಾರಿಗೆ ತೆಗೆದುಕೊಂಡು ಹೋಗುತ್ತಾರೆ, ನಾವು ಕೇಳಿದಂಥ ಪ್ರಶ್ನೆಗಳನ್ನು ಬಿಟ್ಟು ಉಳಿದವಕ್ಕೆ ಉತ್ತರವನ್ನು ಕೊಡುತ್ತಾರೆ ಎನ್ನುವ ಉದ್ದೇಶದಿಂದಲೇ ಕನ್‌ಸರ್ನ್ಡ್ ಮಿನಿಸ್ಟರ್ ಉತ್ತರ ಕೊಡಲೆಂದು ನಾವು ಕಾಯುತ್ತಾ ಕುಳಿತುಕೊಂಡಿದ್ದೆವು. ಇಷ್ಟು ಹೊತ್ತು ನಾವು ಆರ್ಗ್ಯು ಮಾಡಿದ ಯಾವುದಾದರೂ ಪಾಯಿಂಟ್‌ಗೆ ಅವರು ಉತ್ತರವನ್ನು ಕೊಟ್ಟಿದ್ದಾರಾ? ಶ್ರೀಮತಿ ಪ್ರಮೀಳಾ ಅವರು ಬ್ಯಾಂಕ್ ಗ್ಯಾರಂಟಿ ವಿಷಯವನ್ನು ಹೇಳಿದ ಮೇಲೆ, ಹೌದು ನಾವು ಕೇಸ್ ಹಾಕಬೇಕಾಗಿತ್ತು ಎಂದು ಈಗ ಹೇಳಿದ್ದಾರೆ;

MR. SPEAKER:- I am appealing to Hon'ble Members of Opposition Please co-operate. ಅವರು ಏನು ಹೇಳುತ್ತಾರೋ ಹೇಳಲಿ. Kindly do not again get up and intervene.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೇ, ಈಗ ನಾವು ಸರಕಾರದವರು ತೆಗೆದುಕೊಂಡಿರತಕ್ಕಂಥ ತೀರ್ಮಾನ ರೂಲ್ 56ರ ಅಡಿಯಲ್ಲಿ ಒಂದು ಸರಕಾರಿ ಆಜ್ಞೆಯನ್ನು ಮಾಡಿ 10 ಕೋಟಿ 62ಲಕ್ಷ ರೂ.ಗಳನ್ನು ಅವರ ಕೈಯಿಂದ ತೆಗೆದುಕೊಂಡು ಎರಡು ವರ್ಷಗಳವರೆಗೆ ಅಥವಾ ಸಿವಿಲ್‌ಕೋರ್ಟ್‌ನಲ್ಲಿರತಕ್ಕಂಥ ಈ ಒಂದು ದಾವೆ ಇತ್ಯರ್ಥವಾಗುವವರೆಗೆ, ಅದರೊಳಗಡೆ ಯಾವುದು ಮೊದಲೋ ಅಲ್ಲಿಯವರೆಗೆ ಇವರಿಗೆ ಈ ಕೆಲಸವನ್ನು ಮಾಡಲು ಕೊಟ್ಟಿರತಕ್ಕಂಥ ಅಧಿಕಾರ, ನಮ್ಮ ಸಿವಿಲ್ ನ್ಯಾಯಾಲಯದಲ್ಲಿರತಕ್ಕಂಥ ವ್ಯಾಜ್ಯದಲ್ಲಿ ಆ ಒಂದು ಇಂಟೀರಿಯಮ್ ಆಜ್ಞೆ ಆದ್ದರಿಂದ ನಾವು ಕೊಡಲೇ ಬೇಕಾದ ಪರಿಸ್ಥಿತಿಯು ಬಂತು. ನಾವು ಈ ಕೆಲಸವನ್ನು ಮಾಡಿದ್ದೇವೆ. ಎರಡನೆಯದಾಗಿ ನಾವು ಈ ಕೆಲಸವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಸರಕಾರ ಗಮನದಲ್ಲಿಟ್ಟುಕೊಂಡಿರತಕ್ಕಂಥಾದ್ದು ಸರಕಾರಕ್ಕೆ ಬರಬೇಕಾದಂಥ ಹಣವನ್ನು ನಾವು ಹೇಗಾದರೂ ಮಾಡಿ ವಸೂಲು ಮಾಡಿ ಈ ಕ್ರಮವನ್ನು ಕೈಗೊಳ್ಳಬೇಕೆಂಬ ಹಿನ್ನಲೆಯಲ್ಲಿಯೇ ಹೊರತು ಬೇರೆ ಯಾವುದೇ ಕಾರಣದಿಂದಲೂ ಅಲ್ಲ. ಮೂರನೆಯದಾಗಿ ನಮ್ಮ ಆಜ್ಞೆಯು ಯಾವುದು ಇದೆ, ಸೆಕ್ಷನ್7ರ ಪ್ರಕಾರ ಮಾಡಿರತಕ್ಕಂಥ ಆಜ್ಞೆ, ಆ ಜಮೀನು ಸರಕಾರಕ್ಕೆ ಸೇರಿಸತಕ್ಕಂಥ ಜಮೀನು ಎಂದು ತೀರ್ಮಾನ ಮಾಡಿರತಕ್ಕಂಥ ಹಿನ್ನಲೆಯಲ್ಲಿ ಈ ಜಮೀನು ಮತ್ತು ಸೆಕ್ಷನ್ 7ರಲ್ಲಿ ನಾವು

ತೆಗೆದುಕೊಂಡಿರತಕ್ಕಂಥ ಆಜ್ಞೆ ಅದರ ಸಿಂಧುತ್ವವನ್ನು ಪ್ರಶ್ನೆ ಮಾಡಿರುವುದರಿಂದ ಅದನ್ನು ನಾವು ಸರಕಾರದ ವತಿಯಿಂದ ನಮ್ಮ ಒಂದು ಪ್ರತಿಭಟನೆಯನ್ನು ವ್ಯಕ್ತಮಾಡಿ ಈ ಸರಕಾರಿ ಆಜ್ಞೆಯನ್ನು ಊರ್ಜಿತಗೊಳಿಸಿ, ನಾವು ಮಾಡಿದ್ದುದು ಸಿಂಧು ಎಂದು ಹೇಳಿರತಕ್ಕಂಥ ಆಜ್ಞೆಯನ್ನು ತೆಗೆದುಕೊಂಡು ಬರತಕ್ಕಂಥ ಕರ್ತವ್ಯವು ಸರಕಾರದ ಮೇಲಿದೆ. ಆ ಕೆಲಸವನ್ನು ನಾವು ಕಾನೂನು ಇಲಾಖೆಯಿಂದ ಮತ್ತು ವಕೀಲರ ಮುಖಾಂತರ ಮಾಡಲು ಇರತಕ್ಕಂಥ ಜವಾಬ್ದಾರಿಕೆಯನ್ನು ಸರಕಾರವು ತೆಗೆದುಕೊಳ್ಳುತ್ತದೆ. ನಾಲ್ಕನೇದಾಗಿ ಮಾನ್ಯ ಮಿತ್ರರು ಎಲ್ಲೋ ಒಂದು ಕಡೆ, with a blinkered mind, ಯಾಕೆಂದರೆ ಈ ಗ್ರ್ಯಾನೈಟ್ ವಿಚಾರದಲ್ಲಿ ನಾನು ಕೂಡ ಮಾತನಾಡಿದ್ದೇನೆ. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಈ ಒಂದು ವಿಚಾರದಲ್ಲಿ ಮಾತ್ರ ನಾವು ಎಲ್ಲವನ್ನೂ ನೋಡಿದಾಗ, ಇದರಲ್ಲಿ ನಿಮಗೆ ಏನು ಅನ್ನಿಸುತ್ತದೆ? ಸರಕಾರಕ್ಕೆ ಬರಬೇಕಾದ ಹಣವನ್ನು ವಸೂಲಾತಿ ಮಾಡುವುದೂ ಕೂಡ ತಪ್ಪು ಎನ್ನತಕ್ಕಂಥ ಭಾವನೆ ನಿಮ್ಮ ಮನಸ್ಸಿನಲ್ಲಿ ಬಂದು....

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ನೀವು ವಿರೋಧ ಪಕ್ಷಗಳ ಮೇಲೆ ಆರೋಪ ಮಾಡುತ್ತಾ ಇದ್ದೀರಿ. ಸರಕಾರಕ್ಕೆ ಬರತಕ್ಕಂಥ ಹಣವನ್ನು ವಸೂಲು ಮಾಡಲು ನಾವು ನಿಮಗೆ ಅಡ್ಡ ಬರುತ್ತಾ ಇದ್ದೇವೆ ಎಂಬ ಅರ್ಥದಲ್ಲಿ ತಾವು ಆರೋಪ ಮಾಡಿದ್ದೀರಿ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೇ, ಇವರುಗಳು ಸರಕಾರದವರು ಮಾಡಿರತಕ್ಕ ಕೆಲಸಗಳ ವಿಚಾರದಲ್ಲಿ ಬಹಳಷ್ಟು ಆರೋಪಗಳನ್ನು ಮಾಡಿದ್ದಾರೆ. ಇದರಲ್ಲಿ ನೀವು ಶಾಮೀಲು ಆಗಿದ್ದೀರಿ, ಇದರಲ್ಲಿ ಬಹಳ ದೊಡ್ಡ ಅವ್ಯವಹಾರ ನಡೆದಿದೆ, ವಿರೋಧ ಪಕ್ಷದಲ್ಲಿ ನೀವು ಶಾಮೀಲು ಆಗಿದ್ದೀರಿ, ಇದರಲ್ಲಿ ಬಹಳ ದೊಡ್ಡ ಅವ್ಯವಹಾರ ನಡೆದಿದೆ, ವಿರೋಧ ಪಕ್ಷದಲ್ಲಿ ನೀವು ಮಾತನಾಡುತ್ತಿರತಕ್ಕಂಥ ಯಾವುದೇ ವಿಚಾರ ತೆಗೆದುಕೊಂಡರೂ ಕೂಡ, ಸರಕಾರಕ್ಕೆ ಬರತಕ್ಕಂಥ ಹಣವನ್ನು ಆಜ್ಞೆ ಮಾಡಿ ಅದನ್ನು ವಸೂಲು ಮಾಡಲು ಪ್ರಯತ್ನ ಮಾಡತಕ್ಕಂಥ ಪ್ರಯತ್ನ ಮಾಡಿದಾಗ, ಅದರಲ್ಲಿಯೂ ಶಾಮೀಲು ಎಂದು ಹೇಳುತ್ತೀರಿ? ನಾನು ಒಂದು ವಿಚಾರವನ್ನು ಹೇಳುತ್ತೇನೆ ಈ ಜಮೀನು ಯಾವುದಿದೆ, I will come to the real point. ಎಷ್ಟು ವರ್ಷಗಳಿಂದ ಈ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾರೆ? 1989ರಿಂದ 1994ರವರೆಗೆ ತಾವುಗಳು ಅಧಿಕಾರದಲ್ಲಿದ್ದೀರಿ. ಇದರ ಬಗ್ಗೆ ನೀವುಗಳು ಯೋಚನೆ ಮಾಡಿದ್ದೀರೋ? ಯೋಚನೆ ಮಾಡಿದ್ದು ನಮ್ಮ ಸರಕಾರವು ಅಧಿಕಾರಕ್ಕೆ ಬಂದಮೇಲೆ. We thought of it. ನಾವು ಅಧಿಕಾರಕ್ಕೆ ಬಂದ ಮೇಲೆ, we thought that there must be something wrong about the whole thing. ಅದಕ್ಕಿಂತ

ಮುಂಚಿನ ಕಾಲವೂ ಒಂದು ಇತ್ತು. ನಾನು ಹೇಳುತ್ತಿರತಕ್ಕಂಥಾದ್ದು ಬಿಜೆಪಿಯವರು 1983ರಲ್ಲಿ ನಮ್ಮ ಜೊತೆಯಲ್ಲಿ ಇದ್ದವರು. ನೀವು ಅಲ್ಲಿಗೆ ಮೊನ್ನೆಮೊನ್ನೆ ಹೋದವರು. ಶ್ರೀನಿವಾಸ್‌ರವರೇ, ನಿಮಗೆ ಅಲ್ಲಿ ಆಗುವುದಿಲ್ಲ. ನೀವು ಅಲ್ಲಿಗೆ ಯಾವುದೋ ಕಾರಣಕ್ಕೆ ಹೋಗಿದ್ದೀರಿ. ನನಗೆ ಗೊತ್ತಿದೆ ನೀವೂ ಕೂಡ ನಮ್ಮ ಹತ್ತಿರ ಬಹಳ ವಿಚಾರಗಳಿಗಾಗಿ ಚರ್ಚೆಗೆ ಬರುತ್ತಾ ಇದ್ದೀರಿ. ಕಾನೂನಿನ ಬಗ್ಗೆಯೂ ನಾನು ಮತ್ತು ನೀವು ಬೇಕಾದಷ್ಟು ಮಾತನಾಡಿದ್ದೇವೆ. ಅದನ್ನು ಬಿಡಿ. ನಾವು, ನೀವೆಲ್ಲರೂ ಒಂದೇ ಆದರೂ ನೀವು ಅಲ್ಲಿ ಇದ್ದೀರಿ ಇರಿ.... ಸ್ವಾಮಿ, 1989 ರಿಂದ 1994ರ ವರೆಗೆ, ನಿಮ್ಮ ಸರಕಾರ, ನೀವು ಘಟಾನುಘಟಿಗಳೆಲ್ಲರೂ ಕುಳಿತಿದ್ದೀರಲ್ಲಾ ಅವರುಗಳು ಐದು ವರ್ಷಗಳಲ್ಲಿ ಮಾಡಿದ್ದು ಏನು ಎಂದು ಕೇಳಿದರೆ, ಯಾವುದನ್ನೂ ಮಾಡಲಿಲ್ಲ. ಐದು ವರ್ಷಗಳಲ್ಲಿ ಮೂವರು ಮುಖ್ಯಮಂತ್ರಿಗಳನ್ನು ಮಾಡುವ ಕೆಲಸವನ್ನು ಮಾಡಿದರು. ಮುಖ್ಯಮಂತ್ರಿಗಳನ್ನು ಇಲ್ಲಿ ಕೆಲಸ ಮಾಡಲು ಬಿಡದೆ ಇಲ್ಲಿ ಧರಣ ಕುಳಿತಿರತಕ್ಕಂಥ ಕೆಲಸವನ್ನು ಪರಿಸ್ಥಿತಿಯನ್ನು ನಿರ್ಮಾಣ ಮಾಡಿ, ಕಡೆಗೆ ಆ ಜಮೀನು ಯಾರಿಗೆ ಸೇರಿದ್ದು ಎಂದು ವಿಚಾರ ಮಾಡಲೂ ಕೂಡ ಇವರಿಂದ ಆಗದೆ ಅವರ ಜೊತೆಯಲ್ಲಿಯೇ ಅಡ್ಡಾಡಿ, ಸುತ್ತಾಡಿ ಮಾಡಿ, ನಮ್ಮ ಸರಕಾರವು ಅಧಿಕಾರಕ್ಕೆ ಬಂದಾದ ಮೇಲೆ ಈ ಜಮೀನು 500 ಎಕರೆ ಏನಿದೆ ಇದಕ್ಕಾಗಿ ಮುಂಬಯಿಗೆ ಕಳುಹಿಸಿದೆವು, ಮದ್ರಾಸ್‌ಗೆ ಕಳುಹಿಸಿದೆವು, ಎಲ್ಲಾ ಭಾಗಗಳಲ್ಲಿಯೂ ಸುತ್ತಾಡಿ, ಈ ಜಮೀನನ್ನು ರಕ್ಷಣೆ ಮಾಡಿ. ಒಂದು ಆಜ್ಞೆಯನ್ನು ಹೊರಡಿಸಿರತಕ್ಕಂಥ ಕೀರ್ತಿಯು ನಮ್ಮ ಸರಕಾರಕ್ಕೆ ಬರುತ್ತದೆ ವಿನಹ ನಿಮಗೆ ಅಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸುಪ್ರೀಂಕೋರ್ಟ್ ಆರ್ಡರ್ ಕೊಟ್ಟ ಮೇಲೆಯೂ ಕೂಡ 22 ಮಾರ್ಚ್‌ಗೆ ನೀವು ಆರ್ಡರ್ ಇಶ್ಯೂ ಮಾಡಿಲ್ಲ. ನಿಮ್ಮ ** ಮುಚ್ಚಿಕೊಳ್ಳಲು ಇನ್ನೊಬ್ಬರಿಗೆ ಹೇಳಲು ಹೋಗಬೇಡಿ. ನಾನು ತಮ್ಮ ಮಾತುಗಳನ್ನು ಸುಮ್ಮನೆ ಕೇಳಿಕೊಂಡು ಕುಳಿತಿದ್ದೆ. ಈಗ ನಾನು ಹೇಳಬೇಕಾಗುತ್ತದೆ....

SRI M.C.NANAIAH:- He should allow me.

MR. SPEAKER:- Particular word shall not go into the record.

ಶ್ರೀ ಎಂ.ಸಿ.ನಾಣಯ್ಯ: ಆಯಿತು, ನಾವು ಮಾಡಿರತಕ್ಕಂಥಾದ್ದು ಏನು?...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಆರ್ಡರ್ ಮಾಡಿ ಹೀಗೆಲ್ಲಾ ನಡೆಯಿತಲ್ಲಾ? ಅದರ ಬಗ್ಗೆಯೂ ಮಾತನಾಡಿ.

ಶ್ರೀ ಎಂ.ಸಿ.ನಾಣಯ್ಯ: ಅವರು ಹೇಳಿದ್ದನ್ನು ಕೇಳುವ ಸೌಜನ್ಯತೆಯು ನಮ್ಮಲ್ಲಿದೆ.

** ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಬಹುಶಃ ಇದೇ ಸ್ಥಾನದಲ್ಲಿ ಮಾನ್ಯ ದೇವರಾಜ್ ಅರಸ್‌ನವರು ಒಂದು ಮಾತನ್ನು ಆಡಿದರು. ಅವರು ಆಡಿರತಕ್ಕಂಥ ಮಾತು ನನಗೆ ಈಗಲೂ ಜ್ಞಾಪಕಕ್ಕೆ ಬರುತ್ತದೆ. ನೀವು ಹೇಳುವುದನ್ನೆಲ್ಲಾ ನಾನು ಮೌನದಿಂದ ಕೇಳಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇವರಿಗೂ ಅವರಿಗೂ ವ್ಯತ್ಯಾಸ ಏನು ಗೊತ್ತೇ? ಅವರು ಮಾಡಲಿಲ್ಲ. ಇವರು ಕೋರ್ಟ್‌ಗೆ ಹೋದ ಹಾಗೆ ತೋರಿಸಿಕೊಂಡು, ಅವರ ಜೊತೆಗೆ ಶಾಮೀಲು ಆಗಿ ರಾಜ್ಯದ ಹಣವನ್ನು ಲೂಟಿ ಮಾಡತಕ್ಕಂಥದ್ದನ್ನು ಮಾಡುತ್ತಿದ್ದಾರೆ.

ಶ್ರೀ ಎಂ.ಸಿ.ನಾಣಯ್ಯ: ಆಯಿತು, ನೀವು ಮಾತನಾಡಿ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ರೀತಿಯಾಗಿ ಅವರು ಡಿಫೆನ್ಸ್ ತೆಗೆದುಕೊಳ್ಳುವುದಾದರೆ ನಾವು ಹೇಳಬೇಕಾಗುತ್ತದೆ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಕೊಡಿ.... Kindly give me protection. I am sorry. You should give me protection.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾವುದನ್ನು ಕಾನೂನಿಗೆ ವಿರುದ್ಧವಾಗಿ ತಂದಿದ್ದೀರಿ, ಆಕ್ಟ್‌ಗೆ ವಿರುದ್ಧವಾಗಿ ತಂದಿದ್ದೀರಿ, ಅದನ್ನು ಹೇಳಿ. ಅದನ್ನು ಬಿಟ್ಟು ನೀವೇನು ಮಾಡಿದ್ದೀರಿ, ನಾವೇನು ಮಾಡಿದ್ದೇವೆ ಎಂದು ಹೇಳಿದರೆ, ಆ ರೀತಿಯ ರಾಜಕಾರಣದ ಮಾತುಗಳು ಬೇಡ. ನಾವು ಮಾಡಿದ್ದರೆ ಧೈರ್ಯ ಇದ್ದರೆ ನೀವು ಆವಾಗ ಕೇಳಬೇಕಾಗಿತ್ತು. ನಾವು ಅದಕ್ಕೆ ಏನು ಹೇಳಬೇಕೋ ಅದನ್ನು ಹೇಳುತ್ತಾ ಇದ್ದೆವು. ನಿಮ್ಮಲ್ಲಿ ತಾಕತ್ತು ಇದ್ದಿದ್ದರೆ ಆವಾಗ ನೀವು ಕೇಳಬೇಕಾಗಿತ್ತು ನಾವು ಉತ್ತರ ಕೊಡುತ್ತಾ ಇದ್ದೆವು.

SRI M.C.NANAIAH:- Please allow me to complete. Let me have my say on behalf of the government now. ಐದು ವರ್ಷ ವೀರಮಣಿ ಎನ್ನುವವರ ಬಗ್ಗೆ ವಾಟಾಳ್‌ನಾಗರಾಜ್‌ರವರು ಎತ್ತುತ್ತಿದ್ದರು. ತಾವು ಕೂಡ ಆ ಬಗ್ಗೆ ಎತ್ತಿದ್ದೀರಿ. ಸಾವಿರಾರು ಕೋಟಿ ರೂ.ಗಳ ಗ್ರಾನೈಟ್ ನಾಶವಾಗತಕ್ಕಂಥದ್ದನ್ನು ಈ ಸದನದಲ್ಲಿ ಶ್ರೀ ದೇವೇಗೌಡರಿಗೆ ಹೇಳಿ ನಾವು ಈ ಸದನದಲ್ಲಿ ಹೇಳಿ, ನಾವು ಅದನ್ನು ರಕ್ಷಣೆ ಮಾಡಿದ್ದೇವೆ ಎಂದು ಹೇಳತಕ್ಕಂಥ ಮಾತನ್ನು ಇವೊತ್ತೂ ಕೂಡ ಹೇಳುತ್ತಿದ್ದೇನೆ, ಅಭಿಮಾನದಿಂದ ನಾವು ಆ ಕೆಲಸವನ್ನು ಮಾಡಿದ್ದೇವೆ. ಆದರೆ ಇದು [illegible]ಗಳ ಕಾಲ ಆ ಕೆಲಸವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಹಿಂದೆ.. ಮಾನ್ಯ ಯಡಿಯೂರಪ್ಪನವರೂ ಕೂಡ ಇದ್ದರು. ಆದರೆ ನಿಮಗೆ ಅಧಿಕಾರ ಇರಲಿಲ್ಲ.

ಆದ್ದರಿಂದ ಇದರಲ್ಲಿ ಏನು ನಡೆದಿದೆ, ಇದು ಸರಕಾರದ ಜಮೀನೇ ಅಲ್ಲವೇ ಎಂಬುದು ನಿಮಗೆ ಗೊತ್ತಿರಲಿಲ್ಲ. ಅದು ಸರಕಾರ ನಡೆಸುವವರಿಗೆ ಗೊತ್ತಿರುತ್ತದೆ. ಸರಕಾರ ನಡೆಸದೇ ಇರುವವರಿಗೆ ಅದು ಗೊತ್ತಾಗುವುದಿಲ್ಲ. ಆದರೆ ನಿಮಗೆ ಆ ಜಮೀನು ಯಾರದ್ದು? ಆ ಮನುಷ್ಯ ಗ್ರ್ಯಾನೈಟ್ ವ್ಯವಹಾರ ಮಾಡುತ್ತಿದ್ದಾರೆ. ಸರಕಾರ ಜಮೀನಿನಲ್ಲಿ ಇದನ್ನು ಮಾಡುತ್ತಿದ್ದಾನೋ, ಮಠದ ಜಮೀನಿನಲ್ಲಿ ಇದನ್ನು ಮಾಡುತ್ತಿದ್ದಾನೋ ಎನ್ನತಕ್ಕಂಥ ಸಂಪೂರ್ಣವಾದ ಮಾಹಿತಿಗಳು ಮತ್ತು ಸರಕಾರದ ಆಜ್ಞೆ ಇದೆ. ಅದು ನಿಮಗೆ ಗೊತ್ತಿರಲಿಕ್ಕಿಲ್ಲ. ಯಾಕೆಂದರೆ ನೀವು ಅಧಿಕಾರದಲ್ಲಿ ಇದ್ದಿರಲಿಲ್ಲ. ಆದರೆ ನೀವು ಮಾಡುತ್ತಾ ಇರತಕ್ಕಂಥದ್ದನ್ನು ಸ್ವಲ್ಪಮಟ್ಟಿಗೆ ಸರಿ ಎಂದು ಒಪ್ಪಿಕೊಂಡರೂ ಕೂಡ, ಐದು ವರ್ಷ ಅಧಿಕಾರ ಮಾಡಿ, ಅದಕ್ಕಿಂತಲೂ ಹಿಂದೆ ಅಧಿಕಾರ ಮಾಡಿ, ಈ ಜಮೀನು ಯಾರಿಗೆ ಸೇರುತ್ತದೆ ಎಂಬ ವಿಚಾರ ಇಲ್ಲಿ ಬಂದಾಗ....

SRI M.MALLIKARJUNA KHARGE:- I agree. I demand CBI enquiry since 1989. You do it. Let us see. If I am involved in that, since 1989, you make a reference and enquiry. Refer it to CBI. You agree for that. ನಾವು ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇವೆ. ಆದರೆ ನೀವು ಈ ಜಿ.ಓ.ಬಿಟ್ಟು ಯಾವುದೋ ಕಥೆ ಹೇಳಿಕೊಂಡು ಇದನ್ನು ಮರೆಮಾಡಬೇಕೆಂದು ಹೇಳಿ ಹೊರಟರೆ ಅದು ಆಗುವುದಿಲ್ಲ. ತಾವು ಈ ಬಗ್ಗೆ ವಿಚಾರಣೆ ಮಾಡಿಸಿ. ಟರ್ಮ್ಸ್ ಆಫ್ ರೆಫರೆನ್ಸ್ ಇಡಿ. 1989 ರಿಂದ 1993ರವರೆಗೆ ಎಲ್ಲವೂ ಹೊರಗೆ ಬರಲಿ. ನಮ್ಮವರು ಯಾರಾದರೂ ತಪ್ಪಿತಸ್ಥರು ಎಂದು ಕಂಡು ಬಂದರೆ ನಮ್ಮವರನ್ನು ಶೂಲೆಗೆ ಏರಿಸಿರಿ. ನಿಮ್ಮವರು ಬಂದರೆ....

ಶ್ರೀ ಸಿದ್ದರಾಮಯ್ಯ: ಅದನ್ನು ಸರ್ಕಾರಿ ಜಮೀನು ಎಂದು ಮಾಡಿ ಇವೊತ್ತು ಅದನ್ನು ರಕ್ಷಣೆ ಮಾಡತಕ್ಕಂಥ ಕೆಲಸವನ್ನು ಮಾಡಿದ್ದಕ್ಕೆ ನಿಮಗೇಕೆ ಕೋಪ ಬರುತ್ತದೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ನೀವು ಅದನ್ನು ಹೇಳಿಕೊಂಡು ತಪ್ಪಿನ ಸಮರ್ಥನೆ ಮಾಡಿಕೊಳ್ಳುವುದು ಬೇಡ. ತಪ್ಪು ಇದ್ದರೆ ತಪ್ಪು ಎಂದು ಹೇಳಿ. ನಾವು ತಪ್ಪು ಮಾಡಿದ್ದರೆ ಅದನ್ನು ವಿಚಾರಣೆ ಮಾಡಿ ಎಂದು ಹೇಳುತ್ತಿದ್ದೇವಲ್ಲಾ? ನಾನು ಅದನ್ನು ಡಿಮ್ಯಾಂಡ್ ಮಾಡುತ್ತಿದ್ದೇನೆ. 1989ರಿಂದ ವಿಚಾರಣೆ ಮಾಡಿ.

ಅಧ್ಯಕ್ಷರು: ಮಾನ್ಯ ಸಚಿವರು ಏನು ಹೇಳುತ್ತಾರೋ ಹೇಳಲಿ, ಅವಕಾಶ ಕೊಡಿ....

SRI M.C.NANAIAH:- I am sorry, Sir. This type of....

(INTERRUPTIONS)

ಶ್ರೀ ಬಿ.ಎಸ್.ಯಡಿಯೂರಪ್ಪ: ಜಿ.ಓವನ್ನು ವಿಥ್‌ಡ್ರಾ ಮಾಡುತ್ತೀರೋ?

(ಗೊಂದಲ)

ಅಧ್ಯಕ್ಷರು: ನಾನು ಏನು ಅಪೀಲ್ ಮಾಡುತ್ತೇನೆ ಅಂದರೆ, it is a very serious matter. ಅಕ್ಷುಯಲಿ ಪುಟ್ಟಣ್ಣಯ್ಯನವರು ಮತ್ತು ಶ್ರೀರಾಮರೆಡ್ಡಿಯವರು ಇಬ್ಬರು ಮಾತ್ರ ಇದಕ್ಕೆ ಸಿಗ್ನೇಟರಿಗಳು. Taking into consideration the magnitude and the seriousness involved, ತಮಗೆಲ್ಲರಿಗೂ ನಾನು ಅವಕಾಶ ಮಾಡಿಕೊಟ್ಟಿದ್ದೇನೆ. ತಾವು ಏನೆಲ್ಲಾ ಹೇಳಬೇಕಾಗಿತ್ತು, ಅದರಲ್ಲಿ ಯಾವ ರಿಸರ್‌ವೇಶನ್ಸ್, ಹೆಸಿಟೇಶನ್ಸ್ ಇಲ್ಲದೆ ಹೇಳಬೇಕಾದುದನ್ನೆಲ್ಲಾ ಹೇಳಿದ್ದೀರಿ. ಅದು ನಿಮ್ಮ ಹಕ್ಕು. ಅವರು ತಮ್ಮ ಡಿಫೆನ್ಸ್‌ಗೆ ಏನು ಹೇಳಬೇಕಾಗುತ್ತದೋ ಅದನ್ನು ಹೇಳಲು ಅವಕಾಶ ಮಾಡಿಕೊಡಿ. ಅವರು ಹೇಳುವಾಗ ಮಧ್ಯದಲ್ಲಿ ಎದ್ದು ತಾವುಗಳು ಮಾತನಾಡಿದರೆ ಹೇಗೆ? ಇನ್ನೂ ಸ್ವಲ್ಪ ಹೊತ್ತಾದರೂ ನಾವು ಕುಳಿತುಕೊಳ್ಳೋಣ. ಅದರಿಂದ ಯಾವ ತೊಂದರೆ ಇಲ್ಲ. ನಾನು ಕುಳಿತುಕೊಳ್ಳಲು ತಯಾರಾಗಿದ್ದೇನೆ. ಆದ್ದರಿಂದ ಅವರು ಹೇಳುವುದನ್ನು ಹೇಳಲು ಬಿಡಿ. ಮತ್ತೆ ತಾವು ಹೇಳುವುದಿದ್ದರೆ ಹೇಳಬಹುದು. ಆದರೆ ಒಬ್ಬರು ಮಾತನಾಡುವಾಗ ಇನ್ನೊಬ್ಬರು ಇಂಟರ್‌ವೀನ್ ಆಗಬೇಡಿ. ನನಗೆ ಇವೊತ್ತು ಒಂದು ಸಂತೋಷ ಏನೆಂದರೆ, ಈ ಎರಡು ವರ್ಷ ಎಂಟು ತಿಂಗಳ ಅವಧಿಯಲ್ಲಿ, ನಾನು ಸಭಾಧ್ಯಕ್ಷನಾಗಿ ಕುಳಿತುಕೊಂಡಮೇಲೆ, ಒಂದು ದಿವಸ ನಾಣಯ್ಯನವರು ಅತ್ಯಂತ ಸಮಾಧಾನಚಿತ್ತರಾಗಿ, ಶಾಂತವಾಗಿ, ಸರಾಗವಾಗಿ, ಎಳೆಎಳೆ ಬಿಡಿಸಿ ಉತ್ತರವನ್ನು ಕೊಡುತ್ತಿದ್ದಾರೆ. ಇವೊತ್ತು ನೀವು ನಾಣಯ್ಯನವರ ರೀತಿಯಲ್ಲಿ ಮಾತನಾಡುತ್ತಿದ್ದೀರಿ. ನಾಣಯ್ಯನವರು ಇವೊತ್ತು ಬಹಳ ನಿಧಾನವಾಗಿ ಹೋಗುತ್ತಿದ್ದಾರೆ. ದಯಮಾಡಿ ಸಮಾಧಾನವನ್ನು ತಂದುಕೊಳ್ಳಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅವರು ಅವರ ಆತ್ಮಪೂರ್ತಿಯಾಗಿ ಮಾತನಾಡುತ್ತಾ ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ನಾವು ಪ್ರಸ್ತಾಪ ಮಾಡಿದ್ದು ಏನೆಂದರೆ ನಾವೇನೂ 100 ಕೋಟಿ 200 ಕೋಟಿ ಹಣವನ್ನು ಹೊಡೆದಿದ್ದೀರಿ ಎಂದು ಹೇಳಿಲ್ಲ. ಅದು ಮಾಡಿದ್ದೀರಿ, ಇದು ಮಾಡಿದ್ದೀರಿ ಎಂದು ನನ್ನ ಭಾಷಣದಲ್ಲಿ ನಾನು ಹೇಳಿಲ್ಲ. ನಾನು ರಿಲವೆಂಟ್ ಪಾಯಿಂಟ್ ಅನ್ನು ಕೇಳಿದ್ದೇನೆ. ಇನಾಂ ಅಬಾಲಿಷನ್ ಆಕ್ಟ್‌ನ ಕೆಳಗೆ ಒಂದು ಸಾರಿ ಜಮೀನನ್ನು ಸರಕಾರ ವಶಪಡಿಸಿಕೊಂಡ ಮೇಲೆ ಪುನಃ ಇದನ್ನು ಸಿವಿಲ್‌ಕೋರ್ಟ್‌ಗೆ ಹೋಗಬೇಕಾಗಿತ್ತೇ?

6.20 ಪಿ.ಎಂ

ಅದು ಬಿಟ್ಟು 1989ರಿಂದ ಏನು ಮಾಡಿದ್ದೀರಿ ಎಂದು ಹೇಳಿದರೆ ನಾನೂ ಕೇಳುತ್ತೇನೆ 1983ರಿಂದ 1990ರವರೆಗೆ ತಾವು ಇದ್ದರಲ್ಲಾ ಆಗ ಏನಾಗಿದೆ. ಅಂದರೆ 15 ವರ್ಷದಿಂದ ಸಿಬಿಐ ರವರಿಂದ ತನಿಖೆ ಮಾಡಿಸಿ ಆಗ ಯಾರ್‍ಯಾರು ಇದ್ದರು, ಯಾರ್‍ಯಾರು ತಪ್ಪು ಮಾಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ.

ಅಧ್ಯಕ್ಷರು: ಅಲ್ಲ, ನಾನೇನು ಹೇಳುತ್ತೇನೆಂದರೆ ಅವರು ಉತ್ತರವನ್ನು ಪೂರ್ಣ ಮಾಡಲಿ ನಂತರ ತಾವು ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದಕ್ಕೆ ನಾನೇನು ಹೇಳುವುದೇನೆಂದರೆ ಇರ್‌ರೆಲವೆಂಟ್ ಮಾತನಾಡಿ ಸೈಡ್‌ಲೈನ್ ಮಾಡುವುದು ಬೇಡ. ತಾವು ಅದನ್ನು ಕಾನೂನು ಪ್ರಕಾರ ಸರಿಯೋ ಅಥವಾ ತಪ್ಪೇ ಹೇಳಿ.

MR. SPEAKER:- The relevance of what each one of you speak is a matter of opinion.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೋ ನೋ ನಿಮ್ಮ ರೂಲ್ಸ್, ನಿಮ್ಮ ಕಾಯಿದೆ ಪ್ರಕಾರ ಮಾತನಾಡುತ್ತಿದ್ದೇವೆ, ಕಾನೂನಿನಲ್ಲಿ ಕೊಡುವುದಕ್ಕೆ ಬರುತ್ತದೋ ಹೇಗೆ? ಕೊಡುವುದಕ್ಕೆ ಬರುವುದಿಲ್ಲ ಎನ್ನುವುದನ್ನು ನಮ್ಮ ವಾದ, ಕೊಡುವುದಕ್ಕೆ ಬರುತ್ತದೆ ಸಿವಿಲ್ ಕೋರ್ಟಿಗೆ ಇದರದ್ದು ಜ್ಯೂರಿಸ್‌ಡಿಕ್ಷನ್ ಇದೆ ಎನ್ನತಕ್ಕಂಥದ್ದು ನಿಮ್ಮ ವಾದ ಇದ್ದರೆ Inam Abolition Act, Land Reforms Act, ಯಾವುದೂ ಕೂಡ ಬೇಡ.

ಅಧ್ಯಕ್ಷರು: ಜ್ಯೂರಿಸ್‌ಡಿಕ್ಷನ್ ಇರುವುದು ಇಲ್ಲದೇ ಇರುವುದು ಅದು ಬೇರೆ ಪ್ರಶ್ನೆ. ಪಿಟಿಷನ್ ಇದ್ದಾಗ to you have to face it.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಉಳಿಸಿದ್ದೆ, ನೀವು ಏನು ಮಾಡಿದಿರಿ? ಅಂದರೆ ಡೈವರ್ಟ್ ಮಾಡುವುದಕ್ಕೆ ತಾವು ಅದನ್ನು ದಯವಿಟ್ಟು ಮಾಡಬೇಡಿ. ಪುನಃ ನಮಗೆ ಅದನ್ನು ಹೇಳಬೇಡಿ ಇಲ್ಲವಾದರೆ ನಿಮಗೆ ಬಹಳವಾದ ಆಸಕ್ತಿ ಇದ್ದರೆ 1983ರಿಂದ ತನಿಖೆ ಮಾಡಿಸಿ ....

ಅಧ್ಯಕ್ಷರು: ಎಲ್ಲರೂ ದಯಮಾಡಿ.... Please allow him to have his say.

ಶ್ರೀ ಬಿ.ಎಸ್.ಯಡಿಯೂರಪ್ಪ: 1983ರಿಂದ ಈ ಗ್ರ್ಯಾನೈಟ್ ವ್ಯವಹಾರದ ಬಗ್ಗೆ ಏನು ನಡೆದಿದೆ ಹಿಂದೆ ನಮ್ಮ ಕಾಂಗ್ರೆಸ್‌ನವರು ಅಧಿಕಾರದಲ್ಲಿದ್ದಾಗ ಯಾವ ರೀತಿ ಒಂದೇ ದಿನ 213 ಜನಕ್ಕೆ ಲೈಸೆನ್ಸ್ ಕೊಟ್ಟಂತಹ ಕಾಲದಿಂದಲೂ ನಾವು ಹೋರಾಟ ಮಾಡಿಕೊಂಡು

ಬಂದಿದ್ದೇವೆ. ಜಂಟಿ ಸದನ ಸಮಿತಿ ಮಾಡಿದಿರಿ, ಎಲ್ಲವನ್ನೂ ಮಾಡಿದಿರಿ. ನಮ್ಮದು ಆಸೆ ಏನಿತ್ತು ಎಂದರೆ ಇಲ್ಲಿ ಆಗ ಮುಖ್ಯಮಂತ್ರಿಗಳಾಗಿ ಮಾನ್ಯ ದೇವೆಗೌಡರು ಹೇಳಿದರು; ವೀರಮಣಿ ಇವನು ಸುಮಾರು 1000 ಕೋಟಿ ರೂ.ಗಳನ್ನು ಸರ್ಕಾರದ ಖಜಾನೆಗೆ ಬರುವ ಹಣವನ್ನು ಲೂಟಿ ಮಾಡಿದ ಇದನ್ನು ನಾನು ಬಹಿರಂಗ ಮಾಡುವಂತಹ ಪ್ರಯತ್ನ ಮಾಡಿದೆ ಎಂದು ಹೇಳಿದ್ದು ರೆಕಾರ್ಡ್‌ನಲ್ಲಿದೆ. ಈಗ ಚರ್ಚೆಯಾದ ಮೇಲೆ ತಾವು ಮಾಡಿರುವ ಆಜ್ಞೆಯನ್ನು ನೋಡಿದಾಗ ಅದನ್ನು ವಿತ್‌ಡ್ರಾ ಮಾಡಿ ಎಂದು ನಾವು ಇಷ್ಟು ಹೊತ್ತು ಒತ್ತಾಯ ಮಾಡಿದೆವು. ಆದರೆ ಇದಕ್ಕೆ ನೀವು ಸಿದ್ದರಾಗಿಲ್ಲ. ಕೋರ್ಟ್‌ಗೆ ಸರಿಯಾದ ರೀತಿಯಲ್ಲಿ ಗಮನಕೊಟ್ಟಿಲ್ಲ ಅದಕ್ಕೋಸ್ಕರ ತಾವು ಹೊರಡಿಸಿರುವ ಈ ಆಜ್ಞೆಯನ್ನು ವಿತ್ ಡ್ರಾ ಮಾಡಿಕೊಂಡು ಎಲ್ಲಾ ವ್ಯವಹಾರಗಳನ್ನು... ಈಗ ನೀವೇ ಬಹಿರಂಗ ಮಾಡಿ ಬಿಟ್ಟರೆ ಏನೆಂದರೆ ಕಾಂಗ್ರೆಸ್‌ರವರ ಕಾಲದಿಂದಲೂ ಅವ್ಯವಹಾರವಾಗಿದೆ. ಇದು ನಿರ್ವಿವಾದ ಇದು ನಿಜ 85ರಿಂದ ನಡೆದಿರುವ ಕಳೆದ 5 ವರ್ಷಗಳಿಂದ ಗ್ರ್ಯಾನೈಟ್ ವ್ಯವಹಾರದ ಬಗ್ಗೆ ಸಿಬಿಐ ಗೆ ರೆಫರ್ ಮಾಡಿ; 1983ರಿಂದ ರೆಫರ್ ಮಾಡಿ, ಇದಂತೂ ನಿಶ್ಚಿತ ತಮ್ಮ ಕಾಂಗ್ರೆಸ್‌ನವರು ಏನು ಮಾಡಿದಿರೋ ಅದೇ ಕೆಲಸವನ್ನು ನೀವು ಮಾಡುತ್ತಿದ್ದೀರಿ. ಅದೇ ಗ್ರಾನೈಟ್ ಲಾಭಿಗೆ ನೀವು ಮಣಿದಿದ್ದೀರಿ, ಅವರು 500 ಕೋಟಿ ರೂಪಾಯಿಗಳನ್ನು ಲೂಟಿ ಮಾಡಿದರೆ ನೀವು ಒಂದು 500 ಕೋಟಿ ರೂ.ಗಳನ್ನು ಸರ್ಕಾರದ ಖಜಾನೆಗೆ ಬರುವುದನ್ನು ಲೂಟಿಯಾಗಿದೆ. ಈ ಕಾಂಗ್ರೆಸ್, ಜನತಾ ದಳ ಎರಡು ಸೇರಿ ಒಂದು ಸಾವಿರ ಕೋಟಿ ರೂ.ಗಳನ್ನು ಗ್ರ್ಯಾನೈಟ್‌ನಿಂದ ಸರ್ಕಾರದ ಬೊಕ್ಕಸಕ್ಕೆ ಬರುವುದನ್ನು ತಪ್ಪಿಸಿದ್ದೀರಿ, ಲೂಟಿ ಆಗುವುದಕ್ಕೆ ನೀವು ಎಲ್ಲರೂ ಶಾಮೀಲಾಗಿದ್ದೀರಿ, ಇದನ್ನು ಪ್ರತಿನಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿ.ಜೆ.ಪಿ.ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅಧ್ಯಕ್ಷರೆ, ನನ್ನ ಪಾಯಿಂಟ್ ಇಷ್ಟೆ ಒಂದು ಕ್ಯಾಬಿನೆಟ್ ತೀರ್ಮಾನ ಆಗಬೇಕಾಗಿತ್ತು. ರೆವಿನ್ಯೂ, ಫಾರಸ್ಟ್ ಮತ್ತು ಮೈನ್ಸ್ ಅಂಡ್ ಜಿಯಾಲಜಿ ಈ ಮೂರು ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ವಿಷಯವಾಗಿರುವುದರಿಂದ ಇದಕ್ಕೆ ಕ್ಯಾಬಿನೆಟ್ ತೀರ್ಮಾನ ಆಗಬೇಕಾಗಿತ್ತು. ಆದರೆ ಅದರ ಬದಲು ಒಂದು ಇಲಾಖೆ ತೀರ್ಮಾನ ಮಾಡಿರುವುದು ಸರಿಯಲ್ಲ. ಇದಕ್ಕೆ ಮಾನ್ಯ ನಾಣಯ್ಯನವರು ಏನೂ ಹೇಳಲಿಲ್ಲ. ಕ್ಯಾಬಿನೆಟ್ ತೀರ್ಮಾನ ಮಾಡಬೇಕೋ ಅಥವಾ ಬೇಡವೋ ಎಂದು ಅವರು ಏನೂ ಹೇಳಲಿಲ್ಲ. ಎರಡನೆಯದಾಗಿ ಹೈಕೋರ್ಟ್ 25 ಪರ್ಸೆಂಟ್ ಎಫ್‌ಓಬಿ ತೆಗೆದುಕೊಳ್ಳಿ ಎಂದರೆ ಇವರು 2 ವರ್ಷಕ್ಕೆ ಸೇರಿ 10 ಕೋಟಿ 60 ಲಕ್ಷ ಮಾಡಿರತಕ್ಕಂಥದ್ದು. ಇದಕ್ಕೆ ಇವರು ಏನು ಸಮರ್ಥನೆ ಕೊಡುತ್ತಾರೆಂದರೆ ಅವರು ಅಪೀಲ್ ಹಾಕಿದ್ದಾರೆನ್ನುವುದು. ನೀವು ಜಾಯಿಂಟ್ ಮೆಮೋ ಹಾಕಿದ್ದೀರೋ along with your government advocate. ಈ ರೀತಿ ಮಾಡಿರುವುದರಿಂದ ಸರ್ಕಾರ ಇದರಲ್ಲಿ ಸಂಪೂರ್ಣವಾಗಿ ಶಾಮೀಲಾಗಿದೆ ಎನ್ನುವಂತಹ ವಿಷಯದಲ್ಲಿ

ಯಾವುದೇ ಅನುಮಾನ ಉಳಿದಿಲ್ಲ. ಮೂರನೆಯದಾಗಿ ಸೆಕ್ಷನ್ 7ರ ಬಗ್ಗೆ ಡಿಸ್‌ಪ್ಯೂಟ್ ಉಳಿದಿಲ್ಲ. ಅವನು ಕೋರ್ಟ್‌ನಲ್ಲಿ ಏನಾದರೂ ಹಾಕಿ ಕೊಳ್ಳಬಹುದು. ಕೋರ್ಟ್ ತೀರ್ಮಾನದಂತೆ ನೀವು ಹೋಗಿದ್ದೀರಿ ಎಂದು ಹೇಳುವುದಾದರೆ ಕೋರ್ಟ್ ತೀರ್ಮಾನ ಪ್ರಕಾರ ಅವನಿಗೆ ಕೊರ್ಟ್‌ಗೆ ಜವಾಬ್ದಾರಿ ಕೊಟ್ಟು ಡೆಫಾಸಿಟ್ ಮಾಡಿ ಎಂದು ಕೋರ್ಟ್ ಹೇಳಿದಾದ ಮೇಲೆ ನೀವು ದಿನಾಂಕ: 27-3-97 ರಂದು ಈ ಒಂದು ಜಿ.ಓ. ಮಾಡತಕ್ಕಂಥ ಅವಶ್ಯಕತೆ ಇರಲಿಲ್ಲ. ಈ ಮೂರು ಪಾಯಿಂಟ್ಸ್‌ಗೆ ನೀವು ಉತ್ತರ ಹೇಳಲಿಲ್ಲ, ನೀವು ಸಮರ್ಥನೆ ಮಾಡಿಕೊಳ್ಳುತ್ತಾ ಇದ್ದೀರಿ ಸರ್ಕಾರ ಶಾಮೀಲಾಗಿದೆ ಎಂದು ಪ್ರತಿಭಟಿಸಿ ನಾನು ಇಲ್ಲಿ ಧರಣಿ ಕುಳಿತುಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಶ್ರೀರಾಮರೆಡ್ಡಿಯವರು ಬಾವಿಯಲ್ಲಿ ಧರಣಿ ಕುಳಿತರು)

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ್): ಅಧ್ಯಕ್ಷರೆ, ನಮ್ಮ ಸಂಸದೀಯ ವ್ಯವಹಾರಗಳ ಸಚಿವರಾದ ಮಾನ್ಯನಾಣಯ್ಯನವರು ಹೇಳುವಾಗ ಒಂದು ಆತಂಕವನ್ನು ಹುಟ್ಟಿಸಿದರು. ಏಕೆಂದರೆ ಕೇವಲ ಇನಾಮ್ ಅಬಾಲಿಷನ್ ಆ್ಯಕ್ಟ್ ಒಂದೇ ಅಲ್ಲ, ಅಥವಾ ಕೇವಲ ಬಾಂಬೆ ಇನಾಮ್ ಅಬಾಲಿಷನ್ ಆ್ಯಕ್ಟ್ ಅಲ್ಲ ನಮ್ಮ ಕರ್ನಾಟಕ ಇನಾಮ್ ಅಬಾಲಿಷನ್ ಕೂಡ 2-3 ಇವೆ. ಇವತ್ತು ಸಿವಿಲ್ ಕೋರ್ಟಿಗೆ ಯಾವುದೇ ಕಾರಣದಿಂದ ಇನಾಮ್ ಜಮೀನಿನ ಹಕ್ಕನ್ನು ಇತ್ಯರ್ಥಮಾಡತಕ್ಕಂಥ ಅಧಿಕಾರ ಇಲ್ಲ. ಆರ್ಟಿಕಲ್ 226:227 'ಯಾವಾಗ ಬರುತ್ತದೆಂದರೆ ರೆವಿನ್ಯೂ ಅಪೆಲಟ್‌ಟ್ರಿಬ್ಯೂನಲ್ಲಿ ಆರ್ಡರ್ ಆದಮೇಲೆ they can invoke Article 226 and 227 before the High Court. ಇಲ್ಲಿ ಬಂದಿರತಕ್ಕಂಥದ್ದು ಏನೆಂದರೆ ಇವತ್ತು ಯಾವುದೇ ಇನಾಮುದಾರ ತನ್ನ ಹಕ್ಕು ಭಾದ್ಯತೆಗಾಗಿ ಏನಾದರೂ ಆತಂಕ ಉಂಟಾಗಿದೆ ಎಂದು ಹೇಳಿದರೆ ಅವನು ನೇರವಾಗಿ ರೆವಿನ್ಯೂ ಅಪಲೇಟ್ ಟ್ರಿಬ್ಯೂನಲ್‌ಗೆ ಹೋಗಬೇಕಾಗಿತ್ತು ಆದರೆ ಅವನು ಅದರ ವಿರುದ್ಧ ಹೋಗಿಲ್ಲ. ಸಿವಿಲ್ ಕೋರ್ಟ್‌ಗೆ ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟರೆ ನಾಳೆ ಪ್ರತಿಯೊಬ್ಬನೂ ಕೂಡ ಇನಾಮ್‌ದಾರ ತೀರ್ಮಾನ ಆಗಿರತಕ್ಕಂಥ ಎಲ್ಲಾ ಕೇಸ್‌ಗಳಲ್ಲಿ ಸಿವಿಲ್ ಕೋರ್ಟ್‌ಗೆ ಹೋಗುತ್ತಾರೆ. ಸರ್ಕಾರ ಏನು ಮಾಡಬೇಕೆಂದರೆ, ನಾನು ಉದಾಹರಣೆಗೆ ಹೇಳುತ್ತೇನೆ ನಮ್ಮ ಕರ್ನಾಟಕದ ಹಳೇ ಮೈಸೂರಿನ Personal (Miscellaneous) Inam Abolition Act ನಮ್ಮ ಸಾಗರ್ ತಾಲ್ಲೂಕಿನ ಗೌತಮಪುರ ಇನಾಮ್‌ನ್ನು ಅದೇ ಫಾರಸ್ಟ್‌ನಿಂದ ಪ್ರಶ್ನೆ ಬಂತು. ಸುಪ್ರೀಂ ಕೋರ್ಟಿನಲ್ಲಿ ಅಂದರೆ ಕಾನೂನು ಜಾರಿಗೆ ಬರುವುದಕ್ಕಿಂತ ಮುಂಚೆ ಯಾವುದಾದರೂ ಕಾಂಟ್ರಾಕ್ಟ್ ಎಕ್ಸಿಸ್‌ಟೆನ್ಸ್‌ನಲ್ಲಿ ಇದ್ದರೆ ಎಂದು ಅವು ವ್ಯಾಲಿಡ್ ಸುಪ್ರೀಂಕೋರ್ಟ್ ಹೇಳಿತು ಇದಕ್ಕೆ ನಾವು 1992ರಲ್ಲಿ ಒಂದು ತಿದ್ದುಪಡೆ ತಂದೆವು. 'Notwithstanding any decree, any agreement or anything' ಎಂದು ಅದನ್ನು ಓವರ್‌ಕಮ್ ಮಾಡುವುದಕ್ಕೋಸ್ಕರ ಸೆಕ್ಷನ್ ತಿದ್ದುಪಡಿ ತಂದೆವು, ಇವರೇ ಅವತ್ತು ಆಗ ಕಂದಾಯ ಸಚಿವರಾಗಿದ್ದರು. ಇವತ್ತು ನನಗೆ ಏನು ಅನುಮಾನ

ಬರುತ್ತದೆ ಎಂದು ಇವತ್ತು ಸಿವಿಲ್ ಕೋರ್ಟ್‌ನಲ್ಲಿ ಈ ವಿಷಯವನ್ನು ಇತ್ಯರ್ಥ ಮಾಡುವುದಕ್ಕೆ ಅಧಿಕಾರ ಇಲ್ಲ. ಇವತ್ತು ಇವರು ಜ್ಯೂರಿಸ್‌ಡಿಕ್ಷನ್ ಪ್ರಶ್ನೆ ಮಾಡಬೇಕಾದರೆ..

ಅಧ್ಯಕ್ಷರು: ಜ್ಯೂರಿಸ್ಡಿಕ್ಷನ್ ಇಲ್ಲ ಎನ್ನುವ ಮಾತನ್ನಾದರೂ ಕೋರ್ಟಿಗೆ ಹೋಗಿ it is not maintainable ಎಂದು ಹೇಳಬೇಕೋ ಬೇಡವೋ?

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ಅವರು ಹೇಳಬೇಕು, ಒಂದು ವೇಳೆ ಕೋರ್ಟ್..

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದಕ್ಕಿನ ಮುಂಚಿತವಾಗಿ ಈ ತರಾತುರಿಯಲ್ಲಿ ಏಕೆ ಬೇಕಾಗಿತ್ತು?

ಶ್ರೀ ಕಾಗೋಡು ತಿಮ್ಮಪ್ಪ: ಒಂದು ವೇಳೆ ಕೋರ್ಟ್‌ನವರು ಏನಾದರೂ ಎಂಟರ್‌ಟೇನ್ ಮಾಡಿಲ್ಲ, ಅಕ್ಸೆಫ್ಟ್ ಮಾಡಿಲ್ಲ ಎಂದರೆ let them go to the Supreme Court. ಒಂದು ವೇಳೆ ನಮ್ಮ ಕಾನೂನಿನಲ್ಲಿ ಲೆಕ್ಯೂನ್ ಇದ್ದರೆ we have to bring an amendment. We did it. ಕೋಟ್ಯಾಂತರ ರೂಪಾಯಿಗಳನ್ನು ಅರಣ್ಯಸಂಪತ್ತಿನಿಂದ ಉಳಿಸಬೇಕಾಗಿತ್ತು. ಅದು ಬಿಟ್ಟು ಬಿಟ್ಟು ಸುಮ್ಮನೆ ಸಿವಿಲ್ ಕೋರ್ಟ್‌ಗೆ ಹೋಗಿ ಅಲ್ಲಿ ವಾದ ಮಾಡಿಕೊಂಡು ಕುಳಿತರೆ?

ಅಧ್ಯಕ್ಷರು: ತಿಮ್ಮಪ್ಪನವರೆ, ನಮ್ಮಲ್ಲಿ administration of Justice it has been in a strange way. ತಾವು ಕಾರಿನಲ್ಲಿ ಅಥವಾ ಟೂ ವೀಲರ್‌ನಲ್ಲಿ ಡ್ರೈವ್ ಮಾಡಿಕೊಂಡು ಹೋಗುತ್ತಾ ಇದ್ದೀರಿ, ನೀವು ಕೇರಫುಲ್ ಆಗಿ ಹೋಗುತ್ತೀರಿ, ನಿಮಗೆ ಡ್ರೈವಿಂಗ್ ಲೈಸೆನ್ಸ್ ಇದ್ದರೆ, ನಿಮಗೆ ಡ್ರೈವಿಂಗ್ ರೂಲ್ಸ್ ರೆಗ್ಯೂಲೇಷನ್ ಬಗ್ಗೆ ಗೊತ್ತಿದ್ದರೆ ಸಾಲದು, ನಿಮ್ಮ ವಿರುದ್ಧ ದಿಕ್ಕಿನಲ್ಲಿ ಬರುವವನಿಗೂ ಕೂಡ ಗೊತ್ತಿರಬೇಕಲ್ವೇ? ಅವನು ಬಂದು ಹೊಡೆದರೆ ನೀವು ಟ್ರೀಟ್‌ಮೆಂಟ್ ತೆಗೆದುಕೊಳ್ಳಬೇಕಾಗುತ್ತದೆ ಅಲ್ವೇ? ಈಗ ಲಿಟಿಗೆಂಟ್ಸ್ ಏನು ಮಾಡುತ್ತಾರೆ ಎಂದರೆ they deliberately drag to courts. They do these things. But, the government has no alternative, but to go and tell that particular that it has no jurisdiction and it is not maintainable, ಎಂದು ಹೇಳಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಹೌದು ಅವರು ಏನು ಹೇಳಿದ್ದಾರೆ ಅದು ನನಗೆ ಬೇಕಲ್ಲವೇ? ಇವತ್ತು ಅಲ್ಲದಿದ್ದರೂ ನಾಳೆ ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದಕ್ಕೆ ಗೊತ್ತಿಲ್ಲದಿದ್ದರೂ ಕೂಡ ಈ ಜಿ.ಓ.ಇಶ್ಯೂ ಮಾಡುವುದೇ ಅವಶ್ಯಕತೆ ಇರಲಿಲ್ಲ ಎನ್ನುವುದು ವಾದವಲ್ಲ..

ಅಧ್ಯಕ್ಷರು: ನೋಡೋಣ ಲೆಟ್ ಹಿಮ್ ಹ್ಯಾವ್ ಹಿಸ್‌ಸೇ ಈಗ ನೀವು ಒಬ್ಬರೇ ಇದ್ದೀರಿ ಅವರು ಹೊರಟು ಹೋಗಿ ಬಿಟ್ಟರು... ಒಂದ್ನಿಮಿಷ ಅವರು ಉತ್ತರ ಪೂರ್ತಿ ಮಾಡಲಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೆ, ಹಿಂದೆ ಒಂದು ಸಮಿತಿ ಆಗಿತ್ತು, ನಾನು ಈಗಾಗಲೇ ಜ್ಞಾಪಿಸಿದೆ ಆಗ ತಾವಿದ್ದಿರಿ. ನೀವು ಭೈರೇಗೌಡರು, ಹಾಗೂ ಚಂದ್ರೇಗೌಡರು ನೀವು ಮೂರು ಜನ ಆ ಸಮಿತಿಯ ಮುಂದೆ ಕೊಟ್ಟಿರತಕ್ಕ ವಿಚಾರವನ್ನು ನೋಡಿದಾಗ ಈಗ ತಾವು ಮಾತನಾಡತಕ್ಕ ಮಾತಿಗೂ ಆ ಹೊತ್ತು ತಾವು ಆ ಗ್ರ್ಯಾನೈಟ್ ಲೂಟಿ ಬಗ್ಗೆ ತಾವು ಎಷ್ಟು ಪ್ರಾಮಾಣಿಕವಾದ ರೀತಿಯಲ್ಲಿ ಈ ರಾಜ್ಯದಲ್ಲಿ ಗ್ರ್ಯಾನೈಟ್ ಲೂಟಿ ನಿರಂತರವಾಗಿ ನಡೆಯುತ್ತದೆ ಅದು ನಿಲ್ಲಬೇಕಾದರೆ ಏನು ಕಾರಣಗಳು ಕೊಟ್ಟು 4 ಜನ ಒಂದರಲ್ಲೇ ಸಹಿ ಮಾಡಿ ಸಮಿತಿಗೆ ಕೊಟ್ಟಿದ್ದೀರಿ. ಆ ನಂತರ ಇವೊತ್ತಿನ ದಿವಸ ತಮ್ಮ ಧೋರಣೆಯನ್ನು ನೋಡಿದಾಗ ಇವತ್ತು ತಾವು ಮಾಡಿದ್ದೇ ಸರಿ ಎನ್ನುವ ರೀತಿಯಲ್ಲಿ ತಮ್ಮ ಧೋರಣೆಯಲ್ಲಿ ಹೋಗುತ್ತಿದ್ದೀರಿ. ಪ್ರಾಮಾಣಿಕವಾಗಿ ತಾವು ಮಾಡಿರತಕ್ಕ ಆದೇಶವನ್ನು ಇವೊತ್ತಿನ ಪರಿಸ್ಥಿತಿಯಲ್ಲಿ ಅದನ್ನು ಹಿಂದೆ ತೆಗೆದುಕೊಳ್ಳಬೇಕು. ಈ ಗ್ರ್ಯಾನೈಟ್ ಲೂಟಿ 1973ರಿಂದ ನಡೆಯುತ್ತಿದೆ. ನಿರಂತರವಾಗಿ ನಡೆಯುತ್ತಿದೆ.

ಅಧ್ಯಕ್ಷರು: ನಾನು ಏನು ಹೇಳುತ್ತೇನೆಂದರೆ, ಅಬಕಾರಿಯಲ್ಲಿ ಸೆಕೆಂಡ್ಸ್, ಇರೀಗೇಷನ್ ನಲ್ಲಿ ಕ್ಲೇಮ್ಸ್, ಮತ್ತೆ ಈ ಗ್ರ್ಯಾನೈಟ್‌ನಲ್ಲಿ ಲೀಸ್ ತೆಗೆದುಕೊಳ್ಳುವುದು, ಹಾಗೂ ರೆವಿನ್ಯೂ ನಲ್ಲಿ ಡಿ-ನೋಟಿಫಿಕೇಷನ್ ಈ ತರಹದ ವಿಷಯಗಳು ಆಗಾಗ್ಗೆ ಚರ್ಚೆಗೆ ಬರುತ್ತಲೇ ಇವೆ. ಇದು ಈ ವ್ಯವಸ್ಥೆ ಹಾಗೂ ಸರ್ಕಾರ ಬಂದಾಗಿನಿಂದ ಇವೆ. ಇವು ಏಕಾಗುತ್ತದೆ? ಯಾರು ಮಾಡುತ್ತಾರೆ? ಗೊತ್ತಿಲ್ಲ. ಸುಳ್ಳು ಯಾವುದು ಸತ್ಯ ಯಾವುದು ಗೊತ್ತಿಲ್ಲ ಯಾರು ತಪ್ಪಿತಸ್ಥರು, ಯಾರು ನಿರಾಪರಾಧಿಗಳು ಏನೂ ಗೊತ್ತಾಗುವುದಿಲ್ಲ. ಆಗಿಂದಾಗ್ಗೆ ಬರುತ್ತಲೇ ಇರುತ್ತವೆ, ಇಲ್ಲಿದ್ದವರು ಅಲ್ಲಿಗೆ ಹೋಗುತ್ತಾರೆ, ಅಲ್ಲಿದ್ದವರು ಇಲ್ಲಿಗೆ ಬರುತ್ತಾರೆ. ಈ ಚರ್ಚೆ ಮಾತ್ರ ಇನ್ನೂ ನಿಂತೇ ಇಲ್ಲ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರವರ ಕಾಲದಲ್ಲಿ ಅವರೇ ಹೇಳುತ್ತಾರೆ, ಸರ್ಕಾರ ನಡೆಸತಕ್ಕಂಥವರು ಸಮರ್ಥನೆ ಮಾಡಿಕೊಳ್ಳಬೇಕು, ಇಲ್ಲವಾದರೆ ತಪ್ಪಿದ್ದರೆ ಒಪ್ಪಿಕೊಳ್ಳಬೇಕು.

ಅಧ್ಯಕ್ಷರು: ಅದು ಸರಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ಇಲ್ಲಿ ಕುಳಿತಾಗ ತಪ್ಪಾಗಿದೆ ಎಂದು ಹೇಳತಕ್ಕಂಥ ಧರ್ಮ ಇದೆ. ಕೇಳತಕ್ಕಂಥ ಕರ್ತವ್ಯ ಅವರದ್ದು ಇದೆ. ಅದನ್ನು ಬಿಟ್ಟು ನೀವು ಏನು ಮಾಡಿದ್ದೀರಿ ಎಂದು ಹೇಳಿದರೆ... ನೀವು ಆಗ ಕೇಳಿದ್ದರೆ ನಾವು ಹೇಳುತ್ತಿದ್ದೆವು.

ಅಧ್ಯಕ್ಷರು: ನಾನು ಯಾವಾಗಲೂ ಗೌರ್ನಮೆಂಟ್‌ನಲ್ಲಿ ಇದ್ದಿಲ್ಲ. ಈಗ ಇಲ್ಲಿ ಬಂದು ಕುಳಿತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧಿಕಾರ ಇರತಕ್ಕ ಪಕ್ಷದಲ್ಲಾದರೂ ಇದ್ದೀರಲ್ಲಾ. ಅದಕ್ಕೆ ಎಲ್ಲರೂ ರೆಸ್ಪಾನ್ಸಿಬಲ್.

ಶ್ರೀ ವಾಟಾಳ್ ನಾಗರಾಜ್: ಇದು 73 ರಿಂದ ನಿರಂತರವಾಗಿ ನಡೆಯುತ್ತಿದೆ. ಇದರ ಆತ್ಮ ಶೋಧನೆ ಒಂದು ಕಡೆ ಮತ್ತೊಂದು ಕಡೆ ಸಮಗ್ರವಾದ ತನಿಖೆಯನ್ನು ಪ್ರಾಮಾಣಿಕವಾಗಿ ನಡೆಸಿದರೆ ಯಾರ‍್ಯಾರು ಇದರಲ್ಲಿ ಭಾಗಿಗಳಾಗಿದ್ದರು ಏನೇನು ಆಗಿತ್ತು ಎಂಬುದೆಲ್ಲಾ ಹೊರಗೆ ಬರುತ್ತದೆ. ಇದರ ಬಗ್ಗೆ ಸಮಗ್ರವಾದ ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡುತ್ತಿದ್ದೇನೆ. ಮತ್ತೆ ನ್ಯಾಯಾಂಗ ತನಿಖೆ ಮಾಡುವುದರ ಜೊತೆಗೆ ಇದಕ್ಕೆ ಒಂದು ಟೈಂ ಲಿಮಿಟ್ ಅನ್ನು ಹಾಕಬೇಕೆಂದು ಒತ್ತಾಯ ಮಾಡುತ್ತೇನೆ. ನಾನು ಇದರ ಬಗ್ಗೆ ನಿರಂತರವಾಗಿ ಹೋರಾಟ ಮಾಡಿದ್ದೇನೆ. 1983ರಿಂದ ಆಗಿರುವ ಪ್ರಕರಣಗಳನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಲಿ. 1983ರಿಂದ ದೇವಸ್ಥಾನಗಳ ಕಲ್ಲಿನ ಲೂಟಿಯಾಗಿದೆ. ಪ್ರವಾಸಿ ಸ್ಥಳಗಳಲ್ಲಿ ಬೇಕಾದಷ್ಟು ಲೂಟಿಯಾಗಿದೆ. ಸೇತುವೆಗಳನ್ನು ಹಾಳು ಮಾಡಿದ್ದಾರೆ ಇದರ ಬಗ್ಗೆ ಪ್ರಾಮಾಣಿಕ ಚಿಂತನೆ ಯಾರಿಗೂ ಇಲ್ಲ. ತಾವು ಈ ಆದೇಶವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕೆಂದು ಇವತ್ತು ನಾನು ಧರಣ ಮಾಡುತ್ತಿದ್ದೇನೆ.

(ಮಾನ್ಯ ವಾಟಾಳ್ ನಾಗರಾಜ್ ಅವರು ವೆಲ್‌ನಲ್ಲಿ ಬಂದು ಕುಳಿತರು)

ಶ್ರೀ ಎಂ.ಶ್ರೀನಿವಾಸ್: ಯಾವ ರೀತಿ ಎಂದು ಹೇಳಿ ನಂತರ ಧರಣ ಕುಳಿತುಕೊಳ್ಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ. 5 ಸಾವಿರ ಕೋಟಿ ರೂಪಾಯಿ ಲೂಟಿಯಾಗಿದೆ ಎಂದು ಹೇಳಿದರು. ನಮ್ಮ ಸರಕಾರವಿದ್ದಾಗ ಲೂಟಿ ಯಾಗಿದೆಯೇ ನಿಮ್ಮ ಸರಕಾರವಿದ್ದಾಗ ಲೂಟಿಯಾಗಿದೆಯೇ ಎಂಬುದು ತಿಳಿಯುತ್ತದೆ. 1989 ರಿಂದಲೇ ಸಿಬಿಐ ತನಿಖೆ ಮಾಡಿ; ಇಲ್ಲವೇ 83 ರಿಂದ ಮಾನ್ಯ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗಿನಿಂದ ತನಿಖೆ ಮಾಡುವುದಾದರೆ ಅದಕ್ಕೂ ಸರಿ. 1973ರಿಂದ ಎಂದರೆ ಆಗ ನಾನು ಶಾಸಕನಾಗಿದ್ದೆ. ಆಗಲಾದರೂ ಸರಿ.

ಯಾವುದು ಸರಿ ಯಾವುದು ತಪ್ಪು ಎಂದು ತಿಳಿಯುತ್ತದೆ. ನಾವೇನು ಹೇಳಬೇಕೋ ಹೇಳುತ್ತೇವೆ. ಇಲ್ಲವಾದಲ್ಲಿ ಈ ಆದೇಶವನ್ನು ವಿತ್‌ಡ್ರಾ ಮಾಡುತ್ತೇವೆಂದು ಹೇಳಿ ಇದನ್ನು ಇಲ್ಲಿಗೇ ಇತ್ಯರ್ಥ ಮಾಡೋಣ.

ಶ್ರೀ ಶ್ರೀರಂಗದೇವರಾಯಲು: ಇದರ ಕೀರ್ತಿ ಎಲ್ಲಾ ಮಾನ್ಯ ಮದನಗೋಪಾಲ್ ಅವರಿಗೆ ಹೋಗಬೇಕು. ಅವರು ಜೆಮ್ ಗ್ರ್ಯಾನೈಟ್‌ನವರ ಪರ್ಮಿಟ್ ಕ್ಯಾನ್ಸ್‌ಲ್ ಮಾಡಿ ಅವರು ಎಲ್ಲವನ್ನೂ ಹೊರಗೆ ತಂದದ್ದಕ್ಕೋಸ್ಕರ ನಾವೆಲ್ಲರೂ ಟೀಕೆ ಮಾಡುತ್ತಿದ್ದೇವೆ. ಇದರ ಕೀರ್ತಿ ಅವರಿಗೇ ಸಲ್ಲಬೇಕು

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಕರ್ನಾಟಕಕ್ಕೇನು ಕಾಟವೋ ಗೊತ್ತಿಲ್ಲ ಅಲ್ಲಿ ವೀರಪ್ಪನ್ ಇಲ್ಲಿ ವೀರಮಣಿ. ನನಗಂತೂ ಗೊತ್ತಿಲ್ಲ. ಯಾರ್‍ಯಾರು ಕೆಟ್ಟ ಕೆಲಸ ಮಾಡುತ್ತಾರೆ ಅವರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುವುದಕ್ಕೆ ಕುಳಿತಿದ್ದೇವೆ. ಪರಿಣಾಮಕಾರಿಯಾದ ವಿಚಾರಗಳ ಬಗ್ಗೆ ನಾವು ಯೋಚನೆ ಮಾಡಲಿಲ್ಲ. ಯಾರು ಹಣ ಹೊಡೆದಿದ್ದಾರೆ ಇದರ ಕಡೆಗೆ ಸರ್ಕಾರದ ನಡವಳಿಕೆ ಏನು ರೆಲವೆಂಟ್ ಆಗಿದೆ ಅದರ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ನಾನೇನೂ ಕಾನೂನು ಪಂಡಿತನಲ್ಲ. ಆದರೆ ಕಾನೂನುಗಳ ಬಗ್ಗೆ ನನ್ನ ಅಕ್ಕ ಪಕ್ಕ ಮಾತನಾಡಿದಂತಹ ಎಲ್ಲಾ ಸ್ನೇಹಿತರ ವಿಚಾರಗಳನ್ನೂ ಸಂಗ್ರಹ ಮಾಡಿದಾಗ ಸರಕಾರ ತನ್ನ ಕಾರ್ಯಕ್ರಮವನ್ನು ಸರಿಯಾಗಿ ನಿರ್ವಹಣೆ ಮಾಡದೇ ಇರುವುದರಿಂದ ತಪ್ಪಾಗಿದೆ. ಅದನ್ನು ತಿದ್ದುಕೊಳ್ಳುವ ವ್ಯವಸ್ಥೆ ಮಾಡುವುದಕ್ಕೋಸ್ಕರ ನ್ಯಾಯಾಂಗ ತನಿಖೆ ಮಾಡಬೇಕೆಂದು ಒತ್ತಾಯಿಸಿ ನಾನೂ ಕೂಡ ಧರಣಿಯಲ್ಲಿ ಪಾಲ್ಗೊಳ್ಳುತ್ತೇನೆ.

(ಮಾನ್ಯ ಪುಟ್ಟಣ್ಣಯ್ಯನವರು ವೆಲ್‌ನಲ್ಲಿ ಬಂದು ಕುಳಿತರು)

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಸಭಾಧ್ಯಕ್ಷರೆ, ಸರಕಾರದ ವತಿಯಿಂದ ನಾವು ಈಗಾಗಲೇ ಸ್ಪಷ್ಟ ಮಾಡಿದ್ದೇವೆ. ಇದರಲ್ಲಿ ಯಾವುದೋ ಕಾರಣಕ್ಕೋಸ್ಕರ ಯಾರಿಗೋ ರಕ್ಷಣೆ ಕೊಡುವುದಕ್ಕೋಸ್ಕರ ಇದನ್ನು ಮಾಡಿದ್ದೇವೆಂದು ಹೇಳುವುದಾದರೆ ಆ ಜಮೀನನ್ನು ಸರಕಾರ ಕೈಗೆತ್ತಿಕೊಳ್ಳುವ ಕೆಲಸವನ್ನು ಮಾಡುತ್ತಿರಲಿಲ್ಲ. ಸರಕಾರಕ್ಕೆ ಬರತಕ್ಕಂತಹ ಹಣವನ್ನು ವಸೂಲಿ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತಿದ್ದೇವೆ. ಸರಕಾರದ ಪ್ರಾಮಾಣಿಕ ಕೆಲಸಕ್ಕೆ ವಿರೋಧ ಪಕ್ಷದಲ್ಲಿ ಕುಳಿತ ತಾವು ಮೆಚ್ಚಬೇಕು. ಅದನ್ನು ಬಿಟ್ಟು ಒಳ್ಳೆ ಕೆಲಸ ಮಾಡಿದಾಗಲೂ ಕೂಡ ನಮಗೆ ಶಹಭಾಸ್‌ಗಿರಿ ಕೊಡದಿದ್ರೆ ಹೇಗೆ? ಈ ಕೆಲಸ ಮಾಡಿದ್ದಕ್ಕೆ ವಿರೋಧ ಪಕ್ಷದಲ್ಲಿ ಕುಳಿತ ತಾವುಗಳು ಮೆಚ್ಚಬೇಕು. ರೈತರ ಜಮೀನನ್ನು ನಾವು ಉಳಿಸಿದ್ದೇವೆ. ಇದರಿಂದ ಬರತಕ್ಕಂತಹ ಹಣವನ್ನು ವಸೂಲಿ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

SRI KAGODU THIMMAPPA:- Communication of the

Central Government dated.27.8.96 and 9.9.96....

SRI M.C.NANAIAH:- We know about it. Let me make one thing clear. I will also see that all these documents will be made available to my friends now. ನಮ್ಮಲ್ಲಿರತಕ್ಕಂತಹ ದಾಖಲೆಗಳನ್ನೂ ಕೊಡುತ್ತೇವೆ ನಿಮಗೇನು ದಾಖಲೆ ಬೇಕು ಹೇಳಿ. Let them go through the whole thing now. ಸರಕಾರ ಒಂದು ಒಳ್ಳೆಯ ಕೆಲಸವನ್ನು ಮಾಡುತ್ತಿರುವಾಗ ಸರಕಾರದ ಮೇಲೆ ಒಂದು ಕಪ್ಪು ಚುಕ್ಕೆಯನ್ನು ಹಾಕಬೇಕೆಂಬ ಪ್ರಯತ್ನ ಪಟ್ಟರೆ ಅದು ಇತಿಹಾಸದ ಪುಟಗಳಲ್ಲಿ ಹೋಗುತ್ತಿರುವುದನ್ನು ಜನರು ನೋಡುತ್ತಾ ಬಂದಿದ್ದಾರೆ. ಇದನ್ನೂ ಅದೇ ರೀತಿ ನೋಡುವವರಿದ್ದಾರೆ. ಸರಕಾರಕ್ಕೆ ಬರಬೇಕಾಗಿರುವ ಹಣವನ್ನು ವಸೂಲಿ ಮಾಡುವಲ್ಲಿ ಕ್ರಮ ತೆಗೆದುಕೊಳ್ಳುವ ಕಡೆಗೆ ನಾವು ಗಮನಹರಿಸಬೇಕಾಗಿದೆ. ನಿನ್ನೆ ಕೂಡ ನಾವು ಆ ಕೇಸನ್ನು, within a period of 3 months or 4 months, we will try to see that the whole case is disposed off and it is the responsibility of the Government to see that the Government order is sustained now. ಇಂತಹ ಹಿನ್ನೆಲೆಯಲ್ಲಿ ನಾವು ಯಾರಿಗೂ ರಕ್ಷಣೆ ಕೊಡುವುದು ಅವಶ್ಯಕತೆ ಇಲ್ಲ. ಬೇಕಾದಷ್ಟು ಆಪಾದನೆ ನಮ್ಮಮೇಲೆ ಮಾಡಿದರು. ನಮ್ಮ ಸರಕಾರ ಶಾಮೀಲಾಗಿದೆ ಅವ್ಯವಹಾರ ಮಾಡಿದ್ದಾರೆಂದು ಹೇಳಿದರು. ಇಷ್ಟರ ಮಟ್ಟಿಗೆ ಇಷ್ಟು ಸಮಗ್ರವಾದ ವಿಚಾರಗಳನ್ನು ಸದನದ ಮುಂದಿಟ್ಟು ನಾವು ಮಾಡುತ್ತಿರತಕ್ಕಂತಹ ಕೆಲಸವನ್ನು ಹೇಳಿಯಾದ ಮೇಲೆ ಕೂಡ ಇನ್ನು ಮುಂದೆ ಮಾಡುವುದಕ್ಕೆ ಇರುವ ಬಗ್ಗೆ ಸರಕಾರದ ವತಿಯಿಂದ ನಾನು ಭರವಸೆ ಕೊಡುತ್ತೇನೆಂದು ಹೇಳಿಯಾದ ಮೇಲೆ ಕೂಡ ನೀವೇನಾದರೂ ಇದರಲ್ಲಿ ಎಲ್ಲಿಯಾದರೂ ತಪ್ಪನ್ನು ಹುಡುಕಿ ಸರಕಾರದ ಮೇಲೆ ಆರೋಪವನ್ನು ಮಾಡಬೇಕೆಂದು ಹೊರಟಾಗ ಇದರಲ್ಲಿ ದುರುದ್ದೇಶ ಇದೆ ಸದುದ್ದೇಶವಿಲ್ಲವೆಂದು ಹೇಳಬಯಸುತ್ತೇನೆ. ತಮ್ಮ ಮೂಲಕ ತಮ್ಮ ಸ್ನೇಹಿತರಿಗೆ ಮನವಿ ಮಾಡುತ್ತೇನೆ. ಮಾನ್ಯ ಸ್ನೇಹಿತರಾದ ಪುಟ್ಟಣ್ಣಯ್ಯನವರಿಗೆ, ಮಾನ್ಯ ರೆಡ್ಡಿಯವರಿಗೆ ಮನವಿ ಮಾಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾನು ಹೇಳಿದ ಪಾಯಿಂಟಿಗೆ ನೀವು ಈಗಲೂ ಉತ್ತರ ಹೇಳಲಿಲ್ಲ

(ಮಾನ್ಯ ಸದಸ್ಯರಾದ ಶ್ರೀ ಜಿ.ವಿ.ಶ್ರೀ ರಾಮರೆಡ್ಡಿಯವರು ವೆಲ್‌ನಲ್ಲಿ ಬಂದು ಕುಳಿತರು)

ಶ್ರೀ ಎಂ.ಸಿ.ನಾಣಯ್ಯ: ಆಗಲೇ ಉತ್ತರ ಹೇಳಿಬಿಟ್ಟೆ. All your 3 points, I have answered. ಇಷ್ಟೇ ತೀರ್ಮಾನ. ಸರಕಾರ ಮಾಡಿರತಕ್ಕಂತಹ ತೀರ್ಮಾನ ಯಾವುದು ಇದೆ, ಆ ತೀರ್ಮಾನದಲ್ಲಿ ನಾನೇನು ಲೋಪವನ್ನು ಕಂಡಿಲ್ಲ. ಆದರೂ

ಇವರು ಎತ್ತಿರತಕ್ಕಂತಹ ಸಮಗ್ರವಾದ ವಿಚಾರ ಯಾವುದು ಇದೆ, ಅದರ ಕಡೆಗೆ ಪುನಃ ಒಂದು ಬಾರಿ ಅಧಿಕಾರಿಗಳನ್ನು ಕರೆಸಿ ಇಲಾಖೆ ಜೊತೆ ಮಾನ್ಯ ಸಚಿವರಾದ ಜಯರಾಮರೆಡ್ಡಿ ಅವರ ಜೊತೆ ಚರ್ಚೆ ಮಾಡಿ ಸರಕಾರ ಕಾನೂನು ಪ್ರಕಾರವಾಗಿ ಎಲ್ಲಿಯಾದರೂ ನಾವು ಎಡವಿದ್ದೇವೆಂದು ನಮ್ಮ ಮನಸ್ಸಿಗೆ ಮನವರಿಕೆಯಾದರೆ ಆಗ ಅದರ ಬಗ್ಗೆ ಗಮನ ಕೊಡುತ್ತೇವೆ. ಕಾನೂನಿನಲ್ಲಿ ನಾನಂತೂ ನೋಡಿದ್ದೇನೆ, ಇರುವ ದಾಖಲೆಗಳನ್ನು ನೋಡಿಯಾದಮೇಲೆ ನಾವು ಎಲ್ಲೂ ಎಡವಿಲ್ಲ. ಆದರೂ ಪುನಃ ಒಂದು ಬಾರಿ ಚರ್ಚೆ ಮಾಡುತ್ತೇವೆ ತಾವು ಎತ್ತಿರತಕ್ಕಂತಹ ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಕೂಡ ತರುತ್ತೇವೆ. ಎಲ್ಲಿಯಾದರೂ ಕಾನೂನಿನ ಲೋಪವಾಗಿದ್ದಿದ್ದರೆ ಅದನ್ನು ತಿದ್ದತಕ್ಕಂತಹ ಜವಾಬ್ದಾರಿಕೆ ಸರಕಾರದ ಮೇಲೆ ಇದೆ ಎಂದು ಹೇಳಿ ಪುನಃ ಇದನ್ನು ಪರಿಶೀಲನೆ ಮಾಡುತ್ತೇವೆ, ಇಲ್ಲವೆಂದು ಹೇಳಲಿಕ್ಕೆ ತಯಾರಿಲ್ಲ. We are prepared to look into that. But, the interest of the government is to get the money as much as possible. ಹಣ ಹೋಗುತ್ತಿರತಕ್ಕಂಥ ಸಂದರ್ಭದಲ್ಲಿ ನಾವು ಅವರಿಂದ ಹತ್ತೂವರೆ ಕೋಟಿ ರೂಪಾಯಿಯನ್ನು ನಾವು ಅವರಿಂದ ತೆಗೆದುಕೊಂಡಿದ್ದೇವೆಂದು ಹೇಳಿದರೂ ಕೂಡ ನೀವು ಅದರ ಮೇಲೆ ಯಾವುದೋ ಒಂದು ದೃಷ್ಟಿಕೋನವನ್ನು ಬೀರಿ ಇಲ್ಲಿ ನಡೆದಿದೆ ಎಂದು ಹೇಳುವಂತಹ ಮಾತನಾಡಬೇಡಿ. ಮಾನ್ಯ ರೆಡ್ಡಿಯವರೇ ನಿಮ್ಮ ಪ್ರಾಮಾಣಿಕ ಅನಿಸಿಕೆಯನ್ನು ಇಲ್ಲಿ ಹೇಳಿದ್ದೀರಿ. ನಿಮ್ಮ ಹತ್ತಿರ ಕೆಲವು ದಾಖಲೆಗಳು ಮಾತ್ರ ಇದೆ. ಆದರೆ ಪೂರ್ತಿ ದಾಖಲೆಗಳನ್ನು ನಾನೇ ಕೊಡುತ್ತೇನೆ ಬನ್ನಿ ಕುಳಿತುಕೊಳ್ಳೋಣ. ನೀವು ನನ್ನನ್ನು ಇಲ್ಲವೇ ನನ್ನ ಮಿತ್ರರನ್ನು ಕನ್ ವಿನ್ಸ್ ಮಾಡಿ. ಕಾನೂನಿನಲ್ಲಿ ಲೋಪ ಇದ್ದರೆ ನಾವು ಅದನ್ನು ತಿದ್ದುಕೊಳ್ಳುತ್ತೇವೆ. ಈಗ ಇರತಕ್ಕಂತಹ ದಾಖಲೆಯಲ್ಲಿ ಖಂಡಿತವಾಗಿ ನಾವು ಲೋಪವನ್ನು ಮಾಡಿಲ್ಲ. ಸಿ.ಬಿ.ಐ.ಗೆ. ವಹಿಸುವುದಾಗಲೀ ಜಂಟಿ ಸದನ ಸಮಿತಿ ಮಾಡುವುದಾಗಲೀ ಅವಶ್ಯಕತೆ ಇಲ್ಲ. ನಮ್ಮ ಸರಕಾರ ತೆಗೆದುಕೊಂಡಿರುವ ತೀರ್ಮಾನದಿಂದ ಜಮೀನನ್ನು ಉಳಿಸತಕ್ಕಂತಹ ಪ್ರಯತ್ನವನ್ನು ಮಾಡಿದ್ದೇವೆ ಹಿಂದೆ ಈ ಕೆಲಸವನ್ನು ಯಾರೂ ಮಾಡಿರಲಿಲ್ಲ. ಅದನ್ನು ನಾವು ಮಾಡಿದ್ದೇವೆ. ಇನ್ನೊಬ್ಬರಿಗೆ ರಕ್ಷಣೆ ಕೊಡುವ ಜವಾಬ್ದಾರಿಕೆ ನಮ್ಮ ಮೇಲೆ ಬರುವುದಿಲ್ಲ. ವಿರೋಧ ಪಕ್ಷದಲ್ಲಿ ಕುಳಿತಾಗ ನೀವು ಇದನ್ನು ಮಾಡಬೇಕು. ನಾವು ಇಷ್ಟನ್ನು ಹೇಳಿಯಾದಮೇಲೆ ಅವರ ಮನಸ್ಸಿಗೆ ಸಮಾಧಾನವಾಗಿದೆ, ಅದು ನನಗೆ ಗೊತ್ತಿದೆ. ಆದರೆ ನೀವು offence is the best policy, ಎಂದು ಹೊರಟರೆ ಹೇಗೆ? ಹೃದಯದಿಂದ ಬಂದಾಗಲೇ ಬಾಯಿ ಮುಖಾಂತರ ಬರುವುದು. ಮತ್ತೆ ಹೃದಯದಿಂದ ಬರದೇ ಹೋದರೆ ಬಾಯಿ ಮುಖಾಂತರ ಬರುತ್ತದೆಯೇ? ಒಳ್ಳೆಯ ತಮಾಷೆಯಾಯಿತಲ್ಲಾ. ನನ್ನ ಮಾತೆಲ್ಲಾ ಹೃದಯದಿಂದ ಬಾಯಿ ಮುಖಾಂತರ ಬರುತ್ತದೆ. ಮತ್ತೆ ಬಾಯಿಯಲ್ಲಿ ಒಂದು, ಹೃದಯದಲ್ಲಿ ಒಂದು ಇಟ್ಟು ಮಾತನಾಡುವುದು ಏಕೆ? ಆದ್ದರಿಂದ ಈ ಒಂದು ಬೇಡಿಕೆ ಯಾವುದು ಇದೆ, ಆ

ಬೇಡಿಕೆಯನ್ನು ಸರ್ಕಾರದ ವತಿಯಿಂದ ನಾವು ಒಪ್ಪುವುದಿಲ್ಲ. ಆದರೆ ಪರಿಶೀಲನೆ ಮಾಡುತ್ತೇವೆ, ಕಾನೂನಿನಲ್ಲಿ ನಾವೇನಾದರೂ ಲೋಪ ಮಾಡಿರುವುದು ಅವರು ಹೇಳಿರುವ ವಿಚಾರಗಳನ್ನು ಪುನಃ ಪರಿಶೀಲನೆ ಮಾಡಿದರೆ ಬಹುಶಃ ನಾವು ಖಂಡಿತವಾಗಿಯೂ ಅದನ್ನು ತಮ್ಮ ಗಮನಕ್ಕೂ ತರುತ್ತೇವೆ, ಸದನದ ಗಮನಕ್ಕೂ ತರುತ್ತೇವೆ. ಆದರೆ ನಾವು ಮಾತ್ರ ತಪ್ಪೆಸಗಿಲ್ಲ. ಪುನಃ ಪರಿಶೀಲನೆ ಮಾಡುವುದಕ್ಕೆ ನಿಮ್ಮ ವಿಚಾರಗಳು ಯಾವುದು ಉಂಟು, ಇಲಾಖೆಯ ಮುಖಾಂತರ, ಅಧಿಕಾರಿಗಳ ಮುಖಾಂತರ ಚರ್ಚೆ ಮಾಡುತ್ತೇವೆ. ಕೋರ್ಟಿನಲ್ಲಿರುವ ಕೇಸನ್ನು ಮಾತ್ರ ಅದನ್ನು ನಿಷ್ಠೆಯಿಂದ ಅದನ್ನು ವಹಿಸಿಯೇ ಆ ಒಂದು ಆಜ್ಞೆಯನ್ನು ಸ್ಥಿರೀಕರಿಸುವುದಕ್ಕೆ ಇರುವ ಪ್ರಯತ್ನವನ್ನು ನಾನು ನನ್ನ ಇಲಾಖೆಯಿಂದ ಮಾಡುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಷ್ಟು ಸಮಯವನ್ನು ತೆಗೆದುಕೊಂಡಿದ್ದೀರಿ. ಮಿತ್ರರು ಇನ್ನು ಮುಂದಕ್ಕೆ ತಾವು ದಯವಿಟ್ಟು ನಾವು ಸರ್ಕಾರದಿಂದ ಮಾತನಾಡುವಾಗ ವಿರೋಧ ಪಕ್ಷದ ನಾಯಕರು ಸ್ವಲ್ಪ ಮಟ್ಟಿಗೆ ನಿಮ್ಮ ಮಾತನ್ನು ಕೇಳಿಯಾದಮೇಲೆ ನಾವು ಹೇಳುವುದನ್ನು ಸೌಜನ್ಯದಿಂದ ಕೇಳುವುದನ್ನು ಕಲಿಯಬೇಕು. ಕಾರಣ ಏನಾಗುತ್ತದೆ ಎಂದರೆ ಮಾನ್ಯ ಸಭಾಧ್ಯಕ್ಷರು ಇವತ್ತೇನೋ ಶಾಂತತೆಯಿಂದ ನಾಣಯ್ಯ ಬಹಳ ಚೆನ್ನಾಗಿ ಮಾತನಾಡುತ್ತಾರೆ. ನಾಣಯ್ಯನವರು ಹಾಗೆ ಯಾವಾಗಲೂ ಮಾತನಾಡುವುದಿಲ್ಲ ಎಂದು ಹೇಳಿದರು. ಸಾರ್, ನಾನು ಯಾವಾಗಲೂ ಹೀಗೆಯೇ ಮಾತನಾಡುತ್ತೇನೆ. ಕೆಲವು ಸಂದರ್ಭಧಲ್ಲಿ ಇಂಟರ್‌ಫಿಯರೆನ್ಸ್ ಬಂದಾಗ ಆ ರೀತಿಯಾಗುತ್ತದೆ. ಇವತ್ತು ಏನಾಯಿತು ಎಂದರೆ all of them are fighting against the Government Offence is the best policy ಎಂದು ನಾನು ಏಕೆ ಒಪ್ಪಿಕೊಳ್ಳಬೇಕು? ಅಫೆನ್ಸ್ ಅಲ್ಲ. we are on right lines ಎಂದು ಹೇಳಿ ತಮ್ಮ ಸಲಹೆಯನ್ನು ನಾನೂ ಕೂಡ ಒಪ್ಪುತ್ತಿದ್ದೇನೆ. ಇನ್ನು ಮುಂದಕ್ಕೂ ಕೂಡ ಇದೇ ರೀತಿಯ ಸಲಹೆಯನ್ನು ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು: ಇಂಥ ಸನ್ನಿವೇಶನದಲ್ಲಿ ನೀವು ಈ ರೀತಿ ನಡೆದುಕೊಂಡರೆ ಸಾಕು. ಬೇರೆ ಮಾಮೂಲಾಗಿ ಇರಿ. ಏನೂ ತೊಂದರೆ ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬಹಳ ಶಾಂತ ರೀತಿಯಿಂದ ಅವರು ಹೇಳಿದಂಥ ಮಾತನ್ನು ಕೇಳಿದ್ದೇವೆ.

ಅಧ್ಯಕ್ಷರು: ನಾಯಕರೇ, ಬೇಗ ಕನ್‌ಕ್ಲೂಡ್ ಮಾಡೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ನಾವು ಪದೇ ಪದೇ ಅದನ್ನೇ ಹೇಳಿದರೆ ಬೇಸರವಾಗುತ್ತದೆ. ಆದರೆ ಅವರು ಸರಿಯಾಗಿ ಇದರ ಬಗ್ಗೆ ಮೊದಲೇ ಯೋಚನೆ ಮಾಡಬೇಕಿತ್ತು. ನಾವು ಹೇಳುವುದು ಇಷ್ಟೇ ಡೆಪ್ಯುಟಿ ಕಮೀಷನರ್, ಬಿಜಾಪುರ, ಅವರು ನೋಟಿಫೈಡ್ ಮಾಡಿದ್ದು as per Section 7 read with

Section 4 of Bombay Personal Inams Abolition Act, 1952; in respect of that, 700 ಎಕರೆ, ಅದರ ಕೆಳಗೆ ಮಾಡಿದ್ದು ಸುಪ್ರೀಂ ಕೋರ್ಟ್‌ವರೆಗೆ ಹೋದಮೇಲೆ ಅದು ಎತ್ತಿ ಹಿಡಿಯಲಾಯಿತು. ಆದರೆ ಸುಪ್ರೀಂ ಕೋರ್ಟ್‌ನವರು ಇಲ್ಲಿ ಹೈಕೋರ್ಟ್‌ನಲ್ಲಿ ಏನು ಜಮೀನಿನ ಬಗ್ಗೆ ಅಥವಾ ಓನರ್‌ಷಿಫ್ ಬಗ್ಗೆ ಏನು ಮಾತನ್ನು ಹೇಳಿದರೋ ಆ ಮಾತನ್ನು ಅವರೂ ಕೂಡ ಎತ್ತಿ ಹಿಡಿದರು. ಆದರೆ ಇವರು ಅನಾವಶ್ಯಕವಾಗಿ ಯಾವ ಇನಾಂ ಅಬಾಲಿಷನ್ ಆ್ಯಕ್ಟ್‌ನಲ್ಲಿ ಸಿವಿಲ್ ಜಡ್ಜ್ ಕೋರ್ಟಿಗೆ ಜ್ಯೂರಿಸ್‌ಡಿಕ್ಷನ್ ಇಲ್ಲವೋ ಅಂಥ ಕಡೆ ಇವತ್ತು ವಾದವನ್ನು ನಡೆಸಿಕೊಂಡು ಪುನಃ 27-3-97ಕ್ಕೆ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸುವ ಅವಶ್ಯಕತೆ ಇಲ್ಲ. ಇದು ಬಂದಿದ್ದು ಇಲ್ಲಿಯೇ? ಯಾವಾಗ ನಿಮಗೆ ಗೊತ್ತಿತ್ತು, ಅವರಿಗೆ ಗೊತ್ತಿದ್ದಮೇಲೆ 27-3-97ಕ್ಕೆ ಈ ಜಿ.ಓ.ನ್ನು ಏಕೆ ಹೊರಡಿಸಿದ್ದೀರಿ ಎನ್ನುವುದು ನಮಗೆ ಮುಖ್ಯ. ಅದಕ್ಕೇನೂ ಉತ್ತರವಿಲ್ಲ. ಅವರು ಹತ್ತು ಕೋಟಿ ರೂಪಾಯಿ ಬರಬೇಕೆನ್ನುತ್ತಾರೆ. ನೂರು ಕೋಟಿ ಬರುವಾಗ ಹತ್ತು ಕೋಟಿ ರೂಪಾಯಿ ರಿಯಾಯಿತಿ ಕೊಟ್ಟರೆ ಅವನಿಗೇ ಉಪಕಾರ ಮಾಡಿದಂತೆ ಹೊರತಾಗಿ ನೀವು ರಾಜ್ಯದ ಜನರ ಮೇಲೆ ಅಥವಾ ರಾಜ್ಯದ ಬೊಕ್ಕಸಕ್ಕೆ ಏನಾದರೂ ಸಹಾಯ ಮಾಡಿದಂತೆ ಅಲ್ಲ ಅದು. ಮೂರನೆಯದು ಏನೆಂದರೆ ಯಾವಾಗ ಮ್ಯಾಂಡೇಟರಿ ಪ್ರಾವಿಷನ್ ಇವತ್ತು ನಮ್ಮ ಕರ್ನಾಟಕ ಮೈನರ್ ಮಿನರಲ್ಸ್ ಕನ್‌ಸೆಷನ್ ರೂಲ್ಸ್‌ನಲ್ಲಿ ಅದರಲ್ಲೂ ಕೂಡ 8 (ಬಿ) ಯಲ್ಲಿ ನಿಮಗೆ ಆಲ್ಟರ್ ಮಾಡುವ ಅಧಿಕಾರ ಇಲ್ಲ. ಮ್ಯಾಂಡೇಟರಿ ಪ್ರಾವಿಷನ್; ಆ್ಯಕ್ಷನ್ ಮಾಡಲೇಬೇಕು. ಅದನ್ನೂ ಕೂಡ ನೀವು ಮಾಡಲಿಲ್ಲ. ಆದರೆ ಇವತ್ತು ನೀವು ಅದನ್ನು ಕೂಡ ತಳ್ಳಿ ಹಾಕಿದಿರಿ. ಅದಕ್ಕೆ ತಾವು ಮಾತನಾಡುವಾಗ ಹೇಳಿದಿರಿ, ಹಿಂದಿನ ಸರ್ಕಾರ ಕೂಡ ಈ ಜಮೀನು ಉಳಿಸಿಕೊಳ್ಳುವ ಪ್ರಯತ್ನ ಮಾಡಲಿಲ್ಲ, ನಾವು ಮಾತ್ರ ಮಾಡಿದ್ದೇವೆ ಎಂದು. ಹೌದಾ? ಅಂದರೆ ಹಿಂದಿನ ಸರ್ಕಾರವು ತಪ್ಪೆಸಗಿದ್ದರೆ ಅವರಿಗೂ ಶಿಕ್ಷೆಯಾಗಲಿ. ತಾವು ತಪ್ಪು ಮಾಡಿದ್ದರೆ ಈ ಮೂರು ವರ್ಷದಲ್ಲಿ ಮತ್ತು ಈ ಒಂದು ಗೌರ್ನಮೆಂಟ್ ಆರ್ಡರ್ ಪ್ರಕಾರ ಅದೂ ಹೊರಗೆಬರಲಿ ಅದಕ್ಕಾಗಿಯೇನಾನು ಹೇಳಿದ್ದು. ಬೇಕಾದರೆ ಆ ಪೀರಿಯಡ್‌ನ್ನು ಸೇರಿಸಿಕೊಂಡು ನೀವು ಸಿಬಿಐ ಎನ್‌ಕ್ವೈರಿ ಮಾಡಿ. ನಿಮಗೇನು ತಾಪತ್ರಯ ಬಂತು. ಈಗ ನಾವು ಒಪ್ಪಿಕೊಳ್ಳುತ್ತಿದ್ದೇವಲ್ಲಾ. ನಮ್ಮ ಸರ್ಕಾರ ತಪ್ಪು ಮಾಡಿದ್ದರೆ, ನಾವು ತಪ್ಪು ಮಾಡಿದರೆ ಬೇಕಾದರೆ ಅಲ್ಲಿಂದ ಹಿಡಿದು ಇಲ್ಲಿಯತನಕವೂ ಎಲ್ಲರನ್ನೂ ಕರೆಸಿಬಿಡಿ. ಆಮೇಲೆ ಈ ಆರ್ಡರ್ ಹೊರಡಿಸಿರುವುದು ಒಂದು ಆಮೇಲೆ ಕೇಂದ್ರಸರ್ಕಾರದಿಂದ ಏನು ಲೆಟರ್ ಬಂದಿದೆ ನೋಡಿ, ಅದರ ಬಗ್ಗೆ ಕೂಡ ಎನ್‌ಕ್ವೈರಿಯಾಗಬೇಕು. ಕೇಂದ್ರಸರ್ಕಾರದ ಲೆಟರ್ ಏನಿದೆ, ಮಾನ್ಯ ಮಂತ್ರಿಗಳಿಗೆ ನಾನು ಗಮನಕ್ಕೆ ತರುತ್ತಿದ್ದೇನೆ, The Government of India vide their communication dated 27.8.96, 9.9.96. ಈ ಲೆಟರ್ ಯಾರ ಒತ್ತಾಯದ ಮೇರೆಗೆ ಬಂತು? ಎಲ್ಲಿಂದ ಬಂತು? ಯಾರು ಈ ಲೆಟರ್ ಹೇಳಿದರು ಎನ್ನುವುದೂ ಕೂಡ ಅದರಲ್ಲಿ ಶಾಮೀಲಾಗಬೇಕು. 9-9-96 letter

communicated that suspension of mining lease would render investment insecure and operations uncertain and that the established export market would put to loss ಎನ್ನತಕ್ಕಂಥದ್ದು ಪ್ರಿಯಾಂಬಲ್‌ನಲ್ಲಿ ಸೇರಿಸಿ ಈ ಪದಗಳನ್ನು ಉಪಯೋಗ ಮಾಡಿ ಅಲ್ಲಿಂದ ಕಮ್ಯುನಿಕೇಷನ್ ಏನು ಬಂತಲ್ಲಾ, ಆ ಕಮ್ಯುನಿಕೇಷನ್ ಯಾರ ಒತ್ತಡದ ಮೇಲೆ ಬಂತು, ಏಕೆ ಬಂತು? ಅದು ಬಂದಮೇಲೆಯೇ ಈ ಆರ್ಡರನ್ನು ಇಸ್ಯೂ ಮಾಡುವ ಅವಶ್ಯಕತೆ ಏನಿತ್ತು ಎನ್ನುವುದು ಇದೆ. ಯಾವಾಗ ಈ ಮಾತುಗಳಿಗೆ ಅವರು ಬೆಂಬಲ ಕೊಡುತ್ತಿಲ್ಲ; ಮತ್ತು ಮುಂದೆ ಏನು ಹೇಳುತ್ತಾರೆ, taking note of this ಯಾವುದು ಎಂದರೆ ಮೇಲಿನದ್ದು Government of India vide their communication date.27.8.96 and 9-9-96. Taking note of this and also after deliberating with M/s. Gem Granites, the request of the Company was examined in all its aspects and reluctantly, the following orders were passed. ಅದಕ್ಕಾಗಿ ನಾನು ಹೇಳುವುದು ಏನೆಂದರೆ ಯಾವಾಗ ನೀವು ಎಲ್ಲವನ್ನೂ ಒಪ್ಪಿಕೊಂಡು ಅವರು ಹೇಳಿದ ಮಾತಿಗೆ ನೀವು ಬೆಂಬಲ ಕೊಟ್ಟು ಇವತ್ತು ಇದನ್ನು ಮಾಡಿದ್ದೀರಿ ಎಂದರೆ ಖಂಡಿತವಾಗಿಯೂ ನಾವು ಹೇಳಬೇಕಾಗುತ್ತದೆ. ಅದಕ್ಕೆ ನೀವು ರೂಲ್ಸ್ ವಯಲೇಟ್ ಮಾಡಿದ್ದೀರಿ, ಕಾನೂನನ್ನು ವಯಲೇಟ್ ಮಾಡಿದ್ದೀರಿ. ಜ್ಯೂರಿಸ್‌ಡಿಕ್ಷನ್ ಇರಲಾರದ ಕಡೆಯಲ್ಲಿ ನೀವು ಕೇಸನ್ನು ಹಾಕಿ ಅದನ್ನು ತಳ್ಳುತ್ತಿದ್ದೀರಿ, ಇದಕ್ಕಾಗಿ ಈ ಜೆಮ್ ಗ್ರಾನೈಟ್‌ನವರು ಇನ್‌ಫ್ಲೂಯೆನ್ಸ್‌ನಲ್ಲಿ ಬಂದು ಈ ಒಂದು 27-3-97ರ ಆರ್ಡರನ್ನು ಹೊರಡಿಸಿದ್ದೀರಿ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಅದಕ್ಕೆ ಅವರು ಒಪ್ಪಿದ್ದಾರೆ. ಆದರೂ ಕೂಡ ನಾವು ಜಮೀನು ಉಳಿಸಿದ್ದೇವೆ ಎಂದು ಹೇಳಿಕೊಂಡು ಹೋಗುತ್ತಿದ್ದಾರೆ. ಯಾವಾಗ ಈ ಎನ್‌ಕ್ವೈರಿಗೆ ಅವರು ಒಪ್ಪುವುದಿಲ್ಲ ಎಂದರೆ ನಾವು ನಮ್ಮ ಮುಂದೆ ಯಾವ ಹಾದಿ ಇಲ್ಲ. ಪ್ರಜಾಪ್ರಭುತ್ವದಲ್ಲಿ ಆರ್ಗ್ಯುಮೆಂಟ್ ಮಾಡುತ್ತೇವೆ, ಅದನ್ನೂ ಅವರು ತಳ್ಳಿಹಾಕುತ್ತಾರೆ. ನಾವು ಅನೇಕ ನ್ಯೂನತೆಗಳನ್ನು ತೋರಿಸುತ್ತೇವೆ. ಅದನ್ನೂ ತಳ್ಳಿಹಾಕುತ್ತಾರೆ. ಎಲ್ಲಾ ಮಾಡಿದ್ದು ಸರಿ ಇದೆ ಎಂದು ಅವರು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಈಗೇನು ಮಾಡಬೇಕು ಅಧ್ಯಕ್ಷರೇ. ತಾವು ಹೇಳಿ. ಇಂಥ ಮೊಂಡು ಸರ್ಕಾರದ ವಿರುದ್ಧ ನಾವು ಎಷ್ಟು ಎಂದು ವಾದ ಮಾಡುವುದಕ್ಕಾಗುತ್ತದೆ? ಅದಕ್ಕೆ ನಾವು ವಾಕ್‌ಔಟ್ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರುಗಳು ಸಭಾತ್ಯಾಗ ಮಾಡಿದರು. ಮತ್ತು ಬಾವಿಯಲ್ಲಿ ಶ್ರೀ ವಾಟಾಳ್ ನಾಗರಾಜ್ ಮತ್ತು ಶ್ರೀರಾಮರೆಡ್ಡಿಯವರು ಕುಳಿತಿದ್ದರು).

ಅಧ್ಯಕ್ಷರು: ಗುಲ್ಬರ್ಗ ಪರಿಷತ್ತಿನದ್ದು ಸ್ಟೇಟ್‌ಮೆಂಟ್ ಮಾಡುತ್ತೀರಾ? ಅವರು ವಾಕ್‌ಔಟ್ ಮಾಡಿ ವಾಪಸ್ ಬರುತ್ತಾರೆ. ಹೋಗಿ ಬಂದುಬಿಡಿ ಬೇಗ. ಮಾನ್ಯ

ವಾಟಾಳರೇ, ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ. ಅಲ್ಲಿ ಹೋಗಿ ಸ್ಥಳದಲ್ಲಿ ಕುಳಿತುಕೊಳ್ಳಿ.

(8) ಸಚಿವರ ಹೇಳಿಕೆ

ವಿಷಯ: ಗುಲ್ಬರ್ಗಾ ಜಿಲ್ಲಾ ಪಂಚಾಯತ್ ಅಧ್ಯಕ್ಷರ ಗೈರು ಹಾಜರಿಯಲ್ಲಿ ನಡೆದಿರತಕ್ಕ ಸಭೆಯ ನಡವಳಿಕೆ ಕುರಿತು.

+ ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಧರ್ಮಸಿಂಗ್‌ರವರು ನಿಯಮ 60ರ ಪ್ರಕಾರ ಎತ್ತಿರುವ ವಿಚಾರ ಗುಲ್ಬರ್ಗ ಜಿಲ್ಲಾ ಪಂಚಾಯಿತಿಯಲ್ಲಿ 23-8-97ರಂದು ನಡೆದಿರತಕ್ಕಂಥ ಸಭೆಯ ನಡವಳಿಕೆಗಳು ಅಧ್ಯಕ್ಷರ ಗೈರುಹಾಜರಿಯಲ್ಲಿ ಮಾಡಿದ್ದಾರೆ, ಅದು ಕಾನೂನು ರೀತಿ ನಡೆದಿಲ್ಲ ಎನ್ನುವ ವಿಚಾರವನ್ನು ಅವರು ಪ್ರಸ್ತಾಪಮಾಡಿದ್ದಾರೆ. ಇದು ಒಂದು ವಿಶೇಷ ಸಭೆಯನ್ನು ಕರೆದಿರುವುದು. ಏಪ್ರಿಲ್‌ನಲ್ಲಿ ಅಧ್ಯಕ್ಷರ ಚುನಾವಣೆಯಾಯಿತು ಜಿಲ್ಲಾ ಪಂಚಾಯಿತಿಯಲ್ಲಿ 20 ತಿಂಗಳ ಅವಧಿ ನಿಗದಿ ಮಾಡಿದಮೇಲೆ ಅದಾದಮೇಲೆ ಇಲ್ಲಿಯವರೆಗೂ ಕೂಡ ಸ್ಟಾಂಡಿಂಗ್ ಕಮಿಟಿಗಳು ರಚನೆಯಾಗಿಲ್ಲ. ಕೂಡಲೇ ಸ್ಟಾಂಡಿಂಗ್ ಕಮಿಟಿಗಳು ರಚನೆಯಾಗಬೇಕು. ಸರ್ಕಾರದಿಂದ ಆದೇಶ ಕೂಡ ಸ್ಟಾಂಡಿಂಗ್ ಕಮಿಟಿಗಳನ್ನು ಮಾಡಬೇಕು ಎಂದು ಹೇಳಿ ಜಿಲ್ಲಾ ಪಂಚಾಯಿತಿಗೆ ಆದೇಶ ಹೋಗಿದೆ. ಆದರೆ ಅದಕ್ಕನುಗುಣವಾಗಿ ಅಧ್ಯಕ್ಷರೇ ಇದನ್ನು ವಿಶೇಷ ಸಭೆಯನ್ನು ಕರೆಯಲಿಕ್ಕೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಸೂಚನೆ ಕೊಟ್ಟು ಕರೆಸಿದ್ದಾರೆ. ಅದರ ಜೊತೆಗೆ ಆ ಸಭೆ ನಡೆಯುವ ದಿನ ಪೋಲೀಸ್ ಬಂದೋಬಸ್ತ್ ಮಾಡಬೇಕು ಎಂದು ಕೂಡ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್‌ಗೆ ಅಧ್ಯಕ್ಷರೇ ಹೇಳಿದ್ದಾರೆ.

6.50 ಪಿ.ಎಂ

ಅದು ಆದಮೇಲೆ 23ನೇ ತಾರೀಖು ಪೊಲೀಸ್ ಬಂದೋಬಸ್ತನ್ನು ಮಾಡಿದ್ದಾರೆ. 11 ಗಂಟೆಗೆ ಸಭೆ ಪ್ರಾರಂಭ ಆಗುತ್ತದೆ, ಅವತ್ತು 87 ಜನ ಸದಸ್ಯರ ಪೈಕಿ 62 ಜನ ಸದಸ್ಯರು ಹಾಜರಾಗಿದ್ದರು, ಎಲೆಕ್ಷನ್ ಜಿಲ್ಲಾಪಂಚಾಯತ್ ಸದಸ್ಯರ ಜೊತೆಗೆ ಆ ಭಾಗದ ಜಿಲ್ಲೆಯ ಶಾಸಕರು, ಲೋಕಸಭಾ ಸದಸ್ಯರು, ತಾಲ್ಲೂಕು ಪಂಚಾಯತಿ ಅಧ್ಯಕ್ಷರುಗಳು ಮತ್ತು ಪಾರ್ಲಿಮೆಂಟ್ ಸದಸ್ಯರು, ಇವರೆಲ್ಲರೂ ಸಭೆಯಲ್ಲಿ ಸೇರಿರುತ್ತಾರೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಗೆ ಅವರಿಗೆ ಓಟ್ ಮಾಡುವ ಅಧಿಕಾರಿ ಇರುವುದಿಲ್ಲ, ಆದರೆ ಜಿಲ್ಲಾಪಂಚಾಯತಿಯಲ್ಲಿ ನಡೆಯತಕ್ಕಂಥ ಬೇರೆ ಎಲ್ಲಾ ಸಭೆಗಳಲ್ಲಿ ಮತ್ತು ಸಭೆಯ ನಡವಳಿಕೆಗಳಲ್ಲಿ, ಬೇರೆ ಎಲ್ಲಾ ತೀರ್ಮಾನಗಳಲ್ಲಿ ಅವರಿಗೆ ಓಟ್ ಮಾಡತಕ್ಕಂಥದ್ದು ಮತ್ತು ಭಾಗವಹಿಸತಕ್ಕಂಥ ಅಧಿಕಾರ ಇದೆ. ಹಾಗಾಗಿ ಅವತ್ತು ಶಾಸಕರೂ ಕೂಡ ಆ